
# ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ

(೨೦೧೭-೧೮ನೇ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಬಂಧ)


ಸಂಶೋಧಕರು

ನಾಗರಾಜ

ನೋಂದಣಿ ಸಂಖ್ಯೆ : ೧೬೦೧೦೮೦೩೦೦೦೭


ಮಾರ್ಗದರ್ಶಕರು

ಡಾ.ಸಿಎಸ್.ವಾಸುದೇವನ್

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬


೨೦೧೭-೧೮

# ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ

(೨೦೧೭–೧೮ನೇ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)


ಸಂಶೋಧಕರು

**ನಾಗರಾಜ**

ನೋಂದಣಿ ಸಂಖ್ಯೆ : ೧೭೦೧೦೮೦೩೦೦೦೭





ಮಾರ್ಗದರ್ಶಕರು

**ಡಾ.ಸಿ.ಎಸ್.ವಾಸುದೇವನ್**

ಪ್ರಾಧ್ಯಾಪಕರು



ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ,

ವಿದ್ಯಾರಣ್ಯ–೫೮೩ ೨೭೬

೨೦೧೭–೧೮

# ಮಾರ್ಗದರ್ಶಕರ ದೃಢೀಕರಣ ಪತ್ರ

**ನಾಗರಾಜ** ಅವರು **"ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ"** ಎಂಬ
ರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ
ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಸಂಪ್ರಬಂಧವನ್ನು
ಲ್ಲಿಸಿರುತ್ತಾರೆ.. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ
ಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

e. s. Vasudevan
ಮಾರ್ಗದರ್ಶಕರು
**(ಡಾ.ಸಿಎಸ್.ವಾಸುದೇವನ್)**
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಳ : ವಿದ್ಯಾರಣ್ಯ

ದಿನಾಂಕ : 20.08.2018


## ಸಂಶೋಧಕರ ಪ್ರಮಾಣ ಪತ್ರ

**“ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ”** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಪ್ರಾಧ್ಯಾಪಕರಾದ **ಡಾ.ಸಿಎಸ್.ವಾಸುದೇವನ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಅಧ್ಯಯನದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ:

(ನಾಗರಾಜ)
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಯ, ಹಂಪಿ
ವಿದ್ಯಾರಣ್ಯ ೫೮೩ ೨೭೬




ಕರ್ನಾಟಕ ನಕ್ಷೆ




ಲಿಂಗಸುಗೂರು ತಾಲೂಕು ನಕ್ಷೆ

# ಪರಿವಿಡಿ

# ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ

## ಪ್ರಸ್ತಾವನೆ

"ಈ ಪ್ರದೇಶ ತಿರುಳ್ಗನ್ನಡದ ನೆಲೆ, ನೃಪತುಂಗನ ನಾಡು-ಶರಣ-ದಾಸರ ಬೀಡು" ಎಂದು ರಾಯಚೂರು ಜಿಲ್ಲೆಯನ್ನು ಉದ್ದೇಶಿಸಿ ವಿದ್ವಾಂಸರಾದ ಬಿ.ಎಂ.ಶ್ರೀರವರು ಹೇಳಿದ ಮಾತು ನಿಜವಾಗಿದೆ[1]. ಈ ಜಿಲ್ಲೆಯು ಅನೇಕ ರೀತಿಯಲ್ಲಿ ವೈಶಿಷ್ಟತೆಯನ್ನು ಹೊಂದಿದೆ. ಅದರಲ್ಲೂ ಚಾರಿತ್ರಿಕವಾಗಿ ಇಡೀ ಭಾರತದ ಇತಿಹಾಸಕಾರರನ್ನು ತನ್ನೆಡೆಗೆ ಸೆಳೆದ ಕೀರ್ತಿ ಈ ಜಿಲ್ಲೆಯ ಮಸ್ಕಿ ಪಟ್ಟಣಕ್ಕಿದೆ. ಕಾರಣ ಅದುವರೆಗೂ ಚರಿತ್ರೆಗಾರರಿಗೆ ಸವಾಲಾಗಿದ್ದ 'ದೇವನಾಂಪ್ರಿಯ' 'ಪ್ರಿಯದರ್ಶಿ' ಎಂಬ ಬಿರುದುಗಳು ಯಾರಿಗಿದ್ದವು? ಎಂಬ ಪ್ರಶ್ನೆಗಳಿಗೆ ಮೌರ್ಯ ಚಕ್ರವರ್ತಿ ಅಶೋಕನಿಗಿತ್ತೆಂದು ಪ್ರಥಮ ಬಾರಿಗೆ ಕ್ರಿ.ಶ.೧೯೧೫ರಲ್ಲಿ ಮಸ್ಕಿ ಶಾಸನ ತಿಳಿಸಿತು.

ಮಸ್ಕಿಯ ಪರಿಸರದ ಚರಿತ್ರೆಯೂ ಇಷ್ಟಕ್ಕೆ ನಿಲ್ಲದೇ ತನ್ನ ಗರ್ಭದೊಳಗೆ ಪ್ರಾಗಿತಿಹಾಸದಿಂದಲೂ ಮಾನವನ ನೆಲೆಯಾಗಿತ್ತು ಎನ್ನುವುದನ್ನು ಅನೇಕ ಸಂಶೋಧನೆಗಳ ಮೂಲಕ ಸಾಬೀತಾಗಿದೆ. ಸುಮಾರು ಮೂರುಸಾವಿರ ವರ್ಷಗಳಿಗಿಂತಲೂ ಹಿಂದೆ ಅಗ್ರ ಪಂಕ್ತಿಯಲ್ಲಿದ್ದ ಇಂದಿನ ಮಸ್ಕಿ ಪಟ್ಟಣ ಎಡದೊರೆ-೨೦೦೦ರ ನಾಡಿನ ರಾಜಧಾನಿ ಆಗಿತ್ತು ಎಂಬುವುದು ಕ್ರಿ.ಶ. ೯ ರಿಂದ ೧೨ನೇ ಶತಮಾನಗಳವರೆಗಿನ ಶಾಸನಗಳಿಂದ ತಿಳಿದುಬರುತ್ತದೆ. ಅಂದಿನಿಂದ ಇಂದಿನ ದಿನಮಾನಗಳವರೆಗೂ ಮಸ್ಕಿ ಬೆರಗುಗಳ ಭರಾಟೆಯಲ್ಲಿ ತನ್ನ ಅನೇಕ ಕುರುಹುಗಳನ್ನು ಕಳೆದುಕೊಳ್ಳುತ್ತಿರುವ ಇದು ಜಿಲ್ಲಾ ಕೇಂದ್ರ ರಾಯಚೂರನಿಂದ ೮೩ ಕಿ.ಮೀ. ದೂರದಲ್ಲಿ ಹಾಗೂ ತಾಲ್ಲೂಕು ಕೇಂದ್ರ ಲಿಂಗಸುಗೂರುನಿಂದ ಆಗ್ನೇಯ ದಿಕ್ಕಿಗೆ ೨೭ ಕಿ.ಮೀ ದೂರದಲ್ಲಿದೆ. (ಪ್ರಸ್ತುತ ೨೦೧೮ ಮಾರ್ಚ ೧ ರಿಂದ ಮಸ್ಕಿ ಕೂಡ ತಾಲ್ಲೂಕು ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ). ಬೀದರ-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿರುವ ಮಸ್ಕಿ ಪಟ್ಟಣವು ಮಸ್ಕಿ ನದಿ(ಹಿರೇಹಳ್ಳ)ಯ ಬಲದಂಡೆಯ ಮೇಲಿದೆ.[2] ಕ್ರಿ.ಶ ೧೮೮೮ರಲ್ಲಿ ಖ್ಯಾತ ವಿದ್ವಾಂಸ ರಾಬರ್ಟ್‌ಬ್ರೂಸಫೂಟ್‌ರವರು ಈ ನೆಲೆಯನ್ನು ಸಂದರ್ಶಿಸಿ ನವಶಿಲಾಯುಗ ಮತ್ತು ಆ ನಂತರದ ಕಾಲಘಟ್ಟಗಳ ಕುರುಹುಗಳನ್ನು ಸಂಗ್ರಹಿಸಿದ್ದಾರೆ.

ಅವು ಪ್ರಸ್ತುತ ಮದ್ರಾಸಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿವೆ. ನಂತರ ಜಿ.ಯಸ್ದಾನಿಯವರು, ಕ್ರಿ.ಶ.೧೯೨೮-೨೯ರಲ್ಲಿ ಲಿಯೋನಾರ್ಡ್‌ಮನ್‌ರವರು ರಾಯಚೂರು ಜಿಲ್ಲೆಯ ಪ್ರಾಚೀನ ವಸ್ತುಗಳನ್ನು ಕುರಿತು ಬರಿಯುತ್ತಾ ಮಸ್ಕಿಯಲ್ಲಿ ದೊರೆತ ಕುರುಹುಗಳಿಗೆ ವಿಶೇಷ ಮನ್ನಣೆ ನೀಡಿದ್ದಾರೆ.[೩] ನಂತರ ೧೯೩೫-೩೭ರಲ್ಲಿ ಅಂದಿನ ಹೈದ್ರಾಬಾದ್ ಸರ್ಕಾರ ಮತ್ತು ೧೯೫೪ ರಲ್ಲಿ ಕೇಂದ್ರ ಸರ್ಕಾರ ಪುರಾತತ್ವ ಇಲಾಖೆಯಿಂದ ಬಿ.ಕೆ ಥಾಪರ್‌ರವರು ಉತ್ಖನನ ನಡೆಸಿ ಅನೇಕ ಮಹತ್ವದ ಅಂಶಗಳನ್ನು ಬಯಲಿಗೆ ತಂದರು. ಇದಕ್ಕೂ ಮುಂಚೆ ೧೯೧೫ ರಲ್ಲಿ ಸಿ.ಬಿಡನ್ ಎಂಬ ವಿದ್ವಾಂಸರು ಅಶೋಕನ ಶಾಸನವನ್ನು ಪತ್ತೆ ಹಚ್ಚಿದರು. ಇದರ ಜೊತೆಗೆ ಮಸ್ಕಿ ಪರಿಸರವು ಕೂಡ ಚಾರಿತ್ರಿಕವಾಗಿ ಮಹತ್ವದ ಸ್ಥಾನವನ್ನು ಪಡೆದಿದೆ. ಸ್ಥಳಿಯ ಚರಿತ್ರೆಯನ್ನು ಕಟ್ಟಿಕೊಡುವ ದೃಷ್ಟಿಯಿಂದ ವಿಶೇಷವಾಗಿದೆ. ಮುಂದೆ ಹೊಯ್ಸಳ, ಕಲ್ಯಾಣ ಚಾಲುಕ್ಯರು, ವಿಜಯನಗರ ಅರಸರು, ಪಾಳೆಯಗಾರರು, ಸ್ಥಳಿಯ ನಾಯಕರ ಕಾಲದ ಪ್ರಾಚೀನ ಕುರುಹುಗಳು ಈ ಪರಿಸರದ ಸುತ್ತಮುತ್ತಲ್ಲಿನ ಭಾಗದಲ್ಲಿ ಗೋಚರಿಸುತ್ತವೆ.

ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣದಲ್ಲಿ ಸ್ಮಾರಕಗಳು, ದೇವಾಲಯಗಳು, ಶಿಲ್ಪಗಳು, ಅಮೂಲಾಗ್ರ ಪಾತ್ರವನ್ನು ವಹಿಸುತ್ತವೆ. ಇಲ್ಲಿನ ಶಾಸನಗಳು, ದೇವಾಲಯಗಳು, ವೀರಗಲ್ಲುಗಳು, ಪ್ರಾಚೀನ ನೆಲೆಗಳು, ಐತಿಹ್ಯಗಳು ಮಸ್ಕಿ ಪರಿಸರದ ಚಾರಿತ್ರಿಕ ಮತ್ತು ಪುರಾತತ್ವೀಯ ಅಧ್ಯಯನದ ಆಕರ ಸಂಪತ್ತುಗಳಾಗಿವೆ. ಇಲ್ಲಿ ಬೌದ್ಧ, ಜೈನ, ಶೈವ, ವೈಷ್ಣವ, ಮುಸ್ಲಿಂ ಮುಂತಾದ ಧಾರ್ಮಿಕ ಪಂತಗಳ ಪ್ರಾಚೀನ ಕುರುಹುಗಳು ಇಲ್ಲಿಯ ದೇವಾಯಲಗಳು, ಮಸಿದಿಗಳು, ಬಸದಿಗಳು ಉಳಿದಿವೆ. ಮೌಖಿಕ ಸಾಹಿತ್ಯದಲ್ಲಿ ಉಲ್ಲೇಖಿತಗೊಂಡಿರುವ ಮಸ್ಕಿ ಪರಿಸರದ ಐತಿಹ್ಯ, ನಂಬಿಕೆ, ಆಚರಣೆ, ಜಾತ್ರೆ, ಉತ್ಸವಗಳು ಈ ಪರಿಸರದ ಸಾಂಸ್ಕೃತಿಕ ವೈಶಿಷ್ಟತೆಗೆ ಸಾಕ್ಷಿಯಾಗಿ ನಿಂತಿವೆ.

## ಅಧ್ಯಯನದ ಉದ್ದೇಶ

ಕರ್ನಾಟಕದ ಇತಿಹಾಸದಲ್ಲಿ ರಾಯಚೂರು ಜಿಲ್ಲೆಯು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಈ ಜಿಲ್ಲೆಯ ಮಧ್ಯ ಭಾಗದಲ್ಲಿರುವ ಮಸ್ಕಿ ಪಟ್ಟಣ ಮತ್ತು ಪರಿಸರವು ಪುರಾತತ್ವೀಯ ಮತ್ತು ಚಾರಿತ್ರಿಕವಾಗಿ ಶ್ರೀಮಂತವಾಗಿರುವುದು. ಮಸ್ಕಿಯು ಅಶೋಕ ಚಕ್ರವರ್ತಿಯನ್ನು ಹೆಸರಿಸುವ ವಿಶಿಷ್ಟ ಶಾಸನವನ್ನು ಹೊಂದಿರುವುದರ ಮೂಲಕ "ಅಶೋಕನ ನಾಡು" ಎಂಬ ಹೆಸರು ಪಡೆದಿದೆ. ಸಂಶೋಧನೆಗೆ ಉದ್ದೇಶ ಮುಖ್ಯ. ಉದ್ದೇಶವು ಅಧ್ಯಯನಕ್ಕೆ ಗುರಿ ಇದ್ದಂತೆ. ಅಧ್ಯಯನದ ಉದ್ದೇಶವನ್ನು ಸಾಧಿಸಿದರೆ ಗುರಿಯನ್ನು ಸಾಧಿಸಿದಂತೆ.

ಸಮಸ್ಯೆಯ ರೂಪದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಕೆಲಸವನ್ನು ಮಾಡುತ್ತದೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಅಧ್ಯಯನದಲ್ಲಿ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ ಎನ್ನುವುದನ್ನು ಹೇಳುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತದೆ. ಆದ್ದರಿಂದ ಸಂಶೋಧನಾ ಅಧ್ಯಯನಕ್ಕೆ ಉದ್ದೇಶವಿರಲೇಬೇಕು. ಕೆಲವೊಂದು ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಅಥವಾ ಸಂಶೋಧನೆಯನ್ನು ಕೈಗೊಂಡು ಕಾರ್ಯನಿರ್ವಹಿಸಿದಾಗ ಅದು ಪರಿಪೂರ್ಣವಾಗುತ್ತದೆ.

ಪ್ರಸ್ತುತ ಅಧ್ಯಯನವು "ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ" ಎಂಬ ಶೀರ್ಷಿಕೆಯನ್ನು ಹೊಂದಿದ್ದು ಮಸ್ಕಿ ಪರಿಸರದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಈ ಮೂಲಕ ಬೆಳಕಿಗೆ ತರುವ ಉದ್ದೇಶವನ್ನು ಹೊಂದಲಾಗಿದೆ. ಈ ಪ್ರದೇಶದಲ್ಲಿ ಭಾರತದಲ್ಲಿಯೇ ಅತೀ ಹೆಚ್ಚು ಚಿನ್ನದ ಖನಿಜ ನಿಕ್ಷೇಪ ದೊರೆಯುತ್ತದೆ[9]. ಈ ಮೂಲಕ ಭೌಗೋಳಿಕವಾಗಿ ವಿಶಿಷ್ಟವಾಗಿದೆ.

ಇಲ್ಲಿನ ಭೌಗೋಳಿಕ ಅಂಶಗಳು ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯ ಮೇಲೆ ಬೀರಿರುವ ಪ್ರಭಾವವನ್ನು ವಿವರವಾಗಿ ಚರ್ಚಿಸಲಾಗಿದೆ. ಪುರಾತತ್ವೀಯವಾಗಿ ಹಳೇಶಿಲಾಯುಗ, ನವಶಿಲಾಯುಗ, ಬೃಹತ್‌ಶಿಲಾಯುಗ ಮತ್ತು ಆದಿಚಾರಿತ್ರಿಕ ಕುರುಹುಗಳನ್ನು ವಿಶ್ಲೇಷಿಸಲಾಗಿದೆ. ಚಾರಿತ್ರಿಕವಾಗಿ ಮೌರ್ಯರು, ರಾಷ್ಟ್ರಕೂಟರು, ಚೋಳರು, ಕಲ್ಯಾಣ ಚಾಲುಕ್ಯರು, ದೇವಗಿರಿಯ ಸೇವುಣರು, ವಿಜಯನಗರದ ಅರಸರು, ಬಹಮನಿ ಸಾಮ್ರಾಜ್ಯ, ಕರಡಿಕಲ್ಲ ಕದಂಬರು, ಐಹೇಯರು, ಪಾಳೆಗಾರರು, ಸ್ಥಳೀಯ ನಾಯಕರ ಆಳ್ವಿಕೆಯ ಪ್ರಾಚೀನ ಕುರುಹುಗಳನ್ನು ದೊರೆತ ಪುರಾತತ್ವೀಯ ಚಾರಿತ್ರಿಕ ಮತ್ತು ಸಾಹಿತ್ಯಿಕ ಆಧಾರಗಳನ್ನು ಪ್ರಧಾನವಾಗಿಟ್ಟುಕೊಂಡು ವಿಶ್ಲೇಷಿಸಲಾಗಿದೆ.

ಭೌಗೋಳಿಕವಾಗಿ ಮಸ್ಕಿ ಪರಿಸರದ ಸುತ್ತಮುತ್ತ ಹಳೇಶಿಲಾಯುಗದಿಂದ ಆದಿಚಾರಿತ್ರಿಕ ಕಾಲದ ಅವಶೇಷಗಳನ್ನು ಬೆಳಕಿಗೆ ತರುವುದರ ಮೂಲಕ ಇಲ್ಲಿನ ಆದಿಮಾನವ ಸಂಸ್ಕೃತಿಯನ್ನು ಕುರಿತು ವಿವೇಚಿಸಲಾಗಿದೆ. ನೈಸರ್ಗಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಈ ಪ್ರದೇಶ ವಿಶಿಷ್ಟವಾಗಿದೆ. ಈ ಪರಿಸರದ ವ್ಯಾಪ್ತಿಗೆ ಒಳಪಡುವ ಪ್ರತಿ ಹಳ್ಳಿಯೂ ಪ್ರಾಗೈತಿಹಾಸಿಕ ಹಾಗೂ, ಐತಿಹಾಸಿಕವಾಗಿ ಮಹತ್ವ ಪಡೆದಿರುವುದು. ಈ ನೆಲೆಗಳಲ್ಲಿ ಕಂಡುಬರುವ ಹಲವಾರು ಕುರುಹುಗಳು ಇದನ್ನು ಸ್ಪಷ್ಟೀಕರಿಸುತ್ತವೆ.

ಇಂತಹ ಸಂಸ್ಕೃತಿಯನ್ನು ಬಿಂಬಿಸುವ ಪ್ರತಿಯೊಂದು ಚಾರಿತ್ರಿಕ ಅಂಶಗಳನ್ನು ದಾಖಿಲಿಸುವುದರ ಜೊತೆಗೆ, ಜನರಲ್ಲಿ ಜಾಗೃತಿ ಮೂಡಿಸುವ ಮತ್ತು ಮುಂದಿನ ಪೀಳಿಗೆಗಳಿಗೆ ದಾಖಲೆಯನ್ನು ಒದಗಿಸುವುದು ಈ ಅಧ್ಯಯನದ ಮಹತ್ವದ ಉದ್ದೇಶವಾಗಿದೆ.

ಚಾರಿತ್ರಿಕವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಇಲ್ಲಿನ ಪ್ರಾಚೀನ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ, ದೇವಾಲಯ, ಸ್ಮಾರಕಶಿಲ್ಪ, ಲೌಕಿಕ ಶಿಲ್ಪಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ಇಲ್ಲಿನ ಪ್ರಾಚೀನ ದೇವಾಲಯಗಳು ಚಾರಿತ್ರಿಕವಾಗಿ ಧಾರ್ಮಿಕವಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದು ಅವುಗಳ ರಚನೆ, ನಿರ್ಮಾಣದ ಉದ್ದೇಶ, ಕಾಲಮಾನ, ಇವುಗಳ ಪ್ರಸ್ತುತ ಸ್ಥಿತಿ ಎಂಬ ಇತ್ಯಾದಿ ಸಂಗತಿಗಳನ್ನು ಸೋದಹರಣವಾಗಿ ಚರ್ಚಿಸಲಾಗಿದೆ. ಇನ್ನೂ ಮೌಖಿಕ ಸಾಹಿತ್ಯದ ಮೂಲಕ ಉಳಿದುಕೊಂಡು ಬಂದಿರುವ ಐತಿಹ್ಯ, ಆಚರಣೆಗಳು, ನಂಬಿಕೆಗಳನ್ನು ವಿಶ್ಲೇಷಣೆಯನ್ನು ಮಾಡಲಾಗಿದೆ. ಈ ಹಿಂದೆ ಮಸ್ಕಿ ಪರಿಸರದ ಕುರಿತಂತೆ ಸಂಕ್ಷಿಪ್ತವಾಗಿ ಅಧ್ಯಯನಗಳು ನಡೆದಿವೆಯಾದರು ಆ ಅಧ್ಯಯನಗಳು ವಿಸ್ತೃತವಾಗಿ ನಡೆದಿಲ್ಲ. ಆದ್ದರಿಂದ ಇಲ್ಲಿನ ಪುರಾತತ್ವೀಯ ಚಾರಿತ್ರಿಕ, ಸಾಹಿತ್ಯಿಕ ಹಾಗೂ ಮೌಖಿಕ ಆಕರಗಳ ಮೂಲಕ ಇಡೀ ಮಸ್ಕಿ ಪರಿಸರದ ಸಮಗ್ರ ಚಾರಿತ್ರಿಕ ಅಧ್ಯಯನ ನಡೆಸುವ ಉದ್ದೇಶ ಪ್ರಸ್ತುತ ಅಧ್ಯಯನದ್ದು.

## ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗ ಚೌಕಟ್ಟು ಬಹಳ ಮುಖ್ಯ. ಅದರಂತೆಯೇ ಒಂದು ಅಧ್ಯಯನಕ್ಕೆ ವ್ಯಾಪ್ತಿ ಇರಬೇಕು. ಈ ಮಿತಿಯಲ್ಲಿ ಅಧ್ಯಯನ ಕೈಗೊಂಡಾಗ ಮಾತ್ರ ಪರಿಪೂರ್ಣವಾಗುತ್ತದೆ. ಈ ಚೌಕಟ್ಟಿನ ಕ್ರಮಬದ್ಧತೆಯಿಂದಾಗಿ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲಾವಧಿ ದೃಷ್ಟಿಯಿಂದ ಪ್ರಾಗಿತಿಹಾಸ ಆರಂಭ ಕಾಲದಿಂದ ಕ್ರಿ.ಶ ೧೯ನೇ ಶತಮಾನದವರೆಗೆ ನಿಗದಿಪಡಿಸಿಕೊಳ್ಳಲಾಗಿದೆ. ಭೌಗೋಳಿಕ ಹಿನ್ನೆಲೆಯಲ್ಲಿ ಮಸ್ಕಿ ಪರಿಸರದ ಸುಮಾರು ಹತ್ತು (೧೦) ಕಿ.ಮೀ. ವ್ಯಾಸದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಗ್ರಾಮಗಳಿಗೆ ಈ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಅವುಗಳಲ್ಲಿ ಸಾನಬಾಳ, ಹುಲ್ಲೂರು, ಸುಂಕನೂರು, ಚಿಕ್ಕ ಕಡಬೂರು, ಪರಾಪೂರ, ವೆಂಕಟಾಪುರ, ಕಾಟಿಗಲ್ಲು, ನಂಜಲದಿನ್ನಿ ಗ್ರಾಮಗಳಲ್ಲಿನ ಪುರಾತತ್ವೀಯ ನೆಲೆಗಳು, ದೇವಾಲಯಗಳನ್ನು ಗುರುತಿಸಿ ಅವುಗಳ ಐತಿಹಾಸಿಕ ಮಹತ್ವವನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ. ಮಸ್ಕಿ ಪಟ್ಟಣದಲ್ಲಿರುವ ಐತಿಹಾಸಿಕ ಕುರುಹುಗಳು, ಅಲ್ಲಿನ ಐತಿಹ್ಯ ಮುಂತಾದವು ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಂಡು ಸಂದರ್ಭಕ್ಕನುಸಾರವಾಗಿ ಅಕ್ಕಪಕ್ಕದ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

## ಅಧ್ಯಯನ ವಿಧಾನ

ಒಂದು ಕಾರ್ಯ ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತಿಮುಖ್ಯ. ಹಾಗಾಗಿ ಸಂಶೋಧನ ಕಾರ್ಯಕ್ಕೂ ವ್ಯವಸ್ಥಿತವಾದ ಅಧ್ಯಯನ ಬಹಳ ಅವಶ್ಯಕವಾದದ್ದು. ಅಧ್ಯಯನವನ್ನು ವೈಜ್ಞಾನಿಕವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡು ಪೂರೈಸಲಾಗುವುದು. ಕ್ಷೇತ್ರಕಾರ್ಯದ ಮೂಲಕ ಪ್ರಾಥಮಿಕ ಹಾಗೂ ಆನುಷಂಗಿಕ ಮಾಹಿತಿಯನ್ನು ಸಂಗ್ರಹಿಸಿಕೊಂಡು ಪ್ರತಿ ಗ್ರಾಮದ ಪುರಾತತ್ವ ಹಾಗೂ ಐತಿಹ್ಯಗಳನ್ನು ಸಮಗ್ರವಾಗಿ ಅವಲೋಕಿಸಿ ವಿಶ್ಲೇಷಿಸುವ ಕಾರ್ಯವಿಧಾನಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಈ ಪ್ರದೇಶದ ಪ್ರತಿ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿನ ವಿವರಗಳನ್ನು ಪರಿಶೀಲಿಸಿ ದಾಖಲಿಸಿಕೊಳ್ಳಲಾಗಿದೆ. ಜೊತೆಗೆ ತತ್ಸಂಬದ್ಧ ಅಧ್ಯಯನಗಳನ್ನು ಗಮನದಲ್ಲಿರಿಸಿಕೊಂಡು ಪೂರಕವಾದ ಮಾಹಿತಿಯನ್ನು ಬೇರೆ ಬೇರೆ ನೆಲೆಯಿಂದಲೂ ಪಡೆದು ಮತ್ತು ಕೆಲವು ವಿಷಯಗಳನ್ನು ಸ್ಥಳೀಯರಿಂದಲೂ ಮಾಹಿತಿ ಪಡೆಯಲಾಗಿದೆ. ಕ್ಷೇತ್ರಕಾರ್ಯಗಳಲ್ಲಿ ಕಂಡುಬರುವ ಹೊಸ ನೆಲೆಗಳು ಹಾಗೂ ಅಲ್ಲಿಯ ಅವಶೇಷಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಕಾಲಾನುಕ್ರಮದಲ್ಲಿ ವಿಂಗಡಿಸಿ ಸಂಶೋಧನೆಗೆ ಒಳಪಡಿಸಲಾಗಿದೆ. ಇತಿಹಾಸ ಮತ್ತು ಪುರಾತತ್ವ ಹಾಗೂ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಅಳವಡಿಸಿಕೊಂಡು ಅಧ್ಯಯನದ ವಿಧಾನಗಳನ್ನು ಪರಿಗಣಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಬರುವ ದೇವಾಲಯಗಳು, ಕಲೆ ಮತ್ತು ವಾಸ್ತುಶಿಲ್ಪ, ಅವುಗಳ ಆಡಳಿತ ವ್ಯವಸ್ಥೆ, ಬಿಟ್ಟಂತಹ ದಾನದತ್ತಿ ಮುಂತಾದವುಗಳನ್ನು ಗಮನಿಸಲಾಗಿದೆ. ಪುರಾತತ್ತ್ವೀಯ ನೆಲೆಗಳು ಮತ್ತು ಶಾಸನಗಳು ಪ್ರಸ್ತುತ ಅಧ್ಯಯನದ ಪ್ರಧಾನ ಆಕರಗಳಾಗಿವೆ. ಮಸ್ಕಿ ಪರಿಸರದಲ್ಲಿ ಇರುವಂತಹ ಪ್ರಾಗಿತಿಹಾಸಿಕ ಕಾಲಾದ ಮಾನವನ ವಾಸದ ನೆಲೆಗಳು ಮತ್ತು ಇತರೆ ಕುರುಹುಗಳನ್ನು ದಾಖಲಿಸಲಾಗಿದೆ.

ಹೀಗೆ ಮಸ್ಕಿ ಪರಿಸರದ ಭೌಗೋಳಿಕ, ಪ್ರಾಗಿತಿಹಾಸಿಕ, ಚಾರಿತ್ರಿಕ, ಸಾಂಸ್ಕೃತಿಕ ಅಂಶಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿಕೊಳ್ಳಲಾಗುವುದು. ಕ್ಷೇತ್ರಕಾರ್ಯದ ಮಾಹಿತಿಯಿಂದ ಸಂಶೋಧನೆಗೆ ಪ್ರಾಥಮಿಕ ಆಕರಗಳನ್ನು ಸಂಗ್ರಹ ಮಾಡಿ ಇದಕ್ಕೆ ಪೂರಕವಾಗಿ ಆನುಷಂಗಿಕ ಆಕರಗಳನ್ನು ಗ್ರಂಥಾಲಯಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗುವುದು. ಜೊತೆಗೆ ಸಂಬಂಧಪಟ್ಟಂತಹ ವಿದ್ವಾಂಸರನ್ನು ಭೇಟಿಮಾಡಿ ಅವರಿಂದ ಮಾಹಿತಿ ಪಡೆದು, ದತ್ತಾಂಶಗಳನ್ನು ವಿಮರ್ಶೆಗೆ ಒಳಪಡಿಸಿ ವಿಶ್ಲೇಷಿಸಿ ಪ್ರಬಂಧವನ್ನು ರಚಿಸಲಾಗಿದೆ.

## ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ೫ ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಹಾಗೂ ಈವರೆಗಿನ ಅಧ್ಯಯನ ಸಮೀಕ್ಷೆಗಳನ್ನು ಒಳಗೊಂಡಿದ್ದು, ಪ್ರಸ್ತುತ ಅಧ್ಯಯನದ ಒಟ್ಟು ರೂಪರೇಷವನ್ನು ಕುರಿತು ಚರ್ಚಿಸಿದೆ.

ಎರಡನೆಯ ಅಧ್ಯಾಯವು ಭೌಗೋಳಿಕ ಪರಿಸರ, ಸ್ಥಳನಾಮಗಳ ಹಿನ್ನೆಲೆಯನ್ನು ಒಳಗೊಂಡಿದೆ. ಭೌಗೋಳಿಕ ಹಿನ್ನಲೆಯಲ್ಲಿ ಮಸ್ಕಿ ಪರಿಸರದ ಭೌಗೋಳಿಕ ಸನ್ನಿವೇಶಗಳು ಚಾರಿತ್ರಿಕವಾಗಿ ಚರಿತ್ರೆಯ ನಿರ್ಮಾಣದಲ್ಲಿ ಹೇಗೆ ಪೂರಕವಾಗಿವೆ ಎಂಬ ಅಂಶಗಳನ್ನು ಕುರಿತು ಈ ಅಧ್ಯಾಯದಲ್ಲಿ ಸವಿವರವಾಗಿ ಚರ್ಚಿಸಲಾಗಿದೆ. ಈ ಪರಿಸರದಲ್ಲಿ ಕಂಡುಬರುವ ಪ್ರಾಗಿತಿಹಾಸ ಕಾಲಘಟ್ಟಗಳಾದ ಹಳೇಶಿಲಾಯುಗ, ನವಶಿಲಾಯುಗ, ಶಿಲಾತಾಮ್ರಯುಗ, ಬೃಹತ್‌ಶಿಲಾಯುಗ ಮತ್ತು ಆದಿಚಾರಿತ್ರಿಕ ಸಂಸ್ಕೃತಿಗಳ ಕುರುಪುಗಳ ಹಿನ್ನೆಲೆಯಲ್ಲಿ ಎಂಬ ಉಪಶಿರ್ಷಿಕೆಯ ಅಡಿಯಲ್ಲಿ ಮತ್ತು ಈ ಪರಿಸರದಲ್ಲಿ ಆಳ್ವಿಕೆ ನಡೆಸಿದ ಮೌರ್ಯರು, ರಾಷ್ಟ್ರಕೂಟರು, ಚೋಳರು, ಕಲ್ಯಾಣ ಚಾಲುಕ್ಯರು, ದೇವಗಿರಿಯ ಸೇವುಣರು, ವಾರಂಗಲ್‌ನ ಕಾಕತೀಯರು, ವಿಜಯನಗರದ ಅರಸರು, ಬಹಮನಿ ಸಾಮ್ರಾಜ್ಯ, ಕರಡಿಕಲ್ಲು ಕದಂಬರು, ಐಹೇಯರು, ನಾಡಗೌಡರ ರಾಜಕೀಯ ಇತಿಹಾಸವನ್ನು ಪರಿಚಯಿಸಲಾಗುವುದು. ಹಲವು ಚಾರಿತ್ರಿಕ ಕುರುಹುಗಳನ್ನು ಚಾರಿತ್ರಿಕ ಹಿನ್ನಲೆ ಎಂಬ ಉಪಶೀರ್ಷಿಕೆ ಅಡಿಯಲ್ಲಿ ಚರ್ಚಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ದಾಖಲೆ, ಶಾಸನ ಹಾಗೂ ಸಮಕಾಲೀನ ಸಾಹಿತ್ಯಿಕ ಆಕರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಮೂರನೆಯ ಅಧ್ಯಾಯವು ಕಲೆ ಮತ್ತು ವಾಸ್ತುಶಿಲ್ಪ ಕುರಿತಾಗಿದ್ದು, ವಾಸ್ತುಶಿಲ್ಪ ಭಾಗದಲ್ಲಿ ದೇವಾಲಯದ ಉಗಮ, ವಿಕಾಸದ ಬಗ್ಗೆ ಮತ್ತು ಇಲ್ಲಿಯ ಬೌದ್ಧ, ಜೈನ ಬಸದಿಗಳು, ಶೈವ ಮತ್ತು ವೈಷ್ಣವ ದೇವಾಲಯಗಳೆಂದು ವಿಂಗಡಿಸಿಕೊಂಡು ವಿಶ್ಲೇಷಿಲಾಗಿದೆ. ಮಸ್ಕಿ ಮತ್ತು ಮಸ್ಕಿ ಪರಿಸರದಲ್ಲಿ ಕಂಡುಬರುವ ದೇವಾಲಯಗಳನ್ನು ವಾಸ್ತುಲಕ್ಷಣಗಳ ಹಿನ್ನಲೆಯಲ್ಲಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಹಾಗೂ ಈ ಭಾಗದಲ್ಲಿ ಕಂಡುಬರುವ ಶಿಲ್ಪಗಳು, ಮೂರ್ತಿಶಿಲ್ಪಗಳನ್ನು ಅವುಗಳಲ್ಲಿನ ಭಿನ್ನತೆ ಮತ್ತು ಲಕ್ಷಣಗಳನ್ನು ಅಭ್ಯಾಸಿಸಿ ಕೊನೆಯಲ್ಲಿ ಲೌಕಿಕ ವಾಸ್ತುಶಿಲ್ಪ ಎಂಬ ಉಪವಿಭಾಗದಲ್ಲಿ ಕೋಟೆಗಳು-ಕೊತ್ತಲಗಲು, ಕೆರೆ ಬಾವಿಗಳನ್ನು ಕುರಿತು ಇದೇ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಶಾಸನಗಳು ಮತ್ತು ಸ್ಮಾರಕಗಳು ಕುರಿತಾದ ಅಧ್ಯಯನ ಮಾಡುವುದಾಗಿದೆ. ಇದುವರೆಗೆ ಪತ್ತೆ ಹಚ್ಚಲಾದ ಶಾಸನಗಳು ಮತ್ತು ಅಧ್ಯಯನದಲ್ಲಿ ಕಂಡುಬರುವ ನೂತನ ಶಾಸನಗಳನ್ನು ಗುರುತಿಸಿ ಆ ಶಾಸನಗಳ ಪಾಠದ ಸಹಾಯದಿಂದ ಅವುಗಳ ಸಾರಾಂಶವನ್ನು ವಿಶ್ಲೇಷಿಸಲಾಗಿದೆ. ಹಾಗೂ ಶಾಸನಗಳ ಪ್ರಕಾರಗಳಲ್ಲಿ ಒಂದಾದ ಶಾಸನ ಸ್ಮಾರಕ ಶಿಲ್ಪಗಳನ್ನು ಅವುಗಳ ಪ್ರಕಾರಗಳಾದ ವೀರಗಲ್ಲು, ಮಾಸ್ತಿಗಲ್ಲು, ನಿಷಿಧಿಕಲ್ಲು, ಲಿಂಗಮುದ್ರೆ ಕಲ್ಲುಗಳನ್ನು ಅಧ್ಯಯನ ಕ್ಷೇತ್ರದಲ್ಲಿ ಕಂಡು ಬರುವ ಸ್ಮಾರಕ ಶಿಲ್ಪಗಳ ಸಹಾಯದಿಂದ ವಿವರಿಸಲಾಗಿದೆ.

ಐದನೆಯ ಅಧ್ಯಾಯವು ಸಮಾರೋಪವಾಗಿದ್ದು, ಇದು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಉತ್ಖನನ ವರದಿಗಳು, ಕೃತಿಗಳು, ಶಾಸನ ಸಂಪುಟಗಳು, ಲೇಖನಗಳು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ದಿನಪತ್ರಿಕೆಗಳು, ಸ್ಮರಣಾ ಸಂಚಿಕೆಗಳು, ಸಂಶೋಧನಾ ನಿಯತಕಾಲಿಕೆಗಳು ಮುಂತಾದ ವಿವರಗಳನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು, ಅಗತ್ಯ ನಕ್ಷೆಗಳು, ಕೋಷ್ಟಕಗಳು, ತಲವಿನ್ಯಾಸಗಳನ್ನು ಅನುಬಂಧದಲ್ಲಿ ಅಳವಡಿಸಿಕೊಳ್ಳಲಾಗಿದೆ.

## ಅಧ್ಯಯನದ ಸಮೀಕ್ಷೆ

ಈ ಭಾಗದಲ್ಲಿ ದೊರೆತ ಆಧಾರಗಳೆಂದರೆ ಪುರಾತತ್ವೀಯ ಕುರುಹುಗಳು, ದೇವಾಲಯಗಳು, ಶಾಸನಗಳು ಹಾಗೂ ವೀರಗಲ್ಲುಗಳು ಹಾಗಾಗಿ ಇಡೀ ಅಧ್ಯಯನವು ಕ್ಷೇತ್ರಕಾರ್ಯವನ್ನು ಆಧರಿಸಿ ಸಂಗ್ರಹಗೊಂಡಿದೆ. ಮಸ್ಕಿಯ ಉತ್ಖನನವನ್ನು ಕುರಿತು *Andhra Pradesh Government Archaeological series Vol,13* ಕೇಂದ್ರ ಪುರಾತತ್ವ ಇಲಾಖೆಯ ಬಿ.ಕೆ ಥಾಪರ್‌ರವರು ೧೯೫೪–೫೪ ರಲ್ಲಿ ಉತ್ಖನನ ಮಾಡಿದ ವರದಿ, ಈ ಭಾಗದ ಶಾಸನಗಳು ಪ್ರಕಟಗೊಂಡಿರುವ *Annual Reports of Indian Epigraphy,* ಎಫಿಗ್ರಾಫಿಯ ಇಂಡಿಕಾ, *Incriptions of Karnataka* Vols.3 and 4, *Hyderabad Archaeological Series No-18,* P.B Desai (Ed.), ರಾಯಚೂರು ಜಿಲ್ಲಾ ಗ್ಯಾಜಿಟಿಯರ್, ಕನ್ನಡ ವಿಶ್ವವಿದ್ಯಾಲಯ ಸಂಪುಟ,೭ (ರಾಯಚೂರು ಜಿಲ್ಲೆ) ಮುಂತಾದ ಪ್ರಾಥಮಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಮಸ್ಕಿಯಲ್ಲಿ ಈವರಿಗೆ ಕೆಲವು ವಿದ್ವಾಂಸರು ಪುರಾತತ್ವ ಸಂಶೋಧನಾ ಕಾರ್ಯಗಳನ್ನು ಮಾಡಿದ್ದಾರೆ. ಪ್ರಾಚೀನತೆ, ರಾಜಕೀಯ ಚರಿತ್ರೆ ಮುಂತಾದ ವಿಷಯಗಳ ಕುರಿತಂತೆ ಕೆಲವು ಅಧ್ಯಯನಗಳು ನಡೆದಿದ್ದು, ಕೆಲವು ಬಿಡಿ ಲೇಖನಗಳು, ಪತ್ರಿಕಾ ಪ್ರಕಟಣೆಗಳು ಪ್ರಕಟಗೊಂಡಿವೆ. ಮಸ್ಕಿ ಪರಿಸರದ ರಾಜಕೀಯ ಚರಿತ್ರೆಗೆ ಸಂಬಂಧಿಸಿದಂತೆ ಲಕ್ಷ್ಮಣ ತೆಲಗಾವಿಯವರು 'ಮೌರ್ಯ ಮತ್ತು ಶಾತವಾಹನ ಯುಗ' ಕೃತಿ ಮತ್ತು ಚನ್ನಬಸಪ್ಪ ಬಿ ಮಲ್ಕಂದಿನ್ನಿ ಅವರ 'ರಾಯಚೂರು ಜಿಲ್ಲೆಯ ಚರಿತ್ರೆ ಶಾಸನಗಳ ಹಿನ್ನೆಲೆಯಲ್ಲಿ' ಎಂಬ ಕೃತಿಗಳು ಚಾರಿತ್ರಿಕ ಸಂಗತಿಗಳನ್ನು ತಿಳಿಯಲು ಸಹಾಯಕವಾಗಿವೆ.

ಕೋ.ಚನ್ನಬಸಪ್ಪರವರು ಬರೆದ 'ಅಶೋಕನ ಶಿಲಾಶಾಸನಗಳು' ಎನ್ನುವ ಪುಸ್ತಕದಲ್ಲಿ ಮಸ್ಕಿ ಅಶೋಕ ಶಿಲಾಶಾಸನದ ಬಗ್ಗೆ ಮಾಹಿತಿ ನೀಡಿದ್ದಾರೆ. ಚನ್ನಬಸವ ಹಿರೇಮಠ ಸಂಪಾದಿತ 'ರಾಯಚೂರು ಜಿಲ್ಲಾದರ್ಶನ' ಗ್ರಂಥದಲ್ಲಿ ಮಸ್ಕಿಯ ಅಶೋಕ ಶಾಸನ, ರಾಜಕೀಯ ಅಂಶಗಳು, ಮಸ್ಕಿ ಪರಿಸರದ ಸೀಮೆ, ವೀರಗಲ್ಲುಗಳು, ಧರ್ಮ ಇತ್ಯಾದಿ ವಿಷಯಗಳನ್ನು ತಿಳಿಸಿದ್ದಾರೆ. ಅಮರೇಶ ಯತಗಲ್‌ರವರು 'ಇತಿಹಾಸ ಇಂಚರ' ಎಂಬ ಗ್ರಂಥದಲ್ಲಿ ಮಸ್ಕಿಯೂ ಅಶೋಕನ ದಕ್ಷಿಣ ಭಾರತದ ರಾಜಧಾನಿ ಸುವರ್ಣಗಿರಿ ಆಗಿರಬಹುದೇ? ಎಂದು ಚರ್ಚಿಸಿದ್ದಾರೆ.[೩] ಕೆ.ಬಿ.ಶಿವತಾರಕ್‌ರವರ 'ಕರ್ನಾಟಕದ ಪುರಾತತ್ವ ನೆಲೆಗಳು' ಎಂಬ ಕೃತಿಯಲ್ಲಿ ಮಸ್ಕಿ ಪರಿಸರದ ಪ್ರಾಗಿತಿಹಾಸದ ತಾಣಗಳ ಬಗ್ಗೆ ಮಾಹಿತಿ ನೀಡಿದ್ದಾರೆ.[೬]

ಸಿ.ಎಸ್ ವಾಸುದೇವನ್‌ರವರು 'ಕರ್ನಾಟಕದ ದೇವಾಲಯ ಕೋಶ ರಾಯಚೂರು ಜಿಲ್ಲೆ' ಎಂಬ ಪುಸ್ತಕದಲ್ಲಿ ಮಸ್ಕಿ ಪರಿಸರದ ದೇವಾಲಯಗಳು ಮತ್ತು ಮಸ್ಕಿ ಸುತ್ತಮುತ್ತಲಿನ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ನಾಡಗೌಡ ಮನೆತನಗಳ ಆಳ್ವಿಕೆಯ ಬಗ್ಗೆ ಮಾಹಿತಿ ನೀಡಿದ್ದಾರೆ. ಚನ್ನಬಸವ ಹಿರೇಮಠರು ಬರೆದಿರುವ 'ಎಡದೊರೆನಾಡು' ಎಂಬ ಕನ್ನಡ ವಿಶ್ವವಿದ್ಯಾಲಯದ ಮಂಟಪ ಮಾಲೆಯಲ್ಲಿ 'ಎಡದೊರೆನಾಡು ಯಾವುದು', ಅದರ ರಾಜಧಾನಿ ಯಾವುದು, ಅದರ ಉಪವಿಭಾಗಗಳು ಯಾವುವು ಈ ನಾಡನ್ನು ಆಳ್ವಿಕೆ ಮಾಡಿದ ರಾಜಮನೆತನಗಳು ಯಾವವು ಮತ್ತು ಶಾಸನಗಳಲ್ಲಿ ಈ ನಾಡಿನ ಕುರಿತು ಇರುವ ಇತರೆ ಮಾಹಿತಿಗಳಾದ ಎಡದೊರೆನಾಡಿನ ಗಡಿ ಮೇರೆಗಳ ಬಗ್ಗೆ ಸಹ ಮಾಹಿತಿ ನೀಡಿದ್ದಾರೆ. ಇದೇ ಲೇಖರ 'ಸತ್ಯದಹಾದಿ' ಎನ್ನುವ ಇನ್ನೊಂದು ಗ್ರಂಥದಲ್ಲಿ ಮಸ್ಕಿ ಪರಿಸರದ ನಾಡಗೌಡರ ಕುರಿತು ಮಾಹಿತಿಯನ್ನು ವಿವರವಾಗಿ ನೀಡಿದ್ದಾರೆ. ಎಚ್.ಎಸ್.ಚಿತ್ರಗಾರ್ ಅವರ 'ರಾಯಚೂರು ಜಿಲ್ಲೆಯ ಪ್ರಾಚೀನ ದೇವಾಲಯಗಳು' ಎನ್ನುವ ಗ್ರಂಥದಲ್ಲಿ ಮಸ್ಕಿಯಲ್ಲಿ ಜೈನ ಬಸದಿಯನ್ನು ಕಟ್ಟಿಸಿದ ವಿವರದ ಬಗ್ಗೆ ತಿಳಿಸಿದ್ದಾರೆ.

ಚನ್ನಬಸವ ಹೀರೆಮಠರು ಮಸ್ಕಿಯ ಮಲ್ಲಯ್ಯಗುಡಿಯ ಪಕ್ಕದಲ್ಲಿರುವಹ ಬೋರಮ್ಮ ಗುಡಿಯ ಬಗ್ಗೆ "ಘನಶ್ರೀ" ಎಂಬ ಸಂಚಿಕೆಯಲ್ಲಿ ಇದು ಮೂಲತ ಬ್ರಹ್ಮದೇವಾಲಯವಾಗಿತ್ತು ಎಂದು ಅನುಮಾನಿಸಿದ್ದಾರೆ. ಬಸವರಾಜ ಕೋಡಗುಂಟಿ ಎಂಬ ವಿದ್ವಾಂಸರು ಅಶೋಕನ ಶಾಸನದ ಬಗ್ಗೆ ಮತ್ತು ಮಸ್ಕಿಯ ಇತರೆ ಶಾಸನಗಳು ದಾನ ದತ್ತಿ ವಿವರಗಳು, ಜೈನಬಸದಿಯ ಕುರಿತು 'ಶ್ರೀನಿವಾಸ ವೈಭವ' ಎನ್ನುವ ಸ್ಮರಣ ಸಂಚಿಕೆಯಲ್ಲಿ ಮಸ್ಕಿಯ ಶಾಸನಗಳ ಇತಿಹಾಸ ಪರಿಚಯ ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ಮಂಜುನಾಥ ಜೋಗಿನಕಟ್ಟೆರವರು ಬರೆದ 'ಮಸ್ಕಿ ಕನ್ನಡ : ಒಂದು ಭಾಷಿಕ ಅಧ್ಯಯನ' ಎನ್ನುವ ಅಪ್ರಕಟಿತ ಪಿ.ಎಚ್.ಡಿ ಪ್ರಬಂಧದಲ್ಲಿ ಮಸ್ಕಿ ಪರಿಸರದ ಗ್ರಾಮಗಳ ಸ್ಥಳನಾಮಗಳ ಬಗ್ಗೆ ವಿವರವಾಗಿ ತಿಳಿಸಿದ್ದಾರೆ. ಸಿದ್ಧರಾಮ ಜಿ. ನಾಯಕರವರು ಬರೆದ ಉತ್ತರ ಕರ್ನಾಟಕದ ವೀರಗಲ್ಲಿಗಳ ಸಾಂಸ್ಕೃತಿಕ ಅಧ್ಯಯನ ಎನ್ನುವ ಅಪ್ರಕಟಿತ ಪಿ.ಹೆಚ್.ಡಿ ಪ್ರಬಂಧದಲ್ಲಿ ಮಸ್ಕಿ ಪರಿಸರದ ಹುಲ್ಲೂರು ಮತ್ತು ಕ್ಯಾತನಹಟ್ಟಿ ಗ್ರಾಮಗಳಲ್ಲಿನ ವೀರಗಲ್ಲುಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಅಮರೇಶ ಅವರು 'ಬಳಗಾನೂರು ಹೋಬಳಿ ಪರಿಸರದ ಸಾಂಸ್ಕೃತಿಕ ಅಧ್ಯಯನ' ಎನ್ನುವ ಎಂ.ಫಿಲ್ ಪ್ರಬಂಧದಲ್ಲಿ ಮಸ್ಕಿ ಪರಿಸರದ ಚಿಕ್ಕ ಕಡಬೂರು, ಸುಂಕನೂರು, ಹುಲ್ಲೂರು ಗ್ರಾಮಗಳಲ್ಲಿನ ಕೆರೆಗಳ ಕುರಿತಂತೆ ಮಾಹಿತಿ ನೀಡಿದ್ದಾರೆ. ವಿಜಯಲಕ್ಷ್ಮೀ ಅವರ 'ಹಟ್ಟಿ ಚಿನ್ನದಗಣಿ ಚಾರಿತ್ರಿಕ ಹಾಗೂ ಸಮಾಜೋ ಆರ್ಥಿಕ ಅಧ್ಯಯನ' ಎನ್ನುವ ಎಂ.ಫಿಲ್ ಪ್ರಬಂಧದಲ್ಲಿ ಮಸ್ಕಿಯ ಪ್ರಾಚೀನ ಕಾಲದಲ್ಲಿನ ಚಿನ್ನದ ನಿಕ್ಷೇಪದ ಗಣಿಗಾರಿಕೆ ನಡೆದಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಶಿಲ್ಪಾ.ಜೆ.ಎಂರವರ 'ರಾಯಚೂರ ಜಿಲ್ಲಾ ಶಾಸನ ಸಾಹಿತ್ಯದಲ್ಲಿ ಮಹಿಳೆಯರು' ಎನ್ನುವ ಅಪ್ರಕಟಿತ ಎಂ.ಫಿಲ್ ಪ್ರಬಂಧದಲ್ಲಿ ಮಸ್ಕಿ ಪಟ್ಟಣದ ಶಾಸನಗಳನ್ನು ಉಲ್ಲೇಖಿಸುತ್ತಾ, ಈ ಶಾಸನಗಳಲ್ಲಿ ಮುಖ್ಯವಾಗಿ ಸೋಮಲಾದೇವಿ ಮತ್ತು ಇತರೆ ರಾಣಿಯರ ಹೆಸರನ್ನು ಗುರುತಿಸಿ ಅವರು ನೀಡಿರುವಂತಹ ದಾನ ಧರ್ಮಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. 'ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ' ಎನ್ನುವ ಕೋಶದಲ್ಲಿ ಮಸ್ಕಿಯ ಬಗ್ಗೆ ಮಾಹಿತಿ ಇದೆ.

ಇಂತಹ ಬಿಡಿ ಲೇಖನಗಳನ್ನು ಗಮನಿಸಿದರೆ ಮಸ್ಕಿ ಪರಿಸರದ ರಾಜಕೀಯ ಚರಿತ್ರೆ ಬಗ್ಗೆ ಪರಿಚಯಾತ್ಮಕ ಅಧ್ಯಯನಗಳು ನಡೆದಿವೆಯೇ ಹೊರೆತು ಇಡೀ ಮಸ್ಕಿ ಪರಿಸರದ ವ್ಯವಸ್ಥಿತ ಪುರಾತತ್ವ ಮತ್ತು ಚಾರಿತ್ರಿಕ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ಆದುದ್ದರಿಂದ ಪ್ರಸ್ತುತ ಅಧ್ಯಯನದ ಮುಖೇನ ಮಸ್ಕಿ ಪರಿಸರದ ಪುರಾತತ್ವೀಯ ಮತ್ತು ಚಾರಿತ್ರಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

## ಕೊನೆ ಟಿಪ್ಪಣಿ

೧. ಧೃವನಾರಾಯಣ, ೨೦೧೫, ರಾಯಚೂರು ಇತಿಹಾಸ, ಪು.೧

೨. ಚನ್ನಬಸಪ್ಪ ಮಲ್ಕಂದಿನ್ನಿ, ೨೦೧೭, ಮಸ್ಕಿಯ ಪ್ರಾಚ್ಯಾವಶೇಷಗಳು, ಪು.೨೬

೩. ಅಮರೇಶ ಯತಗಲ್, ೨೦೦೮, ಇತಿಹಾಸ ಇಂಚರ, ಪು.೩೪-೩೫

೪. ಅದೇ, ಪು.೩೫

೫. ಅದೇ, ಪು.೩೬

೬. ಚಿತ್ರಗಾರ ಎಚ್.ಎನ್, ೨೦೧೦, ರಾಯಚೂರು ಜಿಲ್ಲೆಯ ಪ್ರಾಚೀನ ದೇವಾಲಯಗಳು, ಪು.೪೨

# ಅಧ್ಯಾಯ : ೨
# ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

## ೨.೧ ಮಸ್ಕಿಯ ಭೌಗೋಳಿಕ ಪರಿಸರ

ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ರಾಯಚೂರು ಕೂಡ ಒಂದು. ಈ ಜಿಲ್ಲೆಯು ಪ್ರಸ್ತುತ ೭ ತಾಲ್ಲೂಕು ಕೇಂದ್ರಗಳನ್ನು ಒಳಗೊಂಡಿದೆ. (ಇತ್ತೀಚಿಗೆ ಅಂದರೆ ಮಾರ್ಚ್ ೧೫-೨೦೧೭ ರಂದು ರಾಜ್ಯ ಸರಕಾರದ ಬಜೆಟ್ ಮಂಡನೆಯಲ್ಲಿ ಹೊಸದಾಗಿ ಎರಡು ತಾಲ್ಲೂಕುಗಳನ್ನು ಘೋಷಿಸಿದ್ದಾರೆ, ಅವುಗಳೆಂದರೆ ಮಸ್ಕಿ ಮತ್ತು ಸಿರಿವಾರ) ಮಸ್ಕಿಂಯು ೧೫°.೯೬ ಉತ್ತರ ಅಕ್ಷಾಂಶ ಮತ್ತು ೭೬°.೬೫ ಪೂರ್ವ ರೇಖಾಂಶಗಳವರೆಗೆ ವಿಸ್ತರಿಸಿದೆ. ಲಿಂಗಸುಗೂರು ಉಪವಿಭಾಗಕ್ಕೆ ಸೇರಿದ್ದು ಉತ್ತರದಲ್ಲಿ ಲಿಂಗಸುಗೂರು, ದಕ್ಷಿಣಕ್ಕೆ ಸಿಂಧನೂರು ತಾಲ್ಲೂಕು, ಈಶಾನ್ಯಕ್ಕೆ ದೇವದುರ್ಗ ಮತ್ತು ಸಿರಿವಾರ ತಾಲ್ಲೂಕುಗಳು ಹಾಗೂ ಪೂರ್ವ ಮತ್ತು ಆಗ್ನೇಯ ದಿಕ್ಕಿಗೆ ಮಾನ್ವಿ ತಾಲ್ಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ೨೦೧೧ರ ಜನಗಣತಿಯ ಪ್ರಕಾರ ಮಸ್ಕಿಯ ಜನಸಂಖ್ಯೆ ೨೩.೬೫೫ ಇದೆ. ಸಮುದ್ರ ಮಟ್ಟದಿಂದ ಸುಮಾರು ೩೮೦ ಮೀಟರ್ ಎತ್ತರದಲ್ಲಿದೆ. ಮಸ್ಕಿಯ ಸರಾಸರಿ ವಿಸ್ತೀರ್ಣ ೧೩.೭೮ ಚದುರ ಕಿಲೋಮಿಟರ್.[೧]

ಮಸ್ಕಿ ಲಿಂಗಸುಗೂರನಿಂದ ೨೭ ಕಿ.ಮೀ. ಮತ್ತು ಸಿಂಧನೂರನಿಂದ ೨೬ ಕಿ.ಮೀ. ದೂರದಲ್ಲಿ ಬೀದರ-ಬೆಂಗಳೂರು ಹೆದ್ದಾರಿಯಲ್ಲಿದೆ. ಮಸ್ಕಿ ಪಟ್ಟಣದ ನಡುವೆ ಸಣ್ಣ ನದಿ (ಹೀರೆಹಳ್ಳ) ಹರಿಯುತ್ತದೆ. ಈ ನದಿಯನ್ನು ಮಾರಲದಿನ್ನಿ ನದಿಯೆಂದು ಸ್ಥಳೀಯರು ಹೇಳುತ್ತಾರೆ. ಈ ಪ್ರಾಚೀನ ಸ್ಥಳವು ಅನೇಕ ಪ್ರಾಚ್ಯಾವಶೇಷಗಳನ್ನು ತನ್ನ ಮಡಿಲಿನಲ್ಲಿ ಇಟ್ಟುಕೊಂಡು ಪ್ರಸಿದ್ಧಿ ಪಡೆದಿದೆ.

### ೨.೧.೧ ಬೆಟ್ಟಗಳು

ಮಸ್ಕಿಯಲ್ಲಿ ವಿಶಾಲವಾಗಿ ಚಾಚಿಕೊಂಡಿರುವ ಪಶ್ಚಿಮ ನೈರುತ್ಯ ದಿಕ್ಕುಗಳಲ್ಲಿ ಸಾಲು ಸಾಲಾಗಿ ಬೆಟ್ಟ ದಿನ್ನೆಗಳು ಹಬ್ಬಿಕೊಂಡಿವೆ. ಈ ಪಟ್ಟಣದ ದಕ್ಷಿಣದ ನೈರುತ್ಯ ದಿಕ್ಕಿನಲ್ಲಿರುವ ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಾಲಯವಿದೆ. ಪಟ್ಟಣದ ಪಶ್ಚಿಮ ಭಾಗಕ್ಕೆ ಹರಡಿಕೊಂಡಿರುವ ಬೆಟ್ಟದಲ್ಲಿ (ದುರ್ಗದಬೆಟ್ಟ) ಮೌರ್ಯರ ದೊರೆ ಅಶೋಕ ಚಕ್ರವರ್ತಿಯ ಹೆಸರನ್ನು ಉಲ್ಲೇಖಿಸುವ ಶಿಲಾಶಾಸನವಿದೆ.

ಅದೇ ರೀತಿಯಾಗಿ ಈ ಬೆಟ್ಟದ ಮೇಲ್ಗಡೆ ಭಾಗದಲ್ಲಿ ಒಂದು ಪುರಾತನ ಕೋಟೆಯಿದೆ. ಆದ ಕಾರಣ ಈ ಬೆಟ್ಟವನ್ನು ಸ್ಥಳೀಯರು ದುರ್ಗದಬೆಟ್ಟ ಎಂದು ಕರೆಯುತ್ತಾರೆ. ಹಾಗೆಯೇ ಗಿಡ್ಡದಮ್ಮನ ಕೆರೆಯಬೆಟ್ಟ, ಮಜ್ಜಿಗೆಗುಂಡು, ಹಿರೇಬೆಟ್ಟ ಎಂಬ ವಿವಿಧ ಬೆಟ್ಟಗಳಿವೆ.

### ೨.೧.೨ ಖನಿಜ ಸಂಪತ್ತು

ಮಸ್ಕಿ ಪರಿಸರವು "ಚಿನ್ನ"ದ ಖನಿಜದ ತಾಣ. ಇದು ಪ್ರಾಚೀನ ಕಾಲದಿಂದಲೂ ಚಿನ್ನದ ಗಣಿಗಾರಿಕೆಗೆ ಹೆಸರು ವಾಸಿಯಾಗಿತ್ತು ಎಂಬುವುದಕ್ಕೆ ಪುರಾವೆಗಳು ಲಭ್ಯವಿದೆ. ಈ ಪರಿಸರದಲ್ಲಿ ಅನೇಕ ಪ್ರಾಚೀನ ಗಣಿಗಳಿದ್ದವು. ಗಣಿಗಳ ಸರ್ವೇಕ್ಷಣ ಕಾರ್ಯಕ್ಕೆ ಬ್ರಿಟಿಷರ ಕಾಲಾವಧಿಯಲ್ಲಿ ಭೂಗರ್ಭಶಾಜ್ಞ ಕ್ಯಾಪ್ಟನ್ ಲಿಯೋನಾರ್ಡ್‌ಮನ್ ಅವರನ್ನು ಭೌಗೋಳಿಕ ಸಮೀಕ್ಷೆಯ ನಿರ್ದೇಶಕ ಮತ್ತು ಬಾವಿಕೊರೆತ ವಿಭಾಗದ ವಿಶೇಷಾಧಿಕಾರಿಯಾಗಿ ನಿಯೋಜಿಸಲಾಗಿತ್ತು. ಇವರು ಹಟ್ಟಿ ಪ್ರದೇಶಗಳಲ್ಲಿ ಸರ್ವೇಕ್ಷಣೆ ನಡೆಸಿ ಅವರು ಒಂದೆಡೆ ಈ ರೀತಿಯಾಗಿ ದಾಖಲಿಸಿದ್ದಾರೆ.[೨] "ರಾಯಚೂರಿನ ಹಟ್ಟಿ ಚಿನ್ನದ ಗಣಿಗಳು ೬೪೦ ಅಡಿ ಆಳದವರೆಗೆ ನುಗ್ಗಿವೆ. ಇಲ್ಲಿನ ಪುರಾತನರು ಅಂತರ್ಜಲದ ಮಟ್ಟವನ್ನು ಭೇದಿಸಿ ಇಷ್ಟು ಆಳದವರೆಗೆ ಗಣಿ ಮಾಡಿದ್ದು ಜಾಗತಿಕ ದಾಖಲೆ ಎನ್ನಬಹುದೇನೋ...!". ಇದಕ್ಕೆ ಪೂರಕವಾಗಿ ಹಟ್ಟಿ ಪರಿಸರದಲ್ಲಿನ ಜಲದುರ್ಗದಲ್ಲಿಯ ಹನುಮಂತ ದೇವಾಲಯದಲ್ಲಿರುವ ಮೂರ್ತಿಯ ಹಿಂಭಾಗದಲ್ಲಿರುವ ಕಲ್ಯಾಣ ಚಾಲುಕ್ಯರ ಕ್ರಿ.ಶ ೧೦೮೭ರ ಶಾಸನದಲ್ಲಿ "ಹೊನ್ನ ಕಣಿ"ಯ ಪ್ರಸ್ತಾಪವಿದೆ. ಶಾಸನದಲ್ಲಿ ಉಲ್ಲೇಖಿವಾಗಿರುವ 'ಪೊನ್ನಕಣಿ' ಅಥವಾ 'ಹೊನ್ನಕಣಿ'ಯು ಇಂದಿನ ಹಟ್ಟಿ ಚಿನ್ನದಗಣಿ ಆಗಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಕಡ್ಡೋಣಿ, ಊಟಿ, ಮಸ್ಕಿ, ಉದ್ಬಾಳ ಗಣಿಗಳು ಮತ್ತು ದೇವದುರ್ಗದ ಈಶಾನ್ಯ ದಿಕ್ಕಿನಲ್ಲಿರುವ ಹೊನ್ನಕಣಿಯ ಹತ್ತಿರವಿದ್ದು ೬ ಚಿನ್ನದ ಗಣಿಗಳ ಬಗೆಗೆ ಲಿಯೋನಾರ್ಡ್‌ಮನ್‌ರವರು ವಿವರಗಳನ್ನು ನೀಡಿರುತ್ತಾರೆ.[೩] ಇದಕ್ಕೂ ಮುಂಚಿತವಾಗಿ ಕ್ರಿ.ಶ. ೧೯೧೫ರಲ್ಲಿ ಗಣಿ ಇಂಜಿನಿಯರಾದ ಸಿ.ಬಿಡನ್‌ರವರು ಈ ಪರಿಸರದಲ್ಲಿ ಚಿನ್ನಕ್ಕಾಗಿ ಸಂಶೋಧನೆ ಮಾಡುವಾಗ ಆಕಸ್ಮಿಕವಾಗಿ ಪ್ರಸಿದ್ಧನಾದ ಮೌರ್ಯ ಅರಸನಾದ ಅಶೋಕ ಚಕ್ರವರ್ತಿ ಹೆಸರನ್ನು ಉಲ್ಲೇಖಿಸುವಂತಹ ಶಾಸನವನ್ನು ಕಂಡುಹಿಡಿದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

### ೨.೧.೩ ಮಸ್ಕಿಯ ಹವಾಗುಣ

ಮಸ್ಕಿ ಮತ್ತು ಅದರ ಸುತ್ತಲಿನ ಪರಿಸರದಲ್ಲಿ ಮಳೆಯ ಪ್ರಮಾಣ ತುಂಬಾ ಕಡಿಮೆ. ಬಯಲು ಸೀಮೆಯ ಪ್ರದೇಶವಾಗಿದ್ದು, ಇಲ್ಲಿನ ವಾಡಿಕೆಗಿಂತ ಮಳೆಯ ಪ್ರಮಾಣ ಕಡಿಮೆ. ವಾಸ್ತವವಾಗಿ ಮಳೆಯ ಪ್ರಮಾಣ ೪೮೮.೬ ಮಿ.ಮೀಟರ್. ಇಲ್ಲಿ ಬೇಸಿಗೆ ಕಾಲವು ಜನವರಿ ಅಂತ್ಯದಿಂದ ಮೇ ತಿಂಗಳ ಕೊನೆಯವರೆಗೂ ಇರುತ್ತದೆ. ಈ ಅವಧಿಯಲ್ಲಿ ಬಿಸಿಲಿನ ತಾಪಮಾನ ಕನಿಷ್ಟ ೩೫° ಸೆಲ್ಸಿಯಸ್‌ನಿಂದ ಗರಿಷ್ಟ ೪೬° ಸೆಲ್ಸಿಯಸ್‌ವರೆಗೂ ಇರುತ್ತದೆ. ಇನ್ನೂ ಚಳಿಗಾಲದಲ್ಲಿ ಕನಿಷ್ಟ ೩೦° ಡಿಗ್ರಿ ಸೆಲ್ಸಿಯಸ್‌ನಿಂದ ಗರಿಷ್ಟ ೩೫° ಸೆಲ್ಸಿಯಸ್‌ವರೆಗೆ ದಾಖಲಾಗುತ್ತದೆ.

### ೨.೧.೪ ನೀರಾವರಿ ವ್ಯವಸ್ಥೆ

ಮಸ್ಕಿಯ ಪಟ್ಟಣ ಹಾಗೂ ಸುತ್ತಲಿನ ಪರಿಸರದ ಕೆಲವು ಗ್ರಾಮಗಳು ನೀರಾವರಿ ವ್ಯವಸ್ಥೆಯನ್ನು ಹೊಂದಿವೆ. ಈ ಪಟ್ಟಣದ ದಕ್ಷಿಣ ದಿಕ್ಕಿಗೆ ಸುಮಾರು ೨ ಕಿ.ಮೀ ಅಂತರದಲ್ಲಿ ತುಂಗಭದ್ರ ಎಡದಂಡೆ ಕಾಲುವೆ ಹರಿಯುವುದರಿಂದ ಆ ಭಾಗದ ಬಹುತೇಕ ಜನರು ಭತ್ತವನ್ನು ಬೆಳೆಯುತ್ತಾರೆ. ಇನ್ನೂ ಮಸ್ಕಿ ಪಟ್ಟಣದ ನಡುವೆ ಹಾದುಹೋಗುವ ಹಿರೇಹಳ್ಳದಿಂದಲೂ ಸಹ ಬಲಭಾಗದ ಕೆಲವೊಂದು ಗ್ರಾಮಗಳ ಜನರು ನೀರಾವರಿ ಸೌಲಭ್ಯವನ್ನು ಪಡೆದಿದ್ದಾರೆ. ಇನ್ನುಳಿದಂತೆ ಕೆಲವೊಂದು ಗ್ರಾಮಗಳಲ್ಲಿ ಕೊಳವೆ ಬಾವಿಯಿಂದಲೂ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡು ಭತ್ತ, ಹತ್ತಿ, ಸೂರ್ಯಕಾಂತಿ, ಮೆಕ್ಕೆಜೋಳ, ತರಕಾರಿಗಳು, ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ.

### ೨.೧.೫ ಜನಸಾಂದ್ರತೆ

೨೦೧೧ರ ಜನಗಣತಿಯ ಪ್ರಕಾರ ಮಸ್ಕಿ ಪಟ್ಟಣದಲ್ಲಿ ವಾಸಿಸುವ ಒಟ್ಟು ಜನಸಂಖ್ಯೆ ೨೩.೬೫೫ ಇದರಲ್ಲಿ ೧೧.೮೩೫ ಜನ ಪುರುಷರು ಮತ್ತು ೧೧.೮೨೦ ಜನ ಮಹಿಳೆಯರನ್ನು ಹೊಂದಿದೆ. ಇನ್ನುಳಿದಂತೆ ಮಕ್ಕಳ ಸಂಖ್ಯೆ (೦ ರಿಂದ ೬ ವರ್ಷ) ೩.೨೦೧ ಆಗಿದೆ.

### ೨.೨ ಮಸ್ಕಿ ಪದದ ನಿಷ್ಪತ್ತಿ

ಮಸ್ಕಿ ಸ್ಥಳನಾಮ ನಿಷ್ಪತ್ತಿ ಇಂದಿಗೂ ವಿದ್ವಾಂಸರಿಗೆ ಜಟಿಲವಾಗಿಯೇ ಉಳಿದಿದೆ. ಶಾಸನಗಳಲ್ಲಿ ಮೊಸಂಗಿ–ಮೊಸಗಿ ಎಂದು ಕಾಣಿಸಿಕೊಂಡ ಈ ಪಟ್ಟಣ ಮುಂದೆ ಮಸಗಿ>ಮಸ್ಕಿಯಾಗಿ ಬಳಕೆಗೊಂಡಿದೆ. ಅದನ್ನು ನಾಲ್ಕು ರೀತಿಯಲ್ಲಿ ಅರ್ಥೈಸಬಹುದಾಗಿದೆ.

೧. ಮಸ್ಕಿಯಲ್ಲಿ ಅಶೋಕನ ಶಿಲಾಶಾಸನ ಲಭ್ಯವಿದೆ. ಅದರಲ್ಲಿ ಭೌದ್ಧಧರ್ಮದ ಸಂದೇಶವಿದೆ. ಆದ್ದರಿಂದ ಇಲ್ಲಿ ಭೌದ್ಧಭಿಕ್ಷುಗಳ ಮಹಾಸಂಘವಿರಬೇಕೆಂದು ತರ್ಕಿಸಲಾಗಿದೆ. ಆ ಮಹಾಸಂಘದ ರೂಪಾಂತರವೇ "ಮಾಸಂಗಿ"ಯಾಗಿರಬೇಕೆಂದು ಊಹಿಸಲಾಗಿದೆ.[೪]

೨. ಮಸ್ಕಿಯ ಪರಿಸರದಲ್ಲಿ ಬಿಡಿ ಬಿಡಿಯಾದ ಬೆಟ್ಟಗಳಿವೆ. ಅವುಗಳಲ್ಲಿ ಗೋಪುರದಂತಹ ಉನ್ನತ ಶಿಖರಗಳಿಂದಾಗಿ "ಮಹಾಸೃಂಗಿ" ಎಂದು ಕರೆಸಿಕೊಂಡಿದೆ.
ಈ ಮಹಾಸೃಂಗಿಯ ತದ್ಭವ ರೂಪವೇ ಮಾಸಂಗಿಯಾಗಿದ್ದು, ಮುಂದೆ ಅದು 'ಮೊಸಂಗಿ' ಆಗಿರಬೇಕು. ಸಿರಿಸಂಗಿಯ ಪ್ರಾಚೀನ ಹೆಸರು 'ಯಕ್ಷಶೃಂಗ'ವಾಗಿದೆ. ಶೃಂಗ ಸಂಗಿಯಾಗಿ ಮಾರ್ಪಟ್ಟಿದೆಯೆಂದು ಪಿ.ಬಿ.ದೇಸಾಯಿ ಹೇಳಿದ್ದಾರೆ.[೫]

ಮಸ್ಕಿಯನ್ನು ಕುರಿತು ಮೊದಲನೆಯ ನಿಷ್ಪತ್ತಿಯು ಪಂಡಿತ ಮೂಲದಿಂದ ಕೂಡಿದ್ದರೆ, ಎರಡನೆಯದು ನಿಸರ್ಗದ ಕಡೆಗೆ ವಾಲುತ್ತಲೇ ಪಾಂಡಿತ್ಯದತ್ತ ಮುಖ ಮಾಡಿದೆ. ಪಿ.ಬಿ.ದೇಸಾಯಿಯವರು ನಿಸರ್ಗ ಮೂಲದಿಂದ ಅರ್ಥೈಸುತ್ತಾರಾದರೂ ಮತ್ತೆ ಅದನ್ನು ಸಂಸ್ಕೃತ ಭಾಷೆಯ ನೆಲೆಯಲ್ಲಿ ನೋಡುವ ಮೂಲಕ ಮತ್ತೊಂದು ಪಂಡಿತ ನಿಷ್ಪತ್ತಿಗೆ ದಾರಿ ಮಾಡಿಕೊಟ್ಟಿದ್ದಾರೆ. ಮಸ್ಕಿಯ ಸುತ್ತಮುತ್ತಲೂ ಬೆಟ್ಟಗುಡ್ಡಗಳಿರುವುದು ನಿಜವಾದರೂ ಅವು ಸ್ಥಳನಾಮಕ್ಕೆ ಕಾರಣವಲ್ಲ. ಇದನ್ನೇ ಹೋಲುವ ಎರಡು ಗ್ರಾಮಗಳು ಕರ್ನಾಟಕದಲ್ಲಿವೆ.

ಅವು ೧) ಅಸ್ಕಿ (ಬಿಜಾಪುರ ಜಿಲ್ಲೆ), ೨) ಹಾಳಅಸ್ಕಿ (ರಾಯಚೂರು ಜಿಲ್ಲೆ) ಆದರೆ ಈ ಎರಡು ಊರುಗಳಲ್ಲಿ ಯಾವ ಬೆಟ್ಟಗುಡ್ಡಗಳೂ ಇಲ್ಲಿ ಇಲ್ಲವಾದರಿಂದ ಈ ಸ್ಥಳನಾಮ ಜನಾಂಗವಾಚಿಯಿಂದ ಬಂದಿರಬೇಕು. ಅದನ್ನು ಈ ಮುಂದಿನಂತೆ ತೋರಿಸಲಾಗಿದೆ. ಅಸಗ(ರ)+ಕೆಯ್>ಅಸಗೆಯ್>ಅಸಗಿ>ಅಸಗಿ>ಅಸರೆ>ಅಸ್ಕಿ>ಅಸಗ(ರ)+ಪಾಳ್ಯ>ಅಸಗಿ>ಪಾಳ್>ಅಸಗಿ>ಹಾಳ್>ಅಸಕಿ>ಹಾಳ>ಅಸ್ಕಿಹಾಳ ಇದೇ ಮಾದರಿಯಲ್ಲಿ ಮಸ್ಕಿ ಸ್ಥಳನಾಮವನ್ನು ಬಿಡಿಸಬಹುದು. ಮೂಸೆ(ಯರ)+ಕೆಯ್>ಮೂಸಂಗೆಯ್>ಮೂಸಂಗಿ>ಮೊಸಗಿ>ಮಸಗಿ>ಮಸ್ಕಿ.[೬] ಈ ರೀತಿಯಾಗಿ ಬದಲಾವಣೆಯಾಗಿದೆ ಎನ್ನಬಹುದು.

೩. ಮಸ್ಕಿಯ ಸುತ್ತಮುತ್ತ ಚಿನ್ನದ ನಿಕ್ಷೇಪವಿದ್ದುದ್ದು ಪುರಾತತ್ವ ಶೋಧಗಳಿಂದ ತಿಳಿದು ಬಂದಿದೆ. ಇದನ್ನು ಭೂಮಿಯಿಂದ ಹೊರ ತೆಗೆಯಲು ನೂರಾರು ಗಣಿ ಕಾರ್ಮಿಕರು ಇಲ್ಲಿ ದುಡಿಯುತ್ತಿರಬೇಕು. ಹೀಗೆ ತೆಗೆದ ಚಿನ್ನವನ್ನು ಅಕ್ಕಸಾಲಿಗರು (ಮೂಸೆ=ಚಿನ್ನ, ಬೆಳ್ಳಿ ಮೊದಲಾದ ಲೋಹಗಳನ್ನು ಕರಗಿಸಲು ಬಳಸುವ ಮಣ್ಣಿನ ಮಡಿಕೆ) ಒಡವೆ ಅಥವಾ ನಾಣ್ಯ ತಯಾರಿಕೆಗೆ (ಟಂಕಸಾಲೆ) ಬಳಸುತ್ತಿರಬೇಕು. ಇವರು ಕಲಾಕಾರರೂ ಆಗಿದ್ದರಿಂದ ಸಮಾಜದಲ್ಲಿ ವಿಶಿಷ್ಟ

ಗೌರವ ಹೊಂದಿದ್ದರು. ಹೀಗಾಗಿ ರಾಜರು ಇವರಿಗೆ ಭೂಮಿಯನ್ನು ದಾನ ನೀಡುತ್ತಿದ್ದರು. ಮಸ್ಕಿಯಲ್ಲಿ ಗಣಿಗಾರಿಕೆ ನಡೆಯುತ್ತಿದ್ದರಿಂದ ಅಕ್ಕಸಾಲಿಗರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಿರಬೇಕು. ಮೂಸೆಯರಿಗೆ (ಅಕ್ಕಸಾಲಿಗರು) ನೀಡಿದ ಭೂಮಿಯನ್ನು ಮತ್ತು ಅವರು ವಾಸಿಸುತ್ತಿದ್ದ ಪ್ರದೇಶವನ್ನು 'ಮೂಸಂಗೆಯ್' ಎಂದು ಕರೆಯಲಾಗಿದೆ. ಮುಂದೆ ಇದು ಊರಾಗಿ ಬೆಳೆದ ಮೇಲೆ ಮೂಸಂಗಿ, ಮೊಸಂಗಿಯೆಂದು ಕರೆಯಿಸಿಕೊಂಡಿದೆ. ಅದಕ್ಕೆ ಸಾಕ್ಷಿಯೆಂಬಂತೆ ಈಗಲೂ ಇಲ್ಲಿ ಅಕ್ಕಸಾಲಿಗರು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಕಾಣಬಹುದು.[೬] ಮಸ್ಕಿ ಸ್ಥಳನಾಮವು ನಿಸರ್ಗವಾಚಿಯಾಗಿರದೆ ಅದು ಜನಾಂಗವಾಚಿಯಾಗಿದೆ ಎಂದು ಹೇಳಬಹುದು. ಪ್ರಮುಖವಾಗಿ ಸ್ಥಳನಾಮ ವಿಚಾರದಲ್ಲಿ ನಾವು ನೋಡುವುದಾದರೆ ಇ ಮತ್ತು ಎ ಗಳಿಂದ ಕೊನೆಗೊಳ್ಳುವ ಸ್ಥಳನಾಮ ನಿಷ್ಪತ್ತಿ ಹುಡುಕುವುದು ಕಷ್ಟದ ಕೆಲಸವೆಂದು ಅಭಿಪ್ರಾಯಪಟ್ಟಿರುವ ಭಾಷಾ ತಜ್ಞರು ಸಾಧ್ಯವಾದರೆ ಅದನ್ನು 'ಕೆಯ್'ದಿಂದ ಸಾಧಿಸಬಹುದೆಂದು ಹೇಳಿದ್ದಾರೆ.

೪. ಮಸ್ಕಿ (ಮೊಸಂಗಿ) ಸ್ಥಳನಾಮವು ಪ್ರಕೃತಿವಾಚಿಯಾಗಿರದೆ, ವ್ಯಕ್ತಿವಾಚಿಯಾಗಿದೆ ಆದ್ದರಿಂದ ಅದರ ಮೂಲವನ್ನು ಪ್ರಕೃತಿ ಹಿನ್ನಲೆಯಲ್ಲಿ ಸಂಸ್ಕೃತ ಮೂಲದಿಂದ ಹುಡುಕುವುದು ಸರಿಯಲ್ಲ ಕಾರಣ ಅದನ್ನು ಮೋಚಾ(ವ್ಯಕ್ತಿ)ನ+ಕೆಯ್>ಮೊಚಂಗೆಯ್>ಮೋಚಂಗಿ>ಮೋಸಂಗಿ>ಮೋಸಗಿ>ಮಸಗಿ> ಮಸ್ಕಿ ಎಂದು ಬಿಡಿಸಿ ತೋರಿಸಬಹುದು. ಅಂದರೆ ಮೋಚ ಹೆಸರಿನ ಒಬ್ಬ ವ್ಯಕ್ತಿ ಈ ಗ್ರಾಮದಲ್ಲಿ ಪ್ರಸಿದ್ಧನಾಗಿದ್ದನು ಅವನ ಹೆಸರಿನಿಂದಲೇ ಈ ಗ್ರಾಮವನ್ನು ಮೋಚಗಿ ಎಂದು ಕರೆಯಲ್ಪಟ್ಟಿತು. ಆದರೆ ಈ ಮೋಚನು ಯಾರು? ಅವನ ಕಾಲ ಯಾವುದು? ಅವನ ವ್ಯಕ್ತಿತ್ವ ವಿಶೇಷತೆ ಏನು? ಎಂಬುವುದು ಇದುವರೆಗೂ ಸಿಕ್ಕಿರುವಂತ ಆಧಾರಗಳಿಂದ ಮಾಹಿತಿ ದೊರೆತಿಲ್ಲ. ಆದರೂ ಕ್ರಿ.ಶ ೧೧ನೇ ಶತಮಾನದ ಶಾಸನಗಳಲ್ಲಿ "ಮೋಸಂಗಿ" ಎಂಬ ಉಲ್ಲೇಖ ಕಾಣಿಸಿಕೊಳ್ಳವುದರಿಂದ ಅವನು ಅದಕ್ಕೂ ಪೂರ್ವದಲ್ಲಿದ್ದನೆಂದು ಹೇಳಬಹುದಾಗಿದೆ. ನಂತರ ಮಧ್ಯಯುಗದ ಕಾಲದಲ್ಲಿ ಇದು ರಾಜಧಾನಿ ಪಿರಿಯ ಮೊಸಂಗಿ (ಕ್ರಿ.ಶ.೧೦೧೦-೧೦೭೧) ಮೊಸಗೆ (ಕ್ರಿ.ಶ.೧೫೩೦-೩೭) ಮಸಗೆ>ಮಸಿಗಿ>ಮಸ್ಕಿ ಎಂಬುವುದಾಗಿ ರೂಪಾಂತರಗೊಂಡಿರಬೇಕು. ಇಂದು ಸರಕಾರಿ ದಾಖಲೆಗಳಲ್ಲಿ ಈ ಊರನ್ನು ಮಸ್ಕಿ ಎಂದು ಕರೆಯುತ್ತಿದ್ದು, ಜನಸಾಮಾನ್ಯರು ಕರೆಯುವುದು ಮಾತ್ರ ಮಸ್ಗಿ (ಮಸಿಗಿ) ಎಂಬುವುದಾಗಿದೆ.[೭]

ಮಸ್ಕಿ ಕನ್ನಡ ನಾಡಿನ ಪ್ರಾಚೀನ ಸ್ಥಳನಾಮಗಳ ಅನ್ವೇಷಣೆಯ ಕಾರ್ಯದಿಂದ ಸಂಪೂರ್ಣ ಅಲಕ್ಷ್ಯಕ್ಕೆ ಒಳಗಾದ ಕಲ್ಯಾಣ ಕರ್ನಾಟಕದ ಕಡೆಗೆ ಶಾಸನತಜ್ಞರ ಗಮನವನ್ನು ಮೊತ್ತ ಮೊದಲಬಾರಿಗೆ ಸೆಳೆದವರು ಸಿ.ಬೀಡ್(ಬಿಡನ್) ಎಂಬ ಇಂಜಿನಿಯರ್ ೧೯೧೫ ರಲ್ಲಿ ಇವರು ಮಸ್ಕಿಯ ಗುಡ್ಡದಲ್ಲಿ ಲೋಹ ನಿಕ್ಷೇಪಗಳನ್ನು ಪತ್ತೆಹಚ್ಚುವ ಕಾರ್ಯದಲ್ಲಿ

ಸಂಚರಿಸುತ್ತಿದ್ದಾಗ ಅವರಿಗೆ ಆಕಸ್ಮಿಕವೆಂಬಂತೆ ಅಶೋಕನ ಶಾಸನ ಗೋಚರಗೊಂಡಿತು. ಅದುವರೆಗೆ 'ದೇವನಾಂಪ್ರಿಯ' 'ಪ್ರಿಯದರ್ಶಿ' ಹಾಗೂ 'ದೇವನಾಂಪ್ರಿರಾಜಾ' ಎಂಬ ಬಿರುದುಗಳನ್ನು ಧರಿಸಿದ್ದ ವ್ಯಕ್ತಿ ಯಾರು? ಎಂಬ ಯಕ್ಷಪ್ರಶ್ನೆಗಳಿಗೆ ಇದು ಖಚಿತವಾದ ಆಧಾರವನ್ನು ಒದಗಿಸಿತು. ಅಂದಿನಿಂದ ಈ ಭಾಗದ ಶಾಸನಗಳ ಕಡೆಗೆ ವಿದ್ವಾಂಸರು ಗಮನಹರಿಸಿದರು.

ಅಲ್ಲದೇ ಮಸ್ಕಿಯಲ್ಲಿನ ಪ್ರಾಗಿತಿಹಾಸಿಕ ಕುರುಹುಗಳನ್ನು ಪತ್ತೆ ಹಚ್ಚಿದವರಲ್ಲಿ ಕರ್ನಲ್ ಮೆಡೋಸ್ ಟೇಲರ್ ಮೊದಲಿಗನಾಗಿದಾನೆ. ಇವರು ಕ್ರಿಶ ೧೮೩೫ರಲ್ಲಿ ಮುಂಬೈ ಶಾಖೆಯ *Royal Asiatic Society - 4 Volume* ನಲ್ಲಿ ರಾಯಚೂರ ಜಿಲ್ಲೆಯ ಪ್ರಾಚ್ಯಾವಶೇಷಗಳ ಸಂಪೂರ್ಣ ವಿವರ ನೀಡಿದ್ದಾನೆ. ಇವರು ತಿಳಿಸಿದಂತೆ ಕ್ರಿಶ ೧೮೪೨ ರಲ್ಲಿ ಮಸ್ಕಿ ಸಮೀಪದಲ್ಲಿರುವ 'ಬೆಣಕಲ್' ಎಂಬ ಗ್ರಾಮದಲ್ಲಿ ಕಲ್ಲಿನಲ್ಲಿ ನಿರ್ಮಿತವಾದ ಮನುಷ್ಯ ಆಕೃತಿ ಭಾರತದಲ್ಲಿಯೇ ಹಳೆಯದೆಂದೂ (ಪ್ರಸ್ತುತ ಇದು ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನಲ್ಲಿ ಬರುತ್ತದೆ) ಮಸ್ಕಿ ಪಿಕ್ಲಿಹಾಳ್‌ಗಳಲ್ಲಿ ಶಿಲಾಯುಗ, ನವಶಿಲಾಯುಗ, ತಾಮ್ರ ಶಿಲಾಯುಗ, ಕಬ್ಬಿಣಶಿಲಾಯುಗ ಸಂಸ್ಕೃತಿಗಳ ತಾಣವೆಂದು ಕಲ್ಪಿಸಲಾಗಿದೆ. ದನ, ಕುರಿ ಮೊದಲಾದ ಪ್ರಾಣಿಗಳ ಎಲುಬುಗಳು, ಗಾಜಿನ ಮತ್ತು ಮಣ್ಣಿನ ಬಳೆಗಳು ಮತ್ತು ಮಡಿಕೆಗಳು, ಚಾಕು, ಶಂಖ ಹಾಗೂ ತಾಮ್ರದ ಆಯುಧಗಳಿಗಿಂತ ಶಿಲೆಯ ಆಯುಧಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗಿವೆ ಎಂದು ಬರೆದಿದ್ದಾರೆ. ರೆವರೆಂಡ್ ಜಿ.ಕೇಯಿಸ್ ರವರು ಕ್ರಿಶ ೧೮೭೦ ರಿಂದ ೧೮೮೦ರ ಅವಧಿಯಲ್ಲಿ ಈ ಭಾಗದಲ್ಲಿಯ ಬೃಹತ್ ಶಿಲಾಯುಗದ ಗೋರಿಗಳನ್ನು ಪತ್ತೆಹಚ್ಚಿದ್ದಾರೆ. ಈ ಜಿಲ್ಲೆಯ ಪ್ರಾಗಿತಿಹಾಸಿಕ ಪ್ರಮುಖ ನೆಲೆಗಳೆಂದರೆ ಲಿಂಗಸುಗೂರು ತಾಲ್ಲೂಕಿನ ಆನೆಹೊಸೂರು, ಐದನಾಳ ಮತ್ತು ಕರಡಿಕಲ್ಲು ಇಲ್ಲಿ ೧೯೩೬-೩೭ರಲ್ಲಿ ಉತ್ಖನನ ಮಾಡಿದಾಗ ಕಂಚಿನ ಮೂರ್ತಿಗಳು ಹಾಗೂ ಕೆಲವು ಪಾತ್ರೆಗಳು ಸಿಕ್ಕಿವೆ. ಅವುಗಳು ಸದ್ಯ ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿವೆ. ಗೌಡೂರು ಮತ್ತು ಮಸ್ಕಿಗಳಲ್ಲಿ ತಾಮ್ರಶಿಲಾಯುಗದ ಸಂಸ್ಕೃತಿಯಿತ್ತು. ಆಗ ಮಾನವ ಶಿಲಾಯುಗದಿಂದ ಲೋಹಯುಗಕ್ಕೆ ಬಂದಂತಹ ಸಂದರ್ಭ ಆಗ ಅವನು ಬಳಸಿದ ಮೊದಲ ಲೋಹವೇ ತಾಮ್ರ. ಆಯುಧಗಳಿಗಾಗಿ ಮತ್ತು ದಿನ ಬಳಕೆಯ ಪರಿಕರಗಳಿಗಾಗಿ ತಾಮ್ರ ಮತ್ತು ಶಿಲೆಗಳೆರಡನ್ನು ಬಳಸಿದ್ದಕ್ಕಾಗಿ ಈ ಯುಗವನ್ನು 'ತಾಮ್ರಶಿಲಾಯುಗ' ಎಂದು ಕರೆಯುತ್ತಾರೆ. ಅಲ್ಲದೇ ಇಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ೧೯೪೭-೫೪ರಲ್ಲಿ ಉತ್ಖನನ ಕೈಗೊಂಡಿದರ ಫಲವಾಗಿ ಇಲ್ಲಿ ಕಲ್ಲಿನಕೊಡಲಿ, ಬಾಚಿ, ಉಳಿ, ಉಂಗುರ, ಬಳೆಗಳು ಲಭ್ಯವಾಗಿವೆ ಆದ್ದರಿಂದ ಈ ಸ್ಥಳ ಭಾರತದ ಪುರಾತತ್ವ ಶೋಧಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಜೊತೆಗೆ ಇಲ್ಲಿ ಬೃಹತ್ ಶಿಲಾಸಂಸ್ಕೃತಿಗೆ ಸಂಬಂಧಿಸಿದ ಕೆಲವು ಬೃಹತ್ ಕಲ್ಲುಗಳಿಂದ ನಿರ್ಮಿಸಿದ

ಗೋರಿಗಳು ಲಭ್ಯವಾಗಿವೆ. ಹೀಗಾಗಿ ಇದು ಸಿಂಧೂ ಬಯಲಿನ ಹರಪ್ಪ ಸಂಸ್ಕೃತಿಯ ಸಮಕಾಲೀನವಾಗಿತ್ತೆಂದು ಹೇಳಬಹುದಾಗಿದೆ. ನಂತರ ಮುದಬಾಳ, ಭಿಲ್ಲಮರಾಯನಗುಡ್ಡ, ಹೊನ್ನಳ್ಳಿ, ಪಿಕ್ಲಿಹಾಳ್, ವೆಂಕಟಾಪುರ, ಮಾನ್ವಿ ತಾಲ್ಲೂಕಿನ ಕಲ್ಲೂರಿನಲ್ಲಿ ಮೂರು ತಾಮ್ರದ ಖಡ್ಗಗಳು ಸಿಕ್ಕಿವೆ. ಕೋಟೆಕಲ್ ಮತ್ತು ವಟಗಲ್‌ನಲ್ಲಿ ಬೃಹತ್‌ಶಿಲಾಸಂಸ್ಕೃತಿಯ ಕಾಲಘಟ್ಟದಲ್ಲಿ ಬಳಸುತ್ತಿದ್ದ ಮಣ್ಣಿನ ವಿವಿಧ ಆಕಾರದ ಮಡಿಕೆಗಳು, ಮುಚ್ಚಳಗಳು, ಬಟ್ಟಲಗಳು ಮತ್ತು ಕಬ್ಬಿಣದ ಆಯುಧಗಳು ಲಭ್ಯವಾಗಿವೆ. ಮಸ್ಕಿ ಪರಿಸರದಲ್ಲಿ ಇನ್ನಿತರ ಸ್ಥಳಗಳು ಕವಿತಾಳ, ನವಲಕಲ್, ಸಿರಿವಾರ, ಅಂಗೋಳಿ, ಸಿಂಧನೂರ ತಾಲ್ಲೂಕಿನ ಕುರುಕುಂದಿ, ರೊಡಲಬಂಡ, ಗೊಬ್ಬರಕಲ್ಲು, ಅಂಗೋಲಿ, ಸಾಲಗುಂದ ಇವು ಪ್ರಾಗಿತಿಹಾಸ ತಾಣಗಳಾಗಿವೆ. ಮಸ್ಕಿ ಪರಿಸರವು ಈ ಎಲ್ಲಾ ಪುರಾತತ್ವಿಯ ಅಂಶಗಳನ್ನು ತನ್ನ ಒಡಲಲ್ಲಿ ಕ್ರೋಢೀಕರಿಸಿಕೊಂಡಿದೆ. ಹೀಗೆ ಈ ಜಿಲ್ಲೆ ಪ್ರಾಗಿತಿಹಾಸಿಕತೆಯ ಕುರಿತಾಗಿ ೧೯೫೨ರಲ್ಲಿ ಎಫ್.ಆರ್.ಆಲ್ಚಿನ್‌ರವರು ಪಿಕ್ಲಿಹಾಳನಲ್ಲಿ ಸಂಶೋಧನೆ ಕೈಗೊಂಡಾಗ ಈ ಭಾಗ ಸಿಂಧೂ ಬಯಲಿನಲ್ಲಿನ ಹರಪ್ಪಾ ಮೆಹೊಂಜೋದಾರ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹದ್ದು ಎಂದು ಹೇಳಿದ ಮಾತು ಈ ಭಾಗದ ಪ್ರಾಗಿತಿಹಾಸದ ಮೇಲೆ ಬೆಳಕನ್ನು ಚೆಲ್ಲುವಂತಹದ್ದು.[೮]

ಈ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಮಸ್ಕಿ ಪರಿಸರದ ಸ್ಥಳನಾಮಗಳು ಈ ನಾಡಿನ ಪ್ರಾಚೀನ ಸ್ಥಳನಾಮಗಳಲ್ಲಿ ಒಂದೊಂದು ಸ್ಥಳಗಳು ವಿಭಿನ್ನತೆಯಿಂದ ಕೂಡಿರುತ್ತವೆ. ಅವುಗಳನ್ನು ಈ ಮುಂದಿನಂತೆ ನೋಡಬಹುದಾಗಿದೆ. ಸ್ಥಳನಾಮ ಉಗಮಕ್ಕೆ ಪೂರಕವಾಗುವ ಅಂಶಗಳನ್ನು ಈ ಕೆಳಗೆ ಕಾಣಿಸುವಂತೆ ಮೂರು ಪ್ರಕಾರ(ವಿಧ)ಗಳಾಗಿ ವಿಂಗಡಿಸಬಹುದಾಗಿದೆ.

೧) ಪ್ರಾಕೃತಿಕ ಸ್ಥಳನಾಮಗಳು

೨) ಸಾಂಸ್ಕೃತಿಕ ಸ್ಥಳನಾಮಗಳು

೩) ಸಂಕೀರ್ಣ ಸ್ಥಳನಾಮಗಳು

**೧) ಪ್ರಾಕೃತಿಕ ಸ್ಥಳನಾಮಗಳು**

ಮಾನವನು ಪ್ರಕೃತಿಯ ಒಂದು ಭಾಗವಾಗಿ ಬೆಳೆದಿದ್ದಾನೆ. ಈ ಕಾರಣದಿಂದ ಪ್ರಕೃತಿಯಲ್ಲಿನ ಅನೇಕ ಅಂಶಗಳಿಗೆ ಮಹತ್ವ ನೀಡಿ ಸ್ಥಳನಾಮಗಳಲ್ಲಿ ಪ್ರಾಕೃತಿಕ ಅಂಶಗಳನ್ನು ಬಳಸಿಕೊಂಡಿರುವುದು ಅತ್ಯಂತ ಪ್ರಾಚೀನವಾದ ವಿಧಾನವಾಗಿದೆ ಎತ್ತರದ ಭೂ ಪ್ರದೇಶ, ಬೆಟ್ಟ-ಗುಡ್ಡ, ಕಾಡು, ನದಿ ಪ್ರಾದೇಶಿಕ ಭೂ ವಿಶಿಷ್ಟತೆ (ಮರಳು, ಕೆಂಪುಮಣ್ಣು) ಮುಂತಾದ ಅಂಶಗಳು ನಿರ್ದಿಷ್ಟವಾಗಿ ಅಥವಾ ವಾರ್ಗಿಕವಾಗಿ ಕಾರ್ಯನಿರ್ವಹಿಸುತ್ತವೆ. ಈ ವಿಶಿಷ್ಟತೆಗಳನ್ನು ಬಳಸಿಕೊಳ್ಳಲು ಕಾರಣವೆಂದರೆ ಮಾನವನಂತೆ ಪ್ರಕೃತಿಯು ಅಲ್ಪಾಯುಷಿಯಲ್ಲ. ಭೌಗೋಳಿಕ ಲಕ್ಷಣದಿಂದ ಒಂದು ನಿರ್ದಿಷ್ಟ ಸ್ಥಳವನ್ನು ಗುರುತಿಸುವಲ್ಲಿ ಸ್ಪಷ್ಟತೆ ಇರುತ್ತದೆ. ಮಾನವನು ಬುದ್ಧಿವಂತಿಕೆಯಿಂದ ಈ ನಿರ್ದಿಷ್ಟಗಳನ್ನು ಬಳಸಿಕೊಂಡಿದ್ದಾನೆ.

**ಜಲವಾಚಿ ಸ್ಥಳನಾಮ** :- ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಆ ಜಲವನ್ನು ಅವಲಂಬಿಸಿಯೇ ಕೆಲವು ಗ್ರಾಮಗಳಿಗೆ ಹೆಸರು ಕರೆಯುವ ರೂಢಿ ಆರಂಭವಾಗಿರಬಹುದು. ಅಂತಹ ಭೂ ಸ್ಥಿತಿಯನ್ನು ಹೇಳುವ ಸ್ಥಳನಾಮಗಳು ಹೆಚ್ಚು ಹೆಚ್ಚಾಗಿ ದೊರೆಯುತ್ತವೆ. ಮಸ್ಕಿ ಪರಿಸರದ "ಜಲವಾಚಿ" ಸ್ಥಳನಾಮಗಳು ಹೀಗಿವೆ.
ಉದಾ : ಅಂತರಗಂಗಿ, ಗೌಡನಬಾವಿ, ದೀನಸಮುದ್ರ, ಹೂವಿನಬಾವಿ, ನೀರಲಕೇರಿ.

**ಶಿಲಾವಾಚಿ ಸ್ಥಳನಾಮಗಳು** :- ಪ್ರಾಕೃತಿಕ ಲಕ್ಷಣಗಳನ್ನು ಸೂಚಿಸುವ ಸ್ಥಳನಾಮಗಳಲ್ಲಿ ಶಿಲಾವಾಚಿ ಸ್ಥಳನಾಮಗಳು ಅತ್ಯಂತ ಪುರಾತನವಾದವು. ಶಿಲೆಯ ಅರ್ಥವಿರುವ ಕಲ್ಲು, ಬಂಡೆ, ಬೆಂಚಿ, ಗುಡ್ಡ, ಗುಂಡು ಎಂಬ ಪದಗಳನ್ನು ಗಮನಿಸಬಹುದು. ಮಸ್ಕಿ ಪರಿಸರದಲ್ಲಿನ ಶಿಲಾವಾಚಿ ಸ್ಥಳನಾಮಗಳು ಈ ಕೆಳಗಿನಂತಿವೆ.
ಉದಾ : ಹಸಮಕಲ್ಲು, ಕರಡಿಕಲ್ಲು, ಗುಡದೂರು, ನಾಗರಬೆಂಚಿ, ಇತ್ಯಾದಿ.

**ಬಯಲು, ಎತ್ತರದ ಭೂ ಪ್ರದೇಶ ಸೂಚಿಸುವ ಸ್ಥಳನಾಮಗಳು** :- ದಿನ್ನೆ ಎಂಬಂತಹ ವಾರ್ಗಿಕದ ಮೇಲೆ ಇದನ್ನು ವರ್ಗಿಕರಿಸಲಾಗಿದೆ. ಇವುಗಳು ಪೂರ್ವಪದಗಳು ಜಾತಿ, ವ್ಯಕ್ತಿ, ಪ್ರಾಣಿ, ಪಕ್ಷಿ, ಧಾನ್ಯ, ದೈವ, ಪರಿಮಾಣ ಮುಂತಾದವುಗಳನ್ನು ಸೂಚಿಸುವ ಪದಗಳಾಗಿವೆ. ಮಸ್ಕಿ ಪರಿಸರದಲ್ಲಿನ ಶಿಲಾವಾಚಿ ಸ್ಥಳನಾಮಗಳು ಈ ಕೆಳಗಿನಂತಿವೆ.

ಉದಾ : ನಂಜಲದಿನ್ನಿ, ಗುಡಗಲದಿನ್ನಿ ಬುದ್ದಿನ್ನಿ, ಮಾರಲದಿನ್ನಿ, ದೊಡ್ಡದಿನ್ನಿ, ಚಿಕ್ಕದಿನ್ನಿ, ಯಲಗಲದಿನ್ನಿ, ಕಮಂಡಲದಿನ್ನಿ, ತುಗ್ಗಲದಿನ್ನಿ, ನರ್ಕಲದಿನ್ನಿ, ಇತ್ಯಾದಿ.

**ಸಸ್ಯ, ಗಿಡ, ಮರ ಇತ್ಯಾದಿ ಸೂಚಕ ಸ್ಥಳನಾಮಗಳು** :- ಹುಲ್ಲೂರು, ಕಮಲದಿನ್ನಿ, ಹೂವಿನಬಾವಿ, ಕಳ್ಳಿಲಿಂಗಸೂಗೂರು, ಉದ್ಬಾಳ, ಇತ್ಯಾದಿಗಳು.

**ಪ್ರಾಣಿ, ಪಕ್ಷಿ ಸೂಚಕ ಸ್ಥಳನಾಮಗಳು** :- ಹುಲಿಗುಡ್ಡ, ನಾಗರಬೆಂಚಿ, ಕರಡಿಕಲ್ಲು, ನಾಗರಬೆಂಚಿ.

**ಲೋಹ, ಸಂಪತ್ತುವಾಚಿ ಸ್ಥಳನಾಮಗಳು** :- ಈ ಭಾಗದಲ್ಲಿ ಹೆಚ್ಚಾಗಿ ಲೋಹಗಳನ್ನು ಬಳಸುತ್ತಿರಬಹುದು. ಹಾಗಾಗಿ ಈ ಕೆಳಗಿನ ಹೆಸರುಗಳು ಬಂದಿರಬಹುದು.
ಉದಾ : ಬೆಳ್ಳಿಹಾಳ, ಹೊನ್ನಹಳ್ಳಿ, ಹೊನ್ನಕಣಿ, ಆಯುಧನಾಳ, ಇತ್ಯಾದಿ.

**೨) ಸಾಂಸ್ಕೃತಿಕ ಸ್ಥಳನಾಮಗಳು**

ವ್ಯಕ್ತಿವಾಚಿ ಸ್ಥಳನಾಮಗಳು ಸಾಮಾನ್ಯವಾಗಿ ಕೆಲವು ಊರುಗಳಿಗೆ ವ್ಯಕ್ತಿಯ ಹೆಸರುಗಳು ಬಂದಿರುತ್ತವೆ. ಸ್ಥಳನಾಮ ನಿರ್ದೇಶನದ ಆರಂಭಿಕ ಹಂತ ನೈಸರ್ಗಿಕ ವಾತಾವರಣವನ್ನು ಅವಲಂಬಿಸಿತ್ತು. ಮುಂದೆ ಸಂಸ್ಕೃತಿಯ ವಿಕಸನದ ಹಾದಿಯಲ್ಲಿ ಜನಾಂಗಿಕವಾಗಿ ಸಾಗಿ ಬಂತು. ಇದರೊಂದಿಗೆ ಅಂದಿನ ಸಮಾಜದಲ್ಲಿ ಯಾವುದೋ ಕಾರಣಕ್ಕೆ ವಿಶೇಷವಾದ ಘಟನೆಯಿಂದ, ಹೆಸರಾದ ವ್ಯಕ್ತಿಯನ್ನು ಒಂದೊಂದು ಗ್ರಾಮಕ್ಕೆ ಕರೆದರು. ಪರಂಪರೆಯ ನೆನಪಿಗಾಗಿ ಈ ಬಗೆಯ ನಾಮನಿರ್ದೇಶನ ನಡೆಯಿತು.

**ವ್ಯಕ್ತಿ ಆಧಾರಿತ ಸ್ಥಳನಾಮಗಳು** :- ಗೌಡೂರು, ಜೆನಕನಾಳ, ಸಾಗರಕ್ಯಾಂಪ್, ಸುಲ್ತಾನಪುರ, ಬೊಮ್ಮನಾಳ, ಮ್ಯಾದಾರಾಳ, ಬೇಡರಕಾರ್ಲಕುಂಟೆ, ವೆಂಕಟಾಪುರ, ತಿಮ್ಮಾಪುರ, ಇತ್ಯಾದಿಗಳು.

**ದೈವವಾಚಿ ಸ್ಥಳನಾಮಗಳು** :- ವಿವಿಧ ಬಗೆಯ ಧರ್ಮಗಳು ಮತ್ತು ಆ ಧರ್ಮದ ಹೆಸರಿನ ಆರಾಧ್ಯದೈವಗಳು ನೆಲೆಗೊಂಡಿರುವ ಸ್ಥಳಗಳಿಗೆ ಸಂಬಂಧಿಸಿದ ಕೆಲವು ಸ್ಥಳನಾಮಗಳು ಮಸ್ಕಿ ಪರಿಸರದಲ್ಲಿ ಕಂಡುಬರುತ್ತವೆ. ಅವುಗಳೆಂದರೆ, ನಾಗರಬೆಂಚಿ, ಗುಡಿಹಾಳ, ಗದ್ದಿಗೆ, ದೇವರಭೂಪುರ.

**ಜಾತಿ-ವೃತ್ತಿ ವಾಚಿ ಸ್ಥಳನಾಮಗಳು** :- ದಿಗನಾಯಕನಹಳ್ಳಿ, ಮ್ಯಾದರಹಾಳ, ಬೇಡರಕಾರ್ಲಕುಂಟೆ.

**ಪರಿಮಾಣವಾಚಕ ಸ್ಥಳನಾಮಗಳು** :- ಹೀರೆಅಂತರಗಂಗಿ, ಚಿಕ್ಕಅಂತರಗಂಗಿ, ಹೀರೆಕಡಬೂರು, ಚಿಕ್ಕಕಡಬೂರು, ಹೀರೆಹೆಸರೂರು, ಚಿಕ್ಕಹೆಸರೂರು, ಇತ್ಯಾದಿಗಳು.

**೩) ಸಂಕೀರ್ಣ ಸ್ಥಳನಾಮಗಳು**

ಏರಿ :- ಜಲವಾಚಿ ಕೆರೆಕಟ್ಟೆಗಳನ್ನು ಹೇಳುವ ಪದ

ಉದಾ : ಉಪ್ಪೇರಿ, ಚಿಕ್ಕ ಉಪ್ಪೇರಿ, ಮಿಚೇರಿ.

**ಊರು** :- ಕೋಮನೂರು, ಗುಡದೂರು, ಲಿಂಗಸುಗೂರು, ಹಾಲೂರು, ಹೆಸೂರು

**ಕಲ್ಲು** :- ಕರಡಿಕಲ್ಲು, ಟನಮನಕಲ್ಲು, ಸಂತೆಕೆಲ್ಲೂರು, ಹನುಮನಕಲ್ಲು

**ಪುರ** :- ವಾಸ್ತವ್ಯವಾಚಿ ಪದ ಸಂಸ್ಕೃತ ಪದದಿಂದ ಅಂತ್ಯಗೊಳ್ಳುವ ಪುರವಾರ್ಗಿಕವು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಉದಾ : ಪಾರಪುರ, ಸುಲ್ತಾನಪುರ, ಮೀರಾಪುರ.

**ದಿನ್ನೆ** :- ಎತ್ತರವಾದ ಭೂ ಪ್ರದೇಶ, ಭೌಗೋಳಿಕ ಲಕ್ಷಣಗಳನ್ನು ಸೂಚಿಸುವ ಪದ ಇದರಲ್ಲಿ ದಿಬ್ಬ, ಎತ್ತರದ ಗುಡ್ಡ, ದಿನ್ನೆ ಎಂಬುವುದಾಗಿ ಬಳಕೆಯಾಗುತ್ತದೆ.

ಉದಾ : ನಂಜಲದಿನ್ನಿ, ಮಾರಲದಿನ್ನಿ, ಬುದ್ದಿನ್ನಿ, ಗುಡಗಲದಿನ್ನಿ, ತುಗ್ಗಲದಿನ್ನಿ, ಇತ್ಯಾದಿಗಳು.

**ತಾಂಡ** :- ವಾಸ್ತವ್ಯವಾಚಿ ಲಂಬಾಣಿ ಸಮುದಾಯದವರ ವಾಸದ ನೆಲೆ.

ಉದಾ : ಮಸ್ಕಿತಾಂಡ, ಮೆದಕಿನಾಳತಾಂಡ, ಅಂತರಗಂಗಿತಾಂಡ, ಇತ್ಯಾದಿ.

**ಹಾಳ** :- ಆದಿಕಾಲದ ಮಾನವನ ವಾಸದ ನೆಲೆಗಳನ್ನು ಕುರಿತು ಸೂಚಿಸುವುದು.

ಉದಾ : ಮೆದಕಿನಾಳ, ಹಂಪನಾಳ, ಮ್ಯಾದರಹಾಳ, ಬುದ್ದಿನ್ನಿ, ಬೂದಿವಾಳ.[೯]

## ೨.೩ ಪ್ರಾಗಿತಿಹಾಸ

ಪ್ರಕೃತಿ ಮಾನವನಿಗೆ ನೀಡಿದ ಕೊಡುಗೆಗಳಲ್ಲಿ ಶಿಲೆಯೂ ಒಂದಾಗಿದೆ. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವನಿಗೆ ಗಡ್ಡೆ-ಗೆಣಸುಗಳನ್ನು ಅಗೆದು ತೆಗೆಯಲು, ಗಿಡಗಳನ್ನು ಕಡಿಯಲು, ಬೇಟೆಯಾಡಲು, ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ತುಂಡು ಮಾಡಲು ಆಯುಧಗಳನ್ನು ತಯಾರಿಸಲು ಶಿಲೆ ಮಾನವನಿಗೆ ನೆರವಾಗಿದೆ.[೧೦] ಅಂದು ಮಾನವನ ಜೀವನದ ಒಂದು ಭಾಗವಾಗಿ ಶಿಲೆ ಬಳಕೆಯಾಗುತ್ತಿತ್ತು. ಈ ಕಾಲಾವಧಿಯನ್ನು ಶಿಲಾಯುಗ (ಸ್ಟೋನೇಜ್) ಎಂದು ಕರೆಯುತ್ತಾರೆ. ಅತ್ಯಂತ ದೀರ್ಘವಾದ ಈ ಯುಗವನ್ನು ಕ್ರಮವಾಗಿ ೧.ಹಳೇಶಿಲಾಯುಗ, ೨.ಸೂಕ್ಷ್ಮಶಿಲಾಯುಗ, ೩.ನವಶಿಲಾಯುಗ, ೪.ತಾಮ್ರಶಿಲಾಯುಗ ಮತ್ತು ೫.ಬೃಹತ್ ಶಿಲಾಯುಗ ಎಂದು ಐದು ಹಂತಗಳಾಗಿ ವಿಭಾಗಿಸಲಾಗಿದೆ.[೧೧]

**ಹಳೆಶಿಲಾಯುಗ**

ಹಳೇಶಿಲಾಗದ ಇತಿಹಾಸದ ಬಗ್ಗೆ ಕರ್ನಾಟಕದಲ್ಲಿ ವಿಸ್ತೃತವಾದ ಅಧ್ಯಯನಗಳು ನಡೆದಿವೆ. ಕೃಷ್ಣ, ಕಾವೇರಿ, ತುಂಗಭದ್ರಾ ಮತ್ತು ಅವುಗಳ ಉಪನದಿಗಳ ಪ್ರದೇಶಗಳಲ್ಲಿ ಹಳೇಶಿಲಾಯುಗದ ಮಾನವನ ಬದುಕು ರೂಪಗೊಂಡಿತ್ತು. ಆದಿ ಹಳೆಶಿಲಾಯುಗದ ಮಾನವನ ಅವಶೇಷಗಳು ಅನೇಕ ಸ್ಥಳಗಳಲ್ಲಿ ಕಂಡುಬಂದಿವೆ. ಅವುಗಳಲ್ಲಿ ಮಸ್ಕಿ ಮತ್ತು ಮಸ್ಕಿ ಪರಿಸರದ ಐದುಬಾವಿ, ಜಲದುರ್ಗ, ಪಲಗಲದಿನ್ನಿ, ರೌಡಲಬಂಡ (ದೇವರಗುದ್ದೆ) ಗ್ರಾಮಗಳು ಪ್ರಮುಖವಾಗಿ ರಾಬರ್ಟ್‌ಬ್ರೂಸ್‌ಫೂಟ್‌ರವರು ಪತ್ತೆ ಹಚ್ಚಿದ್ದಾರೆ. ಮಸ್ಕಿ ಪ್ರಾಗಿತಿಹಾಸಿಕ ನೆಲೆ ಸಣ್ಣ ಗುಡ್ಡಗಳ ವರ್ತುಲದ ಮಧ್ಯೆ ಆಯಾಕಟ್ಟಿನ ಸ್ಥಳದಲ್ಲಿದೆ.

ಕ್ರಿ.ಶ. ೧೮೮೮ರ ಸುಮಾರಿನಲ್ಲಿ ರಾಬರ್ಟ್‌ಬ್ರೂಸ್‌ಫೂಟ್‌ರವರು ಈ ನೆಲೆಯನ್ನು ಸಂದರ್ಶಿಸಿ ನವ ಶಿಲಾಯುಗ ಮತ್ತು ನಂತರ ಕಾಲದ ಅನೇಕ ವಸ್ತುಗಳನ್ನು ಸಂಗ್ರಹಿಸಿದ್ದರು ಅವು ಪ್ರಸ್ತುತ ಮದ್ರಾಸಿನ ಪ್ರಾಚ್ಯಾವಸ್ತು ಸಂಗ್ರಹಾಲಯದಲ್ಲಿವೆ. ನಂತರ ಜಿ. ಯಸ್ದಾನಿಯವರು ಈ ಊರಿಗೆ ಬಂದು ಮತ್ತಷ್ಟು ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದರು.

ಕ್ರಿ.ಶ.೧೯೨೮-೨೯ರಲ್ಲಿ ಲಿಯೋನಾರ್ಡ್‌ಮನ್ ಸಾಹೇಬರು ರಾಯಚೂರು ಜಿಲ್ಲೆಯ ಪ್ರಾಚೀನ ವಸ್ತುಗಳನ್ನು ಕುರಿತು ಬರೆಯುತ್ತಾ ಮಸ್ಕಿಯಲ್ಲಿ ದೊರೆತ ಕುರುಹುಗಳಿಗೆ ವಿಶೇಷ ಮನ್ನಣೆ ನೀಡಿದ್ದಾರೆ. ಕ್ರಿ.ಶ ೧೯೩೫-೩೭ರಲ್ಲಿ ಆಗಿನ ಹೈದ್ರಾಬಾದ್ ಸರ್ಕಾರ ಇಲ್ಲಿ ಬೃಹತ್ ಪ್ರಮಾಣದಲ್ಲಿ ಉತ್ಖನನವನ್ನು ನಡೆಸಿತು. ಹಾಗೆಯೇ ಇವರು ಮುಂದುವರೆದು ಕ್ರಿ.ಶ.೧೯೪೦ರಲ್ಲಿ ಕುಟ್ಟಿದ ಮತ್ತು ಗವಿವರ್ಣದ ಚಿತ್ರಗಳನ್ನು ಶೋಧಿಸಿದರು.

ಕ್ರಿ.ಶ ೧೯೫೪ರಲ್ಲಿ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ವತಿಯಿಂದ ಬಿ.ಕೆ ಥಾಪರ್ ಅವರು ನಡೆಸಿದ ಉತ್ಖನನದಲ್ಲಿ ನಾನಾ ರೀತಿಯ ಕಲ್ಲಿನ ಚಕ್ಕೆಗಳು, ಮಣಿಗಳು, ಸಾದಾ ಜಿಳಿಪಿನ ಮಣ್ಣಿನ ಪಾತ್ರೆಗಳು, ಗುಲಾಬಿ ವರ್ಣ ಲೇಪಿತ ಪಾತ್ರೆಗಳು ಇತ್ಯಾದಿಗಳನ್ನು ಗುರುತಿಸಿದ್ದಾರೆ.

**ನವಶಿಲಾಯುಗ**

ಕೃಷಿ ಆಧಾರಿತ ಬದುಕನ್ನು ರೂಪಿಸಿಕೊಂಡು ಹಾಗೂ ಪ್ರಾಣಿಗಳನ್ನು ಪಳಗಿಸಿಕೊಂಡು ಒಂದೆಡೆ ನೆಲೆಯಾಗಿ ನಿಂತು ಗ್ರಾಮೀಣ ಬದುಕನ್ನು ಕಟ್ಟಿಕೊಂಡ ಈ ಹಂತದ ಬೆಳವಣಿಗೆಯನ್ನು ಗೋರ್ಡನ್ ಚೈಲ್ಡ್ ಅವರು ನೂತನ ಶಿಲಾಯುಗ "ಕ್ರಾಂತಿಕಾರಕ ಕಾಲಘಟ್ಟ" ಎಂದು ಕರೆದರು. ಇಂದಿನ ಗ್ರಾಮೀಣ ಬದುಕಿಗೆ ಇದೇ ಮೂಲಕಾರಣ ಹಾಗೂ ಪ್ರೇರಣೆಯಾಗಿದೆ ಎನ್ನಬಹುದು. ಈ ಹಂತದ ಉಪಕರಣಗಳನ್ನು ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೆತ್ತುಳಿ, ಅರೆಯುವಕಲ್ಲು, ಉಂಗುರಕಲ್ಲು, ಕವಣೆಕಲ್ಲು ಮೊದಲಾದ ಉಪಕರಣಗಳನ್ನು ಸಿದ್ಧಗೊಳಿಸಲಾಯಿತೆಂದು ತಿಳಿಯುತ್ತದೆ.[೧೨] ಮಣ್ಣಿನ ಮಡಿಕೆಗಳು ಆರಂಭ ಹಂತದಲ್ಲಿ ಕೈಯಲ್ಲಿ ರೂಪಿಸಲಾಗುತ್ತಿತ್ತು. ನಂತರದಲ್ಲಿ ತಿರುಗಿಸಲ್ಪಡುವ ತಿಗರಿ(ಚಕ್ರ)ಗಳಲ್ಲಿ ತಯಾರಿಸಲಾಗುತ್ತಿತ್ತು. ಹಾಗೂ ಹೆಚ್ಚು ತೆಳ್ಳನೆಯ ಮೃತ್ಪಾತ್ರೆಗಳು ಕಂಡುಬರುತ್ತವೆ.

ಈ ಸಂಸ್ಕೃತಿಗೆ ಸಂಬಂಧಿಸಿದಂತೆ ಬ್ರಹ್ಮಗಿರಿ, ಮಸ್ಕಿ, ಪಿಕ್ಲಿಹಾಳ್, ತೆಕ್ಕಲಕೋಟೆ, ಕಪಗಲ್, ಹಳ್ಳೂರು, ಟಿ ನರಸಿಪುರ, ಹೆಮ್ಮಿಗೆ, ಬನಹಳ್ಳಿ ಮುಂತಾದ ನೆಲೆಗಳಲ್ಲಿ ಕಂಡುಬಂದಿದೆ. ಈ ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಮಸ್ಕಿ ಪಟ್ಟಣ ಹಾಗೂ ಪರಿಸರದ ಸುತ್ತಮುತ್ತಲಿನ ಕೆಲವು ಗ್ರಾಮಗಳಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದಂತೆ ಆ ಕಾಲಘಟ್ಟದ ಮಾನವನು ಬಳಸಿ ಬಿಟ್ಟು ಹೋದ ಕುರುಹುಗಳಾದ ಅರೆಯುವ ಕಲ್ಲುಗಳು, ಕುಟ್ಟುಕಲ್ಲುಗಳು, ಕಲ್ಲಿನ ಕೊಡಲಿ, ಗೃಹಬಳಕೆಯ ವಿವಿಧ ನಮೂನೆಯ ಕಲ್ಲಿನ ಬಿಲ್ಲೆ, ನಯವಾದ ಮತ್ತು ಒರಟಾದ ಬೂದುಬಣ್ಣದ ಮಡಿಕೆಯ ಚೂರುಗಳು, ಕೆಂಪು ಬಣ್ಣ ಲೇಪಿತ ಮಡಿಕೆಚೂರುಗಳು, ಬೂದಿದಿಬ್ಬ ಇತ್ಯಾದಿ ಅವಶೇಷಗಳು ಕಾಣಬಹುದಾಗಿದೆ.

ಮಸ್ಕಿಯ ಸರಕಾರಿ ಪ್ರಥಮದರ್ಜೆ ಕಾಲೇಜ್ ಹಿಂಬದಿಯಲ್ಲಿ ನವಶಿಲಾಯುಗದ ಬೂದಿದಿಬ್ಬವಿದ್ದು, ಇಲ್ಲಿ ಗುಂಡುಕಲ್ಲು, ಬೀಸುವ ಕಲ್ಲುಗಳು, ವಿವಿಧ ಬಗೆಯ ಮಡಿಕೆಗಳು ದೊರೆತಿವೆ. ಮಲ್ಲಯ್ಯನ ಬೆಟ್ಟ ಹಿಂಭಾಗದಲ್ಲಿನ ವಿಸ್ತಾರವಾದ ಪ್ರದೇಶದಲ್ಲಿ ಈ ಕಾಲಕ್ಕೆ ಸಂಬಂಧಿಸಿದ ಮಾನವನ ಅಸ್ತಿಯನ್ನು ೨೦೧೯ರಲ್ಲಿ ಮಾಧ್ಯಮದಲ್ಲಿ ವರದಿಯಾಗಿದೆ. ಪ್ರಸ್ತುತ ಅಧ್ಯಯನ ಸಂದರ್ಭ ಇಲ್ಲಿ *pot burial* ದೊರೆತ್ತಿದ್ದು ಇದರ ಕಂಠಭಾಗದ ಅಳತೆ ೪೨.ಸೇ.ಮೀ ಉದ್ದ, ನಡುವಿನ ಭಾಗ ೪೮ ಸೇ.ಮೀ. ಇದ್ದು ಇನ್ನು ಆಳ ೨೧ ಸೇ.ಮೀ. ಇದೆ. ಇದರಲ್ಲಿ ಸಣ್ಣ

ಮಗುವಿನ ಪಳಿಯುಳಿಕೆಯ ಸೂಚಕದಂತಿರುವ ದವಡೆಯ ಭಾಗ ಹಾಗೂ ಇತರೆ ಮೂಳೆಗಳು ದೊರೆತಿವೆ. ಇನ್ನೂ ನಂಜಲದಿನ್ನಿ ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಸಹ ಈ ಪ್ರದೇಶಕ್ಕೆ ಸಂಬಂಧಿಸಿದ ಅನೇಕ ಕುರುಹುಗಳು ದೊರೆಯುತ್ತವೆ. ಅದರಲ್ಲಿ ಮುಖ್ಯವಾಗಿ ಸ್ಥಳೀಯರು ಜಂಬಲದಿನ್ನಿ (ಪಾತ್‌ಪರುವು), ಜೋಗಲದಿನ್ನಿ, ಕಂಬಗಲ್ಲು, ಹೆಡಗಿಬಾಳ ಮತ್ತು ರಂಭಾವತಿ ಪಟ್ಟಣಗಳೆಂಬ ಊರುಗಳಿದ್ದವು ಎಂಬ ಮಾಹಿತಿಯನ್ನು ಇಲ್ಲಿನ ಹಿರಿಯರು ನೀಡುತ್ತಾರೆ. ಜೊತೆಗೆ ಇದರ ಬಗ್ಗೆ ಜಾನಪದವನ್ನು ಸಹ ಹಾಡುತ್ತಾರೆ.

ನಂಜಲದಿನ್ನಿ ಗ್ರಾಮದ ಪಶ್ಚಿಮ ದಿಕ್ಕಿಗೆ ಸುಮಾರು ೮೦೦ ಮೀಟರ್ ದೂರದಲ್ಲಿ ಅಂದರೇ ಸ್ಥಳೀಯವಾಗಿ ಕನಕಪ್ಪನಗುಡ್ಡ ಎಂದು ಕರೆಯುವ ಬೆಟ್ಟದ ಇಳಿಜಾರಿನ ಪ್ರದೇಶದಲ್ಲಿ (ಈ ಸ್ಥಳವನ್ನೇ ರಂಭಾವತಿ ಪಟ್ಟಣ ಎನ್ನುವರು) ಈ ಕಾಲಕ್ಕೆ ಸಂಬಂಧಿಸಿದ ವಾಸಸ್ಥಾನವಾಗಿತ್ತು ಎಂದು ಹೇಳಬಹುದಾಗಿದೆ. ಇಲ್ಲಿ ೨೦-೨೫ ವರ್ಷಗಳ ಹಿಂದೆ ೪ ರಿಂದ ೫ ಅಡಿ ಎತ್ತರದ ಬೂದಿದಿಬ್ಬ ಇತ್ತೆಂದು ಹೇಳಲಾಗುತ್ತದೆ. ಪ್ರಸ್ತುತ ಕೃಷಿಗಾಗಿ ಇಂದು ಸಮಟ್ಟಾಗಿರುವುದು ವಿಪರ್ಯಾಸವೇ ಸರಿ ಈ ರೀತಿಯ ಸುಮಾರು ೫ ರಿಂದ ೧೦ ಎಕರೆ ಪ್ರದೇಶದಲ್ಲಿ ಬೂದುಬಣ್ಣದ ಮಡಿಕೆಗಳು, ಕೆಂಪುಬಣ್ಣದ ಚಿತ್ರಿತ ಮಡಿಕೆಗಳು ದೊರೆಯುತ್ತವೆ. ಈ ರೀತಿಯ ಮಣ್ಣು ಮತ್ತು ಕುರುಹುಗಳು ಈ ಗ್ರಾಮದ ಸುತ್ತಲಿನ ಮೂರು ಬೇರೆ ಬೇರೆ ಸ್ಥಳಗಳಲ್ಲಿ ಕಾಣಬಹುದಾಗಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆಗಳು ಮಾಡುವ ತುರ್ತು ಅವಶ್ಯಕತೆಯಿದೆ ಇಲ್ಲದಿದ್ದರೆ ಇದು ನಶಿಸುವ ಹಂತ ಇನ್ನು ಬಹಳ ದೂರವಿಲ್ಲ.

**ಶಿಲಾತಾಮ್ರಯುಗ**

ಮಸ್ಕಿಯು ಶಿಲಾತಾಮ್ರಯುಗದ ಪ್ರಮುಖ ನೆಲೆಯಾಗಿದೆ. ಇಲ್ಲಿ ತಾಮ್ರದ ಬಳಕೆ ಅತ್ಯಲ್ಪವಾದಂತೆ ತೋರುತ್ತದೆ. ಹೆಚ್ಚಿನ ಆಯುಧೋಪಕರಣಗಳೆಲ್ಲ ಶಿಲೆಯವು. ಇವುಗಳಲ್ಲಿ ಚರ್ಟ್ ಶಿಲೆಯ ತೆಳು ನೀಲ ಚಕ್ಕೆಗಳು, ಅರ್ಧಚಂದ್ರಾಕೃತಿಗಳು, ಕೊರಗ ಮುಂತಾದ ಸೂಕ್ಷ್ಮಶಿಲೋಪಕರಣಗಳು ಮತ್ತು ಅವುಗಳನ್ನು ಮಾಡಲು ಉಪಯೋಗಿಸುತ್ತಿದ್ದ ದುಂಡುಕಲ್ಲು ದೊರೆತಿವೆ. ನಯ ಮಾಡಿದ ಕರಿಕಲ್ಲಿನ ಕೈಕೊಡಲಿಗಳ ಉಪಯೋಗ ಇದ್ದಂತೆ ತೋರುತ್ತದೆ. ದನ, ಕುರಿ ಮುಂತಾದ ಸಾಕು ಪ್ರಾಣಿಗಳ ಮೂಳೆಗಳು ಇಲ್ಲಿ ದೊರೆತ್ತಿದ್ದು ಇದು ಪಶುಪಾಲನೆ ಮತ್ತು ಸ್ವಲ್ಪಮಟ್ಟಿನ ಬೇಸಾಯ ಅಂದಿನ ಜನರ ಜೀವನಾಧಾರಗಳಾಗಿದ್ದವೆಂಬುವುದನ್ನು ಸೂಚಿಸುತ್ತವೆ. ಈ ಕಾಲದ ಮನೆ ಅಥವಾ ಇನ್ನಾವ ವಾಸ್ತು ಅವಶೇಷಗಳು ದೊರೆತ್ತಿಲ್ಲ. ಆದರೂ ಸಹ ಕೆಲವು ಕಂಬದ ಗುಳಿಗಳು ಕಂಡುಬಂದಿವೆ. ಆ ಕಾಲದ ಮಡಿಕೆಗಳೆಲ್ಲಾ ಹೆಚ್ಚಿನ ಮಟ್ಟಿಗೆ ತಿಗರಿಯಲ್ಲಿ ತಯಾರಾದವುಗಳಂತೆ ಕಂಡುಬರುತ್ತವೆ. ಕೆಲವದರ ಮೇಲೆ ಕಪ್ಪು ನೇರಳೆ

ಬಣ್ಣದ ರೇಖಾಚಿತ್ರಗಳಿವೆ ಕೈಯಲ್ಲಿ ಮಾಡಿದ ಮಡಿಕೆಗಳು ಅತ್ಯಲ್ಪ ಪ್ರಮಾಣದಲ್ಲಿ ಕಂಡುಬಂದಿವೆ. ಇನ್ನೂ ಆಭರಣಗಳು ಕಾರ್ನೇಲಿಯನ್, ಅಗೇಟ್, ಶಂಖು, ಗಾಜು ಮತ್ತು ಮಣ್ಣಿನಿಂದ ಮಾಡಿದ ಮಣಿಗಳು ಹಾಗೂ ಮುಂತಾದ ಆಭರಣಗಳು ದೊರೆತಿವೆ. ಹಾಗೆಯೇ ಮಸ್ಕಿ ಪಟ್ಟಣದ ದುರ್ಗದ ಬೆಟ್ಟ, ಗಿಡ್ಡದಮ್ಮನ ಕೆರೆಯ ಬೆಟ್ಟದಭಾಗ, ಹೀರೆಬೆಟ್ಟ, ಮಜ್ಜಿಗೆಗುಂಡು ಮೊದಲಾದ ಬೆಟ್ಟದ ಭಾಗಗಳಲ್ಲಿ ಸಾರಂಗ, ಗೂಳಿ, ಹುಲಿ, ಜಿಂಕೆ ಮತ್ತು ಮಾನವರಿಗೆ ಸಂಬಂಧಿಸಿದ ಕುಟ್ಟಿದ ಹಾಗೂ ಗೀರಿದ ಚಿತ್ರಗಳು ಕಾಣಬರುತ್ತವೆ.

## ೫. ಬೃಹತ್ ಶಿಲಾಯುಗ

ಸತ್ತವರಿಗಾಗಿ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ ಗೋರಿಗಳನ್ನು ನಿರ್ಮಾಣ ಕಾರ್ಯ ಮಾಡಿದ್ದರಿಂದ ಈ ಕಾಲವನ್ನು 'ಬೃಹತ್ ಶಿಲಾಯುಗ'ವೆಂದು ಕರೆಯುತ್ತಾರೆ. ವಿಶಿಷ್ಟ ಬಗೆಯ ಸಂಪ್ರದಾಯದಿಂದ ಕೂಡಿದ ಈ ಮಾನವನು ಮುಖ್ಯವಾಗಿ ಕಬ್ಬಿಣದ ಬಳಕೆಯನ್ನು ರೂಢಿಸಿಕೊಂಡಿದ್ದು ಹಾಗೂ ತನ್ನದೇಯಾದ ರೀತಿಯಲ್ಲಿ ಮಡಿಕೆ ಮಾದರಿಗಳನ್ನು ರೂಪಿಸಿಕೊಂಡಿದ್ದನು. ಈ ಸಂಸ್ಕೃತಿಯ ಹಂತದಲ್ಲಿ ಒಂದು ವಾಸ್ತವ್ಯ ನೆಲೆಯಾದರೆ ಮತ್ತೊಂದು ಗೋರಿ ನೆಲೆಯಾಗಿದೆ. ಶವಸಂಸ್ಕಾರಕ್ಕಾಗಿ ವಿವಿಧ ಸ್ಥಳಗಳಲ್ಲಿ ಕಂಡುಬರುವ ನೂರಾರು ಕಲ್ಲಿನ ಗೋರಿಗಳು ಈ ಸಂಸ್ಕೃತಿಯ ವೈಶಿಷ್ಟತೆಯನ್ನು ಹೆಚ್ಚಿಸಿವೆ. ಮಸ್ಕಿಯೂ ಈ ಕಾಲಾವಧಿಯ ನೆಲೆ ಕೂಡ ಆಗಿರುವುದು ವಿಶೇಷವಾಗಿದೆ. ಮಸ್ಕಿಯ ದುರ್ಗದ ಬೆಟ್ಟದ ದಕ್ಷಿಣ ದಿಕ್ಕಿನ ವಿಸ್ತಾರವಾದ ಪ್ರದೇಶ ಅಂದರೆ ಪ್ರಸ್ತುತ ಸರಕಾರಿ ಪ್ರಥಮದರ್ಜೆ ಕಾಲೇಜ್‌ನ ಹಿಂಭಾಗದಲ್ಲಿ ಕ್ರಿ.ಶ. ೧೯೫೩-೫೪ರಲ್ಲಿ ಕೇಂದ್ರ ಪುರಾತತ್ವ ಇಲಾಖೆಯವರು ಬಿ.ಕೆ.ಥಾಪರ್‌ರವರು ಬೃಹತ್ ಪ್ರಮಾಣದಲ್ಲಿ ಉತ್ಖನನ ಮಾಡಿ ಪ್ರಕಟಿಸಿದ್ದಾರೆ.

ಈ ಉತ್ಖನನದ ಪ್ರಮುಖ ವಿಶೇಷತೆಯೆಂದರೆ ಈ ಕಾಲಕ್ಕೆ ಸಂಬಂಧಿಸಿದ ೮ ಸಮಾಧಿಗಳನ್ನು ಅಗೆಯಲಾಯಿತು. ಅವುಗಳಲ್ಲಿ ಐದು ಪ್ರಕಾರಗಳನ್ನು ಗುರುತಿಸಬಹುದು. ಇವೆಲ್ಲ ಗುಂಡಿಸಮಾಧಿ ರೀತಿಯವು. ಮೊದಲನೆಯ ರೀತಿಯಲ್ಲಿ ಶವವನ್ನು ಸಹಜ ಸ್ಥಿತಿಯಲ್ಲಿ ಉತ್ತರ-ದಕ್ಷಿಣಾಭಿಮುಖವಾಗಿ ಉದ್ದಕ್ಕೆ ಇಟ್ಟು ಸಮಾಧಿ ಮಾಡಲಾಗಿದೆ. ವಾಸ್ತವ್ಯದ ನೆಲೆಯಲ್ಲಿಯೇ ಇರುವುದರಿಂದ ಇದರೊಡನೆ ಯಾವುದೇ ಇತರೆ ಪರಿಕರಗಳಿಲ್ಲದಿರುವುದು ವಿಶೇಷವಾಗಿದೆ.

ಎರಡನೆಯ ರೀತಿಯಲ್ಲಿ ವ್ಯಕ್ತಿಯು ಮೃತನಾಗಿ ಕೆಲವು ದಿನಗಳ ನಂತರ ಅವನ ಅಸ್ತಿಗಳನ್ನು ತಂದು ಪೂರ್ವ-ಪಶ್ಚಿಮಾಭಿಮುಖವಾಗಿರುವ ಒಂದು ಪ್ರತ್ಯೇಕ ಗುಂಡಿಯಲ್ಲಿ ಇಡಲಾಗಿದೆ. ಇನ್ನೂ ಮೂರನೆಯ ರೀತಿಯಲ್ಲಿ ಅಸ್ತಿ ಅವಶೇಷಗಳನ್ನು ಒಂದು ಮಡಿಕೆಯ ಒಳಗೆ ಇಟ್ಟು ಇದನ್ನು ಸಮಾಧಿ ಮಾಡಲಾಗಿದೆ. ಇದರೊಳಗೆ ಕೆಲವು ಇತರೆ ಮಣ್ಪಾತ್ರೆಗಳಿವೆ.

ನಾಲ್ಕನೆಯದರಲ್ಲೂ ಒಂದು ವೃತ್ತ ವಿನ್ಯಾಸದ ಗುಂಡಿಯಲ್ಲಿ ಶವವನ್ನು ಉದ್ದಕ್ಕೆ ಇಟ್ಟು ಅದರ ಎಡ ಬಲಗಳಲ್ಲಿ ಕೆಲವು ಮಣ್ಪಾತ್ರೆಗಳನ್ನು ಇಡಲಾಗಿದೆ. ಮೇಲಿನ ಗುಂಡಿಯಂಚಿನಲ್ಲಿ ಸುತ್ತಲೂ ಕಲ್ಲುಗಳನ್ನು ಇಡಲಾಗಿತ್ತು. ಇದು ಕೂಡ ವಾಸ್ತವ್ಯದ ನೆಲೆಯಾಗಿರುವುದು ಕುತೂಹಲಕಾರಿ. ಐದನೆಯ ವಾಸ್ತವ್ಯದ ನೆಲೆಯಿಂದ ಸ್ವಲ್ಪ ದೂರದಲ್ಲಿ ಕಲ್ಲುಚೂರುಗಳಿಂದ ತುಂಬಿದ ಒಂದು ಕಲ್ಲುವೃತ್ತ. ಇದರರೊಳಗೆ ಅಸ್ತಿ ಅವಶೇಷಗಳನ್ನು ವ್ಯವಸ್ಥಿತವಾಗಿ ನೇರವಾಗಿಟ್ಟು ಜೊತೆಗೆ ಕಬ್ಬಿಣದ ಉಪಕರಣ ಮತ್ತು ಮಣ್ಪಾತ್ರೆಗಳನ್ನು ಇಡಲಾಗಿದೆ. ಇದು ಬ್ರಹ್ಮಗಿರಿ ಕಲ್ಲುವೃತ್ತದಂತಿದೆ.

ಒಂದನೆ ಪ್ರಕಾರದ ಗುಳಿಯ ಬುಡದಲ್ಲಿ ಬೂದಿ ಹರಡಿರುವುದು ಹಾಗೂ ಶವಗುಳಿಗಳು ಸಾಮಾನ್ಯವಾಗಿ ಉತ್ತರ–ದಕ್ಷಿಣದಲ್ಲಿ ನೇರವಾಗಿರುವುದು ಇದರ ವೈಶಿಷ್ಟ್ಯ. ಬೃಹತ್ ಶಿಲಾಸಮಾಧಿಗಳಿಗೆ ಸೇರಿದ ಕೆಲವು ನಡುಗಲ್ಲುಗಳನ್ನು ಇಲ್ಲಿಯ ಉತ್ಖನದಲ್ಲಿ ಪರೀಕ್ಷಿಸಲಾಯಿತು. ಆದರೆ ಅವು ಶವಸಂಸ್ಕಾರ ವಿಧಿಗೆ ಸಂಬಂಧಿಸಿದ್ದೆಂಬುವುದಕ್ಕೆ ಯಾವ ಸೂಚನೆಯೂ ದೊರೆಯಲಿಲ್ಲ.

ಬೃಹತ್‌ಶಿಲಾ ಸಂಸ್ಕೃತಿಗೆ ಸಾಮಾನ್ಯವಾದ ಕಪ್ಪು–ಕೆಂಪು ದ್ವಿವರ್ಣದ ಮತ್ತು ತಿಗರಿ ಮೇಲೆ ಮಾಡಿದ ಮಡಿಕೆಗಳು ಹೇರಳವಾಗಿ ಕಂಡುಬಂದವು. ಗಾಜು, ಶಂಖಗಳಿಂದ ಮಾಡಿದ ಬಳೆ ಮತ್ತು ಮಣಿಗಳು, ಚಿಕ್ಕ ಮಕ್ಕಳ ಆಟದ ಬಿಲ್ಲೆಗಳು, ಗೋಲಿಗಳು ಈ ಸಾಂಸ್ಕೃತಿಕ ಸ್ತರಗಳಲ್ಲಿ ದೊರೆತವು. ಕೆಲವು ಕಂಬದ ಗುಳಿಗಳನ್ನು ಬಿಟ್ಟರೆ ಈ ಕಾಲದ ಮನೆಗಳ ಬಗ್ಗೆ ಯಾವ ಮಾಹಿತಿಯೂ ದೊರೆಯಲಿಲ್ಲ. ಕೆಲವು ಕಲ್ಲಿನ ಆಯುಧಗಳು ಮತ್ತು ಪ್ರಾಣಿಗಳ ಅವಶೇಷಗಳಿಂದ ಈ ಕಾಲದ ಜನ ವ್ಯವಸಾಯದಲ್ಲಿ ನಿರತರಾಗಿದ್ದರು ಹಾಗೂ ಬೇಟೆಯಾಡುವುದು ಇವರ ಆರ್ಥಿಕ ವ್ಯವಸ್ಥೆಯ ಒಂದು ಅಂಶವಾಗಿತ್ತು ಎಂಬುವುದು ಸೂಚಿಸುತ್ತದೆ. ಹುಲ್ಲೂರು ಗ್ರಾಮದಲ್ಲಿ ಸಹ ಶಿಲಾವೃತ್ತಗಳ ರಚನೆ ಕಂಡುಬಂದಿದ್ದು ಇದೊಂದು ಆದಿಕೋಣೆ ಗೋರಿಯಾಗಿದೆ ಎಂದು ಹೇಳಲಾಗುತ್ತದೆ.[೧೩]

### ೫. ಆದಿ ಚಾರಿತ್ರಿಕ ಕಾಲ

ಆದಿಚಾರಿತ್ರಿಕ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಸಾಮಾನ್ಯ ರೀತಿಯ ಕೆಂಪು ಹಾಗೂ ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆಗಳ ಜೊತೆಗೆ, ಸುದ್ದಿಯ ಗಿಚ್ಚುಗಳಿಂದ ಅಲಂಕೃತವಾದ ಮಡಿಕೆಗಳು ಕಂಡುಬಂದವು. ಚರ್ಟ್ ಜಾತಿಯ ಕಲ್ಲುಗಳು ಮತ್ತು ಸುಟ್ಟ ಮಣ್ಣಿನ ಮಣಿಗಳು, ಗಾಜಿನ ಮಣಿಗಳು, ಗಾಜಿನ ಮತ್ತು ಶಂಖದ ಬಳೆಗಳು ಈ ಸ್ತರದಲ್ಲಿ ದೊರೆತವು. ಹಾಗೂ ಕಬ್ಬಿಣದ ವಸ್ತುಗಳು ಸಹ ಅಲ್ಪ ಪ್ರಮಾಣದಲ್ಲಿದ್ದವು.

ಈ ಕಾಲದ ಹೊತ್ತಿಗೆ ನಾಣ್ಯಗಳ ಬಳಕೆ ರೂಪಿತವಾಗಿದ್ದು ಇಲ್ಲಿನ ಉತ್ಖನದಲ್ಲಿ ಒಂದು ಸೀಸದ ನಾಣ್ಯ ದೊರೆಯಿತು. ಮಧ್ಯದ ಸ್ತರಗಳಲ್ಲಿ ಬೂದು ಬಣ್ಣದ ನಯ ಮಾಡಿದ ಮಡಿಕೆಗಳು ಹೆಚ್ಚಾಗಿ ದೊರೆತವು. ಬಹು ವರ್ಣದ ಗಾಜಿನ ಬಳೆಗಳು, ಗಾಜಿನ ಮಣಿಗಳು, ಕುತುಬುದ್ದೀನ್ ಮುಬಾರಕ್ ಷಾ ಖಿಲ್ಜಿಯ ಒಂದು ನಾಣ್ಯ ಇತರ ವಸ್ತುಗಳು. ಈ ನೆಲೆಯಲ್ಲಿ ದೊರೆತಿರುವ ಮಣಿಗಳ ಸಂಖ್ಯೆ ವೈವಿಧ್ಯದಿಂದ ಕೂಡಿದೆ. ಇದರಿಂದ ಇದು ಬಹುಶಃ ಮಣಿಗಳ ತಯಾರಿಕಾ ಕೇಂದ್ರವಾಗಿರಬೇಕೆಂಬ ಊಹೆ ಇದೆ.

ಪ್ರಾಚೀನ ಕಾಲದಲ್ಲಿ ಮಸ್ಕಿಯು ದೂರದ ಪ್ರದೇಶಗಳೊಡನೆ ವ್ಯಾಪಾರ ಸಂಪರ್ಕವನ್ನು ಹೊಂದಿರಬಹುದು. ಬಳಕೆಗಾಗಿ ಉಪಯೋಗಿಸಿರುವ ಶಂಕು ಸಮುದ್ರವಿದ್ದು ಇಲ್ಲಿ ದೊರೆತಿರುವ ನೀಲೋಪಲ ಶಿಲೆಯ ಮಣಿಗಳಿಂದ ಇದು ಪರ್ಷಿಯಾ ಪ್ರದೇಶದಿಂದ ಬಂದಿರಬೇಕೆನಿಸುತ್ತದೆ. ಹಿಂದಿನ ಉತ್ಖನದಲ್ಲಿ ದೊರೆತಿರುವ ಒಂದು ಉರಳು ಶಿಲಾಮುದ್ರೆ ಪಶ್ಚಿಮ ಏಷ್ಯಾದಲ್ಲಿ ಪ್ರಚಲಿತದಲ್ಲಿದ ರೀತಿಯದು. ಆದರೆ ವಡಗಾಂವ್–ಮಾಧವಪುರದಲ್ಲಿ ಇತಂಹ ಮುದ್ರಿಕೆಯ ಪಡಿಯಚ್ಚು ಆದಿಇತಿಹಾಸ ಕಾಲದ ಒಂದು ಮಡಿಕೆ ಹಿಡಿಕೆಯ ಮೇಲೆ ಸ್ಪಷ್ಟವಾಗಿರುವುದರಿಂದ ಈ ಮುದ್ರಿಕೆ ಮೊದಲು ತಿಳಿದಷ್ಟು ಪ್ರಾಚೀನವಲ್ಲ. ಈ ಪಟ್ಟಣದ ಸುತ್ತಲೂ ಚಿನ್ನದ ನಿಕ್ಷೇಪವಿದ್ದು ಇದನ್ನು ಪಾಚೀನ ಕಾಲದಲ್ಲಿ ಗಣಿಗಾರಿಕೆಯಿಂದ ಸಂಗ್ರಹಿಸಲಾಗುತ್ತಿತ್ತು. ಇದಕ್ಕೋಸ್ಕರ ತೋಡಿದ ಗುಂಡಿಗಳು ಪ್ರಸ್ತುತ ಸಹ ಅಲ್ಲಲ್ಲಿ ಕಾಣಸಿಗುತ್ತವೆ.

ಮಸ್ಕಿಯು ಪ್ರಾಗಿತಿಹಾಸ ಮತ್ತು ಐತಿಹಾಸಿಕ ಕಾಲದಲ್ಲಿ ಇದು ಬೃಹನ್ನಗರವಾಗಿರಬೇಕು. ಅಶೋಕನ ಶಾಸನಗಳಲ್ಲಿ ಹೆಸರಿಸುವ ಸುವರ್ಣಗಿರಿ ಮಸ್ಕಿಯೇ ಇರಬಹುದೆಂಬ ಊಹೆಯೂ ಇದೆ. ಮಸ್ಕಿ ಈ ಎಲ್ಲಾ ಪ್ರಾಗಿತಿಹಾಸಿಕ ಅಂಶಗಳನ್ನು ತನ್ನ ಒಡಲಲ್ಲಿ ಕ್ರೋಢೀಕರಿಸಿಕೊಂಡಿದೆ. ಹೀಗೆ ಈ ಜಿಲ್ಲೆಯ ಪ್ರಾಗಿತಿಹಾಸಿಕತೆಯ ಕುರಿತಾಗಿ ೧೯೫೭ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಎಫ್.ಆರ್.ಆಲ್ಚಿನ್‌ರವರು ಪಿಕ್ಲಿಹಾಳನಲ್ಲಿ ಸಂಶೋಧನೆ ಕೈಗೊಂಡಾಗ ಈ ಭಾಗ ಸಿಂಧೂಬಯಲಿನ ಹರಪ್ಪಾ, ಮಹೆಂಜೊದಾರೊ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹದ್ದು ಎಂದು ಹೇಳಿದ ಮಾತು ಈ ಪರಿಸರದ ಪ್ರಾಗಿತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತದೆ.

**೨.೪ ಇತಿಹಾಸ**

ಮಾನವ ವಿಕಸನದ ಹಂತದಲ್ಲಿ ಅಕ್ಷರಗಳ ಆವಿಷ್ಕಾರ ಬಹಳ ಮುಖ್ಯವಾದ ಅಂಶವಾಗಿದೆ. ಅಕ್ಷರಗಳ ಆವಿಷ್ಕಾರದ ನಂತರದ ಹಂತವನ್ನು ಅಂದರೆ ಬರವಣಿಗೆಯು ಗೊತ್ತಾದ ಅವಧಿವನ್ನು ಇತಿಹಾಸ ಕಾಲವೆಂದು ಕರೆಯಬಹುದು. ಈ ಪ್ರದೇಶದಲ್ಲಿ ಶಾಸನಗಳು ದೊರೆಯುವ ಕಾಲದಿಂದ ಅಂದರೆ ಮೌರ್ಯರಿಂದ ಹಿಡಿದು ವಿಜಯನಗರೋತ್ತರ ಪಾಳೆಗಾರರ

ಕಾಲದವರೆಗೂ ಆಳ್ವಿಕೆ ನಡೆಸಿದ ವಿವಿಧ ರಾಜವಂಶಗಳ ಪರಿಚಯವನ್ನು ಇಲ್ಲಿ ತಿಳಿಯಬಹುದು. ವಿವಿಧ ಕಾಲಘಟ್ಟಗಳಲ್ಲಿ ಕರ್ನಾಟಕವನ್ನು ಆಳ್ವಿಕೆ ಮಾಡಿದ ಪ್ರಮುಖ ರಾಜಮನೆತನಗಳ ಸಾಮ್ರಾಜ್ಯದೊಳಗೆ ಈ ಭಾಗವು ಸೇರಿತ್ತು. ಕೆಲವು ಆಡಳಿತ ವಿಭಾಗಗಳಿಂದಲೂ ಈ ವಿಷಯ ದೃಢಪಟ್ಟಿದೆ. ಈ ರೀತಿಯ ಐತಿಹಾಸಿಕ ಹಿನ್ನಲೆಯನ್ನು ಹೊಂದಿರುವ ಈ ಪರಿಸರದಲ್ಲಿ ಮೌರ್ಯರು, ಶಾತವಾಹನರು, ಚೋಳರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ವಿಜಯನಗರದ ಅರಸರು, ಆದಿಲ್‌ಷಾಹಿಗಳು, ಕರಡಿಕಲ್ಲು ಕದಂಬರು, ಹೈಹಯ ವಂಶದವರು, ಮತ್ತು ಸ್ಥಳೀಯ ನಾಡಗೌಡರು ಆಳ್ವಿಕೆ ನಡೆಸಿದಕ್ಕೆ ಆಧಾರಗಳು ಸಿಗುತ್ತವೆ.

## ರಾಜಕೀಯ ಇತಿಹಾಸ

**ಮೌರ್ಯರು :** ಇತಿಹಾಸ ಉದಯದ ಕಾಲದಲ್ಲಿ ಮಸ್ಕಿ ಪ್ರದೇಶವು ಪ್ರಮುಖ ಪಾತ್ರವಹಿಸಿದ ವಿಷಯ ಇಲ್ಲಿ ದೊರೆತಿರುವ ಮೌರ್ಯರ ಚಕ್ರವರ್ತಿ ಅಶೋಕನ ಶಾಸನದಿಂದ ತಿಳಿದು ಬರುತ್ತದೆ. ಸುಮಾರು ೪೦ ವರ್ಷಗಳ ಕಾಲ ದೀರ್ಘವಾಗಿ ಆಳ್ವಿಕೆ ಮಾಡಿದ ಅಶೋಕನ ಶಾಸನ ಮಸ್ಕಿಯಲ್ಲಿ ದೊರೆತಿದೆ. ಇದರಲ್ಲಿ 'ದೇವನಾಂಪಿಯಸ ಅಸೋಕಸ' ಎಂದು ಹೇಳಲಾಗಿದೆ.[೧೪] ಅದೇ ರೀತಿಯಾಗಿ ಶಾಸನದಲ್ಲಿ ಉಲ್ಲೇಖಿತವಾಗಿರುವ ಅಶೋಕನ ದಕ್ಷಿಣ ಪ್ರಾಂತ್ಯದ ಕೇಂದ್ರ ಸುವರ್ಣಗಿರಿ ಮಸ್ಕಿಯೇ ಆಗಿದೆ ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕಾರಣ ಇದೇ ಪರಿಸರದಲ್ಲಿ ಚಿನ್ನದ ಅದಿರಿನ ಅನೇಕ ಮಾಹಿತಿ ದೊರೆಯುತ್ತದೆ. ಇದಕ್ಕೆ ಪೂರಕವೆಂಬಂತೆ ಮಸ್ಕಿಯ ಹೀರೆಗುಡ್ಡದಲ್ಲಿ ಚಿನ್ನದ ಖನಿಜ ಇರುವುದು ಅನೇಕ ಸಂಶೋಧನೆಗಳು ಖಚಿತಪಡಿಸಿವೆ. ಇದರಿಂದ ಮಸ್ಕಿಯು ಅಶೋಕನ ನೇರ ಆಡಳಿತಕ್ಕೆ ಒಳಪಟ್ಟಿತ್ತು ಎಂದು ಹಾಗೂ ಇವುಗಳ ಅಧಿಕಾರಿಗಳು ಮಹಾಮಾತ್ರರೆಂದು ತಿಳಿದುಬರುತ್ತದೆ. ಅಶೋಕ ಚಕ್ರವರ್ತಿಯ ಮೊದಲು ಮತ್ತು ನಂತರದ ಮೌರ್ಯರ ಯಾವ ಅರಸರುಗಳ ಶಾಸನಗಳು ಈ ಪರಿಸರದಲ್ಲಿ ದೊರಕಿರುವುದಿಲ್ಲ.

**ಶಾತವಾಹನರು (ಕ್ರಿಪೂ ೨೦೦ – ಕ್ರಿಶ. ೫೦) :**

ಶಾತವಾಹನ ಸಾಮ್ರಾಜ್ಯ ಮಸ್ಕಿ ಪರಿಸರಕ್ಕೂ ವ್ಯಾಪಿಸಿತ್ತು ಎಂಬುವುದಕ್ಕೆ ಮಸ್ಕಿ ಮತ್ತು ಪಿಕ್ಲಿಹಾಳಗಳಲ್ಲಿ ದೊರೆತ ಶಾತವಾಹನರ ಕಾಲದ ಕ್ರಿ.ಪೂ.೨೦೦ ರಿಂದ ಕ್ರಿ.ಶ.೫೦ರ ಅವಧಿಯ ವಿಶಿಷ್ಟವಾದ ಬಣ್ಣಬಳಿದ ಪಾತ್ರೆಗಳು (*Russet coated ware*) ಮೈ ಉಜ್ಜಿಕೊಳ್ಳುವ ಇಟ್ಟಿಗೆಯ ಕಲ್ಲುಗಳು, ಶಂಖದ ಬಳೆಗಳು, ಕಪ್ಪೆ ಆ ಆಕಾರದ ಮಣಿಗಳು ದೊರೆತಿವೆ. ಹಾಗೆಯೇ 'ಸಮಹರಠಿಪುತಸ' ಎಂಬ ಕ್ರಿ.ಶ. ೨ನೇ ಶತಮಾನದ ಅಕ್ಷರವುಳ್ಳ ಮುದ್ರೆ, ಮನುಷ್ಯನು

ಆನೆಯನ್ನು ಸಾಗಿಸಿಕೊಂಡು ಹೋಗುವ ದೃಶ್ಯವುಳ್ಳ ಮುದ್ರೆ, ಮೊದಲಾದವುಗಳು ದೊರೆತಿವೆ.[೧೫] ಈ ವಂಶದ ನಂತರ ಕರ್ನಾಟಕವನ್ನಾಳಿದ ಬನವಾಸಿ ಕದಂಬರು ಹಾಗೂ ಬದಾಮಿ ಚಾಲುಕ್ಯ ಮೊದಲಾದ ಅರಸರುಗಳ ಶಾಸನಗಳಾಗಲಿ ಅಥವಾ ಇತರೆ ಯಾವುದೇ ರೀತಿಯ ಕುರುಹುಗಳಾಗಲಿ ಈ ಪ್ರದೇಶದಲ್ಲಿ ದೊರೆತಿರುವುದಿಲ್ಲ.

**ರಾಷ್ಟ್ರಕೂಟರು (ಕ್ರಿ.ಶ. ೮೩೭ – ೧೦ನೇ ಶತಮಾನ) :**

ರಾಷ್ಟ್ರಕೂಟರ ಪ್ರಮುಖ ದೊರೆಯಾದ ಅಮೋಘವರ್ಷನೃಪತುಂಗನ ಆಡಳಿತದ ಅವಧಿಯೂ ಧರ್ಮ ಮತ್ತು ಸಾಹಿತ್ಯದ ಪ್ರಗತಿಯ ದೃಷ್ಟಿಯಿಂದ ಕರ್ನಾಟಕ ಮತ್ತು ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವಪೂರ್ಣ ಅಧ್ಯಯನವಾಗಿದೆ. ಇವನ ಆಸ್ಥಾನ ಕವಿಯಾದ ಶ್ರೀವಿಜಯನು 'ಕವಿರಾಜ ಮಾರ್ಗದ' ಕರ್ತೃವಾಗಿದ್ದಾನೆ. ಈ ಕೃತಿಯಲ್ಲಿ ಕರ್ನಾಟಕ ಪ್ರದೇಶವು ಕಾವೇರಿಯಿಂದ ಗೋದಾವರಿ ನದಿಯವರೆಗೆ ಇದ್ದಿತ್ತೆಂದು ಉಲ್ಲೇಖಿತವಾಗಿದೆ. ಇವನ ನಂತರ ಬಂದ ಎರಡನೆಯ ಕೃಷ್ಣ (ಕ್ರಿ.ಶ.೮೭೮–೯೧೪) ಆಳ್ವಿಕೆ ಬಂದನು ಇವನು 'ಅಕಾಲವರ್ಷ' ಮತ್ತು ಶುಭತುಂಗ ಮುಂತಾದ ಬಿರುದುಗಳನ್ನು ಧರಿಸಿದ್ದನು. ಭೋಗಾವತಿ ಗ್ರಾಮದ ಕ್ರಿ.ಶ ೮೯೨ರ ಶಾಸನದಲ್ಲಿ ಜಗತ್ತುಂತದೇವನ ಉಲ್ಲೇಖವಿದ್ದು, ಇವನು ಎಡದೊರೆ–೨೦೦೦ವನ್ನು ಅಣುಗಜೀತವಾಗಿ ಆಳುತ್ತಿದ್ದ. ಇವನ ಸ್ಥಾನಾಧಿಪತಿಯಾಗಿ ವಾಚಸ್ಪತಿ ಬಟಾರನು ಇದ್ದನು. ಈ ಜಗತ್ತುಂಗ ದೇವನು ಅಕಾಲವರ್ಷದೇವನ (೨ನೇ ಕೃಷ್ಣ) ಮಗನಾಗಿದ್ದಾನೆ.[೧೬]

ಮೂರನೇ ಕೃಷ್ಣ (ಕ್ರಿ.ಶ. ೯೩೯–೯೬೭) ಈತನಿಗೆ ಸಂಬಂಧಿಸಿದ ಶಾಸನಗಳು ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನದ ಬಗ್ಗೆ ವಿವರಿಸುತ್ತವೆ. ಇಟಗಿ ಗ್ರಾಮದ ಕ್ರಿ.ಶ.೯೩೯ರ ಶಾಸನದಲ್ಲಿ ಕನ್ನದೇವರನು ರಾಜ್ಯಭಾರ ಮಾಡುವಾಗ ಬುಟ್ಟಯ್ಯಯೆಂಬುವವನು ಎಡದೊರೆ ೨೦೦೦ ಅನ್ನು ಆಳುತ್ತಿದ್ದ ವಿಷಯವಿದೆ. ಕಲ್ಮಲಾ ಗ್ರಾಮದ ಈಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೯೪೦ರ ಶಾಸನವು ರಾಷ್ಟ್ರಕೂಟರ ರಟ್ಟವಂಶದ ಕನ್ನರದೇವನು ರಾಜ್ಯಭಾರ ಮಾಡುತ್ತಿದ್ದಾಗ, ಅವನ ಸಾಮಂತನಾಗಿ ಬುಟ್ಟುರಸನಿದ್ದನು. ಈ ಬುಟ್ಟರಸ, ಪಿಟ್ಟವ್ವೆ ಮತ್ತು ಕನ್ನರದೇವ ಈ ಮೂರು ಜನ ಸೇರಿದ್ದಾಗ ಮಲ್ಲಿಕಾರ್ಜುನ ದೇವರ ಪ್ರಜೆ ಮಾಡುವ ಕಲ್ಮಲೆಯ ಆದಿತ್ಯಭಟ್ಟಾರನಿಗೆ ೩೪ ಮತ್ತರು ಭೂಮಿಯನ್ನು ದಾನ ನೀಡಿದ ಪ್ರಸ್ತಾಪವಿದೆ.[೧೭] ಹಾಗೂ ತಲೆಖಾನ ಗ್ರಾಮದ ಒಂದು ಶಾಸನ ರಾಷ್ಟ್ರಕೂಟರ ಕಾಲಘಟ್ಟದಾಗಿದೆ.

**ಕಲ್ಯಾಣ ಚಾಲುಕ್ಯರು**

ಮಸ್ಕಿ ಮತ್ತು ಮಸ್ಕಿ ಪರಿಸರದ ಬಹುತೇಕ ಗ್ರಾಮಗಳಲ್ಲಿ ಕಲ್ಯಾಣ ಚಾಲುಕ್ಯರ ಶಾಸನಗಳು, ಸ್ಮಾರಕಗಳು ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಅದರಲ್ಲೂ ಮುಖ್ಯವಾಗಿ ಇಮ್ಮಡಿ ಜಯಸಿಂಹನ ಶಾಸನ ಮಸ್ಕಿಯಲ್ಲಿ ಕಾಣಸಿಗುತ್ತದೆ. ಜಗದೇಕಮಲ್ಲ ಮತ್ತು ಮಲ್ಲಿಕಾಮೋದ ಎಂಬ ಬಿರುದನ್ನು ಹೊಂದಿದ್ದ. ಇವನು ಮಸ್ಕಿ ಪಟ್ಟಣದ ಕ್ರಿ.ಶ. ೧೦೧೦ರ ಶಾಸನದಲ್ಲಿ ತ್ರಿಭುವನಮಲ್ಲ ವಿಶೇಷಣವನ್ನು ಪಡೆದಿದ್ದ ೬ನೇ ವಿಕ್ರಮಾದಿತ್ಯನು ಆಡಳಿತ ಮಾಡುತ್ತಿದ್ದಾಗ, ಇವನ ತಮ್ಮ ಜಯಸಿಂಹನು ರಾಜಧಾನಿ ಮೋಸಂಗಿ(ಮಸ್ಕಿ)ಯಿಂದ ಆಳುತ್ತಿದ್ದಂತೆ ಉಲ್ಲೇಖವಿದು, ಅಹವಮಲ್ಲನ ಚಟ್ಟ ಸೇವಕ ಕರಿಯಯ್ಯನಿಗೆ ೧೦೦ ಮತ್ತರು ಭೂಮಿ ದಾನ ನೀಡಿದ ಉಲ್ಲೇಖವಿದೆ. ಈ ಗ್ರಾಮವನ್ನು ಶಾಸನದಲ್ಲಿ ಚಳುಕಿಯರ ಪೊಲಗೆರೆ ಎಂದು ಕರೆಯಲಾಗಿದೆ. ಮುಂದೆ ಜಯಸಿಂಹನು ಸ್ವತಂತ್ರವಾಗಿ ರಾಜ್ಯಭಾರ ಮಾಡುತ್ತಿದ್ದ ಉಲ್ಲೇಖವಿರುವ ಶಾಸನಗಳು ಕ್ರಿ.ಶ. ೧೦೧೮ ರಿಂದ ಇಚೇಗೆ ದೊರೆಯಲಾರಂಭಿಸುತ್ತವೆ. ಈ ಅವಧಿಯಲ್ಲಿ ಅವನು ರಾಜಧಾನಿ ಪಿರಿಯ ಮೋಸಂಗಿಯಲ್ಲಿದ್ದ ಹೆಸರೂರು ಗ್ರಾಮದ ಕ್ರಿ.ಶ.೧೦೨೦ ಶಾಸನದಲ್ಲಿ ಮೊಸಗಿ ನೆಲೆವೀಡನ್ನು ಉಲ್ಲೇಖಿಸುವುದರೊಂದಿಗೆ ಕರಡಿಕಲ್ಲು-೩೦೦ ಬಳಿಯ ಹೆಸರೂರ ಗ್ರಾಮದ ಬಸದಿಗೆ ಕೆಲವು ಮತ್ತರು ಭೂಮಿಯನ್ನು ದಾನಬಿಟ್ಟ ವಿಷಯ ತಿಳಿಸುತ್ತದೆ.[೧೮]

ಸುಂಕನೂರ ಗ್ರಾಮದ ಕ್ರಿ.ಶ ೧೦೨೫ರ ಶಾಸನದಲ್ಲಿ ಪಿರಿಯ ಮೋಸಂಗಿಯ ನಾಡಪ್ರಯ ದೇವರಿಗೆ ಕಡಂಬೂರು (ಕಡಬೂರು) ಉತ್ತರಕ್ಕಿರುವ ಹೊಲ ಕರಿ (ಕಪ್ಪು ಅಥವಾ ಎರೆಹೊಲ) ಭೂಮಿ ನೀಡಿದ್ದನ್ನು ತಿಳಿಸಿದೆ.[೧೯] ಹಾಗೂ ಕ್ರಿ.ಶ೧೦೨೪ರ ಕೋಳಬಾಳ ಗ್ರಾಮದಲ್ಲಿನ ಶಾಸನದಲ್ಲಿ ಜಗದೇಕಮಲ್ಲನು ಪಿರಿಯ ಮೋಸಂಗಿ ದೇವರಿಗೆ ಭೂದಾನ ನೀಡಿದ ಉಲ್ಲೇಖವಿದೆ. ಮಸ್ಕಿ ಪಟ್ಟಣದ ಕ್ರಿ.ಶ ೧೦೨೭ರ ಶಾಸನದಲ್ಲಿ ಜಗದೇಕಮಲ್ಲನು ಪುಲಿಪೊದರ ಪುಲವುಪ್ಪಯಣ ಬೀಡಿನಲ್ಲಿದಂತೆ ಹೇಳಿದೆ. ಇದರಲ್ಲಿ ಸೋಮಲಾದೇವಿಯು ಬಸದಿಯೊಂದಕ್ಕೆ ೧೦೦ ಮತ್ತರು ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ.[೨೦] ಬಲ್ಲಟಗಿ ಗ್ರಾಮದ ಕ್ರಿ.ಶ ೧೦೨೯ರ ಸೋಮಲಾದೇವಿಯು ಪಂದಿರ್ಕೆಯ ನೆಲೆವೀಡಿನಲ್ಲಿದ್ದಾಗ ಎಡದೊರೆ ೨೦೦೦ ನಾಡಿನ ಭತ್ತ ಗ್ರಾಮವಾದ ಬಳ್ಳನಿಟ್ಟಗೆಯ ಬಸದಿಗೆ ಓರಿಯ ಕೋಲಿನಲ್ಲಿ ದಾನ ನೀಡಿದ್ದನ್ನು ತಿಳಿಸುತ್ತದೆ.

ಸುಂಕನೂರ ಗ್ರಾಮದ ಕ್ರಿ.ಶ ೧೦೩೭ರ ಶಾಸನವು ಜಗದೇಕಮಲ್ಲನ ಇನ್ನೊಬ್ಬ ಹೆಂಡತಿ ಜಿಜ್ಜಲದೇವಿಯು ಪೊಟ್ಟಳ ಕೆರೆಯಲ್ಲಿದಂತೆ ತಿಳಿಸುತ್ತದೆ.[೨೧] ಮಸ್ಕಿ ಗ್ರಾಮದ ಕ್ರಿ.ಶ ೧೦೩೭ರ ಶಾಸನವು ಜಗದೇಕಮಲ್ಲನು ಕಾಳಿದಾಸ ಚೂಳಾಯ್ತ ರೇವಣನ ಭಿನ್ನಪದಂತೆ ಪಿರಿಯ ಮೋಸಂಗಿಯ ಜಗದೇಕಮಲ್ಲ ಜಿನಾಲಯದ ಭೋಗಕ್ಕಾಗಿ ಭೂದಾನ ನೀಡಿ ಅದನ್ನು

ಜಗದೇಕಮಲ್ಲ ಜಯಸಿಂಹನು ದತ್ತಿ ಎಂದು ಕರೆದಿದ್ದಾನೆ. ಈ ಕಾಲಕ್ಕೆ ಅಲ್ಲಿ ಅಷ್ಟೋಪವಾಸಿ ಕನಕಣ್ಣಿ ಭಟ್ಟಾರನಿರುತ್ತಾನೆ.[೨೨] ಇದೇ ಗ್ರಾಮದ ಕ್ರಿ.ಶ. ೧೦೩೨ರ ಇನ್ನೊಂದು ಶಾಸನದಲ್ಲಿ ಜಗದೇಕಮಲ್ಲನು ಪಿರಿಯ ಮೋಸಂಗಿಯ ಏಕಜಡೆ ದೇವಾಲಯಕ್ಕೆ ಭೂದಾನ ನೀಡಿದ ವಿವರಣೆ ನೀಡುತ್ತದೆ. ಕ್ರಿಶ ೧೦೩೭ರ ಶಾಸನದಲ್ಲಿ ಜಗದೇಕಮಲ್ಲನು ಪೊಟ್ಟಳ ಕೆರೆಯ ನೆಲೆವೀಡಿನಲ್ಲಿದ್ದಾಗ ಇವನ ಮಹಾಸಾಮಂತನಾಗಿ ಚಿಕ್ಕರೇಚಯ್ಯನೆಂಬುವವನಿದ್ದನು ಇದರಲ್ಲಿ ಹೆಗ್ಗಡೆ ಮಲ್ಲಿಮಯ್ಯನನ್ನು ಚಾಲುಕ್ಯ ರಾಜ್ಯ ಮೂಲಸ್ತಂಭನೆಂದು ಕರೆದಿದೆ. ಈ ಮಲ್ಲಿಮಯ್ಯನು ಚಕ್ರಿಭಟ್ಟೋಪಾಧ್ಯಾಯನ ತಾತನೆಂದಿರುವುದರಿಂದ ಬಹುಶಃ ಕಲ್ಯಾಣ ಚಾಲುಕ್ಯರ ರಾಜ್ಯಭಾರಕ್ಕೆ ಬರಲು ಈ ವ್ಯಕ್ತಿ ಸಹಾಯ ಮಾಡಿರಬೇಕು.[೨೩] ಈ ರೀತಿಯ ಅನೇಕ ಅಂಶಗಳು ಜಗದೇಕಮಲ್ಲನ ಬಗ್ಗೆ ತಿಳಿಸುತ್ತವೆ.

ಕಲ್ಯಾಣ ಚಾಲುಕ್ಯರ ಪ್ರಮುಖ ಅರಸನಾದ ಆರನೇ ವಿಕ್ರಮಾದಿತ್ಯನ ಕಾಲಾವಧಿಯಲ್ಲಿ ಮಸ್ಕಿ ಅವನ ಆಡಳಿತಕ್ಕೆ ಒಳಪಟ್ಟಿತ್ತು ಎಂಬ ಮಾಹಿತಿ ದೊರೆಯುತ್ತದೆ. ಮಸ್ಕಿಯ ಶಾಸನದಲ್ಲಿ (ಕ್ರಿ.ಶ.೧೧೧೩) ತ್ರಿಭುವನಮಲ್ಲದೇವನೊಂದಿಗೆ ಕರಡಿಕಲ್ಲು ಕದಂಬ ವಂಶದ ಭೂತರಸನು ಶನೇಶ್ವರ ದೇವರಿಗೆ ಭೂಮಿಯನ್ನು ದತ್ತಿಕೊಟ್ಟ ವಿಷಯವಿದೆ.[೨೪] ಮತ್ತು ಕರಡಿಕಲ್ಲು ಗ್ರಾಮದ ಕ್ರಿ.ಶ.೧೧೧೯ರ ಶಾಸನದಲ್ಲಿ ಮೊಸಗಿಯ ನೆಲವೀಡಿನಿಂದ ಆಳ್ವಿಕೆ ಮಾಡುತ್ತಿದದ್ದು ಕಂಡುಬರುತ್ತದೆ.[೨೫] ಈ ಮೇಲೆ ಹೇಳಿದ ಶಾಸನಗಳಲ್ಲದೆ ಮಸ್ಕಿ ಪರಿಸರದಲ್ಲಿ ಇವನಿಗೆ ಸಂಬಂಧಿಸಿದ ಇನ್ನು ಅನೇಕ ಶಾಸನಗಳಿದ್ದು ಅವು ಪ್ರಸ್ತುತ ತೃಟಿತವಾಗಿವೆ. ಈ ಅಂಶಗಳಿಂದ ಆರನೇ ವಿಕ್ರಮಾದಿತ್ಯ ಮಸ್ಕಿ ಮತ್ತು ಮಸ್ಕಿ ಪರಿಸರದಲ್ಲಿ ದೇವಾಲಯಗಳು, ಬಸದಿಗಳು ಇತ್ಯಾದಿ ಸ್ಮಾರಕಗಳನ್ನು ಕಟ್ಟಿಸಿದನು. ಹಾಗೂ ಈ ಪ್ರದೇಶ ಅವನ ಆಳ್ವಿಕೆಯ ದಿನಗಳಲ್ಲಿ ಸುಖ-ಸಮೃದ್ಧಿಯೊಂದಿಗೆ ಕಂಗೊಳಿಸಿದೆ ಎಂದು ಹೇಳಬಹುದು.

ಇವನ ನಂತರ ಮೂರನೇ ಸೋಮೇಶ್ವರ, ಇಮ್ಮಡಿ ಜಗದೇಕಮಲ್ಲ, ಮುಮ್ಮಡಿ ತೈಲಪ, ಕೊನೆಯದಾಗಿ ನಾಲ್ಕನೆ ಸೋಮೇಶ್ವರ ಆಳ್ವಿಕೆಯನ್ನು ಮಾಡಿದರು. ಇವರ ಕಾಲಾವಧಿಯಲ್ಲಿ ಈ ಪರಿಸರ ಸುವರ್ಣಯುಗದಿಂದ ಕೂಡಿತ್ತು ಎಂದು ಹೇಳಬಹುದು. ಈ ವಂಶದ ಅರಸುಗಳ ಶಾಸನಗಳು ಮುಕ್ಕಾಲು ಭಾಗ ಹಳ್ಳಿಗಳಲ್ಲಿ ಕಂಡುಬರುತ್ತವೆ. ಈ ಎಲ್ಲಾ ಶಾಸನಗಳಿಂದ ಈ ಪ್ರದೇಶದ ಅಧಿಕಾರಿಗಳು, ವಿವಿಧ ಆಡಳಿತ ಭಾಗಗಳು, ಅಗ್ರಹಾರಗಳ ನಿರ್ಮಾಣ ಮಾಡುವುದರೊಂದಿಗೆ ಮಸ್ಕಿ ಪರಿಸರಕ್ಕೆ ಅನುಪಮ ಸೇವೆಸಲ್ಲಿಸಿ ಅಮರರಾಗಿದ್ದಾರೆಂದು ಹೇಳಬಹುದು. ಕಲ್ಯಾಣ ಚಾಲುಕ್ಯರ ನಂತರ ಈ ಪರಿಸರದಲ್ಲಿ ಕಳಚೂರಿಗಳು, ಯಾದವರು ಆಳ್ವಿಕೆ ಮಾಡಿದರೂ ಸಹ ಇವರದು ಎಂದೆನಿಸಿಕೊಳ್ಳುವ ಯಾವುದೇ ರೀತಿಯ ಶಾಸನಗಳು, ಸ್ಮಾರಕಗಳು ಮತ್ತು ಬೇರೆ ಯಾವುದೇ ರೀತಿಯ ಮಾಹಿತಿ ದೊರೆಯುವುದಿಲ್ಲ.

**ವಿಜಯನಗರ**

ವಿಜಯನಗರ ಅರಸರು ಸಹ ಈ ಭಾಗದ ಪರಿಸರದಲ್ಲಿ ಆಳ್ವಿಕೆ ಮಾಡಿದ ಮಾಹಿತಿ ಶಾಸನಗಳಿಂದ ನಮಗೆ ತಿಳಿದುಬರುತ್ತದೆ. ಅದರಲ್ಲೂ ಮುಖ್ಯವಾಗಿ ಅಚ್ಯುತರಾಯನಿಗೆ ಸಂಬಂಧಿಸಿದಹ ಕ್ರಿಶ ೧೫೩೦ರ ಶಾಸನದಲ್ಲಿ ವಿಜಯನಗರವನ್ನು ಆಳುತ್ತಿದ್ದಾಗ ಗುಜ್ಜಲ ಇಮ್ಮಡಿ ಮೇದಿನಿರಾಯನು ಮೊಸಗೆ ಸೀಮೆಯನ್ನು ಆಳುತ್ತಿದ್ದನು. ಈ ಮೊಸಗೆ ಸೀಮೆಯನ್ನು ಇಮ್ಮಡಿ ಮೇದಿನಿರಾಯನ ಅಮರನಾಯಕತನಕ್ಕೆ ನೀಡಲಾಗಿತ್ತು ಎಂದು ಶಾಸನ ತಿಳಿಸುತ್ತದೆ.[೨೬] ಮಸ್ಕಿ ಪರಿಸರದ ಸಾನಬಾಳ ಗ್ರಾಮದ ಕ್ರಿಶ ೧೫೩೨ರ ಶಾಸನದಲ್ಲಿ ಉಲ್ಲೇಖಿಸಿದಂತೆ ವಿಜಯನಗರ ಅರಸ ಅಚ್ಯುತರಾಯನು ಆಳ್ವಿಕೆ ಮಾಡುತ್ತಿದ್ದಾಗ, ಅವನ ಸಾಮಂತ ಅರಸ ಮಹಾಗುಜ್ಜಲ ವಂಶದ ಇಮ್ಮಡಿ ಮೇದಿನಿರಾಯನು ದೊಂಬರಬಂಡಿ (ಇದು ಪ್ರಸ್ತುತ ದೊತರಬಂಡಿ ಮಾನ್ವಿ ತಾಲ್ಲೂಕ ಆಗಿರಬಹುದೆಂದು ತರ್ಕಿಸಿದ್ದೇನೆ) ಹನುಮಂತನಾಯಕನಿಗೆ ಮಸ್ಕಿ ಸೀಮೆಯಲ್ಲಿನ ಚಿಕ್ಕ ಸಾನಬಾಳ ಗ್ರಾಮವನ್ನು ಉಂಬಳಿಯಾಗಿ ಬಿಟ್ಟುಕೊಟ್ಟನೆಂಬ ವಿಷಯ ತಿಳಿಸುತ್ತದೆ. ಹಾಗೂ ಮೇದಿನಿರಾಯನು ಮೊಸಗೆಯ ಮೂಲಸ್ಥಾನ ದೇವರಾದ ಮಲ್ಲಿಕಾರ್ಜುನನಿಗೆ ಭೂ ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಮಸ್ಕಿಯ ಕ್ರಿಶ ೧೫೬೦ರ ಶಾಸನವೊಂದರಲ್ಲಿ ವಿಜಯನಗರವನ್ನು ಅಚ್ಯುತರಾಯನ ಆಳ್ವಿಕೆ ರಾಜ್ಯವಾಳುತ್ತಿದ್ದಾಗ, ಗುಜ್ಜಲ ಇಮ್ಮಡಿ ಮೇದಿನಿರಾಯನು ತನ್ನ ಕೈಕೆಳಗಿನ ಮೊಸಗೆ ಸೀಮಿಗೆ ಸೇರಿದ್ದ ತಿದಿಗಿಬಾವಿಯೆಂಬ ಗ್ರಾಮವನ್ನು ಮಲ್ಲಿಗಾರ್ಜುನ ದೇವರಿಗೆ 'ಅಮೃತಪಡಿ'ಗಾಗಿ ಭೂದಾನವನ್ನು ಕೊಟ್ಟ ವಿಚಾರ ತಿಳಿಸುತ್ತದೆ. ಹಾಗೂ ಇವರದ್ದೇ ಇನ್ನೊಂದು ಶಾಸನ ಮೊಸಗೆಗೆ ಸೇರಿದ ಗ್ರಾಮಗಳನ್ನು ಹಂಪೆಯಲ್ಲಿದ್ದ ರುದ್ರಪಾದ ಮಠಪತಿ ಒಡೆಯರಿಗೆ ದಾನವಾಗಿ ಕೊಟ್ಟ ವಿವರವಿದೆ. ಈ ಶಾಸನದಲ್ಲಿ ಮಸ್ಕಿ ಪರಿಸರದ ಗೋನಹಾಳ, ಸಿದುಬಾವೂರ, ಪರವಾಪುರ-೮೧ (ಪರಾಪುರ), ಅಂಬಡಿಗುಡ್ಡ-೮೨ ಗ್ರಾಮಗಳನ್ನು ಉಲ್ಲೇಖಿಸುತ್ತದೆ. ಸದಾಶಿವರಾಯನಿಗೆ ಸಂಬಂಧಿಸಿದ ಮಸ್ಕಿಯ ಶಾಸನವೊಂದರಲ್ಲಿ ಅವನ ಕಾರ್ಯಕರ್ತನಾದ ಅಳಿಯ ರಾಮರಾಜಯ್ಯದೇವ ಅರಸನು ನಾಯಿಂದರ ತಿಮೋಜ, ಕೊಂಡೋಜ ಮತ್ತು ಭದ್ರೋಜರುಗಳ ವಿನಂತಿಯ ಮೇರಿಗೆ ಮಸ್ಕಿ ಸೀಮೆಗೆ ಸೇರಿದ ಒಂದು ಗ್ರಾಮವನ್ನು ನಾಯಿಂದರಿಗೆ ದತ್ತಿ ನೀಡಿದ ವಿಷಯಗಳಿವೆ.[೨೭] ಹೀಗೆ ಮಸ್ಕಿ ಮತ್ತು ಸುತ್ತಲಿನ ಪರಿಸರ ವಿಜಯನಗರ ಅರಸರ ಅಧೀನಕ್ಕೇ ಒಳಪಟ್ಟಿತ್ತು. ಮುಂದೆ ಬಹುಮನಿ ಸುಲ್ತಾನರೊಂದಿಗೆ ಜರುಗಿದ ತಾಳಿಕೋಟೆ ಯುದ್ಧದಲ್ಲಿ ಸೋಲನ್ನು ಅನುಭವಿಸಿದ ಮೇಲೆ ಈ ಪ್ರದೇಶ ಬಹುಮನಿ ಸುಲ್ತಾನರ ಕೈಸೇರಿತು. ತದನಂತರ ಈ ಪ್ರದೇಶ ಸುಲ್ತಾನರ ಸಾಮಂತ ಅರಸರ ಕೈಸೇರಿತ್ತು.

## ಎಡದೊರೆ – ೨೦೦೦

ಸಾಮ್ರಾಜ್ಯದ ಪ್ರಬಲ ಅರಸರು ತಮ್ಮ ವಿಸ್ತಾರ ಸಾಮ್ರಾಜ್ಯವನ್ನು ಹಿಡಿತದಲ್ಲಿಟ್ಟುಕೊಳ್ಳಲು ರಾಜ್ಯವನ್ನು ಅನೇಕ ಭಾಗಗಳಾಗಿ ವಿಂಗಡಿಸುತ್ತಿದ್ದರು. ಈ ಭಾಗಗಳನ್ನು ನೈಸರ್ಗಿಕ ಗಡಿಗಳಾದ ನದಿ, ಬೆಟ್ಟ, ಗುಡ್ಡ ಮುಂತಾದವುಗಳಿಂದ ಗುರುತಿಸಲಾಗುತ್ತಿತ್ತು. ಈ ರೀತಿಯಾಗಿ ಗುರುತಿಸಿದ ಪ್ರಸಿದ್ಧ ಪ್ರದೇಶಗಳನ್ನು ಆಡಳಿತ ಕೇಂದ್ರಗಳನ್ನಾಗಿಸಿ ಆ ನಾಡನ್ನೇ ಅದೇ ಹೆಸರಿನಿಂದ ಕರೆಯಲಾಗುತ್ತಿತ್ತು. ಇಂತಹ ನಾಡುಗಳನ್ನು ರಾಜವಂಶದವರು, ಉತ್ತರಾಧಿಕಾರಿಗಳು, ರಾಜಪ್ರತಿನಿಧಿಗಳು ಮತ್ತು ಮಹಾಮಂಡಳೇಶ್ವರರು ಒಂದು ಗ್ರಾಮ ಅಥವಾ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದರು. ಈ ರೀತಿಯಾಗಿ ಹುಟ್ಟಿಕೊಂಡ ನಾಡುಗಳಲ್ಲಿ ಎಡದೊರೆ–೨೦೦೦ ನಾಡು ಪ್ರಮುಖವಾದ್ದದು. ನಿರ್ದಿಷ್ಟ ಪ್ರದೇಶದಲ್ಲಿ ಬರುವಂತಹ ಹಳ್ಳಿಗಳ ಸಂಖ್ಯೆಯಿಂದ ನಾಡನ್ನು ಗುರುತಿಸಲಾಗುತ್ತಿತ್ತು.

ಎಡದೊರೆ–೨೦೦೦ ನಾಡು ಕೃಷ್ಣ ಮತ್ತು ತುಂಗಭದ್ರೆಗಳಿಂದಾಗಿ ರೂಪುಗೊಂಡಿದೆ. ಆದ್ದರಿಂದ ರಾಯಚೂರು ಜಿಲ್ಲೆಯನ್ನು ಎಡದೊರೆನಾಡು ಎಂದು ಕರೆಯುತ್ತಾರೆ.[೨೮] ಈ ಎಡದೊರೆನಾಡಿನ ಮೇರೆಗಳನ್ನು ಅಂದಿನ ಆಡಳಿತ ವಿಭಾಗಗಳ ಹಿನ್ನಲೆಯಲ್ಲಿ ಗುರುತಿಸುವುದು ಸುಲಭಸಾಧ್ಯ. ಉತ್ತರದಲ್ಲಿ ಆಳಂದೆ ೧೦೦೦ ನಾಡಿನ ಉಪವಿಭಾಗ ಅತ್ತನೂರು ೮೦, ಈಶಾನ್ಯದಲ್ಲಿ ಅರಲು ೩೦೦, ಪೂರ್ವದಲ್ಲಿ ಆಯಿಜೆ ೩೦೦, ಆಗ್ನೇಯಕ್ಕೆ ಸಿಂದವಾಡಿ ನಾಡಿನ ಮಂಜಾಲ(ಮಂತ್ರಾಲಯ) ೩೬, ದಕ್ಷಿಣದಲ್ಲಿ ಬಲ್ಲಕುಂದೆ ನಾಡಿನ ತೆಕ್ಕೆಕಲ್ಲು ೧೨ ಮತ್ತು ಬೆಳ್ವಲನಾಡಿನ ಕುಕ್ಕನೂರು ೩೦, ಕಿಸುಗಾಡು ೭೦ ಮತ್ತು ಹುನುಗುಂದ ೩೦ ಹಾಗೂ ತರ್ದವಾಡಿ ನಾಡಿನ ನಲವತ್ತುವಾಡ (ನಾಲತವಾಡ), ವಾಯುವ್ಯದಲ್ಲಿ ತರ್ದವಾಡಿ ನಾಡಿನ ಸಿಂದಗಿ ೧೨ ಮತ್ತು ನರಿಯಂಬೊಳೆ ೭೦ ವಿಭಾಗಗಳು ಈ ನಾಡಿನ ಬಾಹ್ಯ ಮೇರೆಗಳಾಗಿದ್ದವು.[೨೯]

ಎಡದೊರೆ ನಾಡಿನ ಅತ್ಯಂತ ಪ್ರಾಚೀನ ಉಲ್ಲೇಖ ರಾಷ್ಟ್ರಕೂಟರ ಅರಸ ಅಕಾಲವರ್ಷನ ಕ್ರಿ.ಶ. ೮೯೧–೯೨ರ ಭೋಗಾವತಿ ಶಾಸನದಲ್ಲಿ ಕಂಡುಬರುತ್ತದೆ.[೩೦] ಆಗ ಜಗತುಂಗನು ಎಡದೊರೆ ೨೦೦೦ ನಾಡನ್ನು ಅಣುಗ ಜೀವಿತವಾಗಿ ಆಳುತ್ತಿದ್ದನೆಂದು ಆ ಶಾಸನದಿಂದ ತಿಳಿದುಬರುತ್ತದೆ. ಎಡದೊರೆ ೨೦೦೦ ಆಡಳಿತ ವಿಭಾಗದ ಆರಂಭದ ಶಾಸನಗಳು ಸಿಂಧನೂರು ಮತ್ತು ಮಾನ್ವಿ ತಾಲ್ಲೂಕಗಳಲ್ಲಿ ದೊರೆಯುವುದರಿಂದ ತುಂಗಾಭದ್ರಾ ಎಡದಂಡೆಯ ಭಾಗವೆಂಬಂತೆ ಅರ್ಥವಾಗುತ್ತದೆ. ತುಂಗಭದ್ರಾ ನದಿ ದಂಡೆಯ ಮೇಲಿರುವ ಸಿಂಧನೂರು ತಾಲ್ಲೂಕಿ ಮುಕ್ಕುಂದೆಯು ಎಡದೊರೆ ನಾಡಿನಲ್ಲಿ ಸಮಾವೇಶಗೊಂಡಿತ್ತು.[೩೧]

ಈ ಎಡದೊರೆ ೨೦೦೦ ನಾಡಿನ ರಾಜಧಾನಿಯನ್ನು ಆಡಳಿತದ ಅನುಕೂಲಕ್ಕಾಗಿ ಒಂದು ಗ್ರಾಮದಿಂದ ಮತ್ತೊಂದಕ್ಕೆ ಸ್ಥಳಾಂತರಿಸುವುದನ್ನು ಶಾಸನಗಳು ಉಲ್ಲೇಖಿಸಿವೆ. ಎಡದೊರೆ ನಾಡಿಗೆ ಆರಂಭದಲ್ಲಿ ಅದೇ ಹೆಸರಿನ ಗ್ರಾಮವು ರಾಜಧಾನಿಯಾಗಿದ್ದು, ಮುಂದೆ ಅದು ಮಸ್ಕಿಗೆ ಸ್ಥಳಾಂತರಗೊಂಡಿರಬೇಕು.[೨] ಮಸ್ಕಿಯ ಮೂರು ಮತ್ತು ಬಳಗಾನೂರು ಪರಿಸರದ ಸುಂಕನೂರು ಶಾಸನಗಳು 'ರಾಜಧಾನಿ ಪಿರಿಯ ಮೋಸಂಗಿ' ಎಂದು ಕರೆದಿವೆ. ಆದ್ದರಿಂದ ಇಂದಿನ ಲಿಂಗಸುಗೂರು ತಾಲ್ಲೂಕಿನ ಮಸ್ಕಿಯೇ ಚಾಲುಕ್ಯರ ಕಾಲದಲ್ಲಿ ಎಡದೊರೆ ೨೦೦೦ ನಾಡಿನ ರಾಜಧಾನಿಯಾಗಿತ್ತೆಂದು ಹೇಳಬಹುದು.[೩೩]

**ಕರಡಿಕಲ್ಲು ಕದಂಬರು (ಕ್ರಿ.ಶ. ೧೦ನೇ ಶತಮಾನದಿಂದ – ೧೨೧೫ ರವರೆಗೆ) :**

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಕರಡಿಕಲ್ಲು ಗ್ರಾಮವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಇವರನ್ನು ಕರಡಿಕಲ್ಲು ಕದಂಬರು ಎಂದು ಕರೆಯಲಾಗುತ್ತದೆ. ಈಗ ಈ ಗ್ರಾಮ ಒಂದು ಚಿಕ್ಕ ಹಳ್ಳಿಯಾಗಿದೆ. ಇಂದಿನ ಕರಡಿಕಲ್ಲು ಅಂದಿನ ದಿನಮಾನಗಳಲ್ಲಿ ಕರಡಿಕಲ್ಲು–೩೦೦ ಹಳ್ಳಿಗಳ ಆಡಳಿತ ವಿಭಾಗವಾಗುವುದರ ಜೊತೆಗೆ ಇದು ಎಡದೊರೆ ೨೦೦೦ ನಾಡಿನಲ್ಲಿತ್ತು. ಈ ವಂಶದ ಭೂತರಸ ಎಂಬ ದೊರೆಗೆ ಸಂಬಂಧಿಸಿದ ಶಾಸನ ಮಸ್ಕಿ ಗ್ರಾಮದಲ್ಲಿದ್ದು ಇದರ ಕಾಲಾವಧಿ ಕ್ರಿ.ಶ.೧೧೧೩. ಇದರಲ್ಲಿ ಕದಂಬ ವಂಶದ ಮನ್ನೇಯ ಭೂತರಸ ಮತ್ತು ಇತರರಾದ ಮೈಲಾರರಾವುತ ಇವನ ಮೇಲಾಳ್ಕೆಯ ಪಟ್ಟಸಾಹಣೆಯು ಕರಡಿಕಲ್ಲು–೩೦೦ ರ ವಿಭಾಗದಲ್ಲಿ ಬರುವ ಪಿರಿಯ ಕಾಟಿಂಗಲ್‌ನ(ಕಾಟಿಗಲ್ಲು) ಶನೇಶ್ವರ ದೇವಾಲಯಕ್ಕೆ ಭೂಮಿ ದತ್ತಿಕೊಟ್ಟ ವಿಷಯ ಪ್ರಸ್ತಾಪವಿದೆ. ಶಾನ್ತರಸನೆಂಬುವವನು ಪಿರಿಯ ಕಾಟಿಂಗಲ್‌ನಲ್ಲಿ ಬಾವಿಯನ್ನು ನಿರ್ಮಿಸಿದರ ಬಗ್ಗೆ ಹೇಳುತ್ತದೆ.[೩೪]

**ನಾಡಗೌಡ ಮನೆತನಗಳು :**

ಪ್ರಬಲ ಸಂಸ್ಥಾನಗಳು ಮತ್ತು ಅರಸರು ಆಡಳಿತದ ಅನುಕೂಲಕ್ಕಾಗಿ, ದೇಸಾಯಿ, ದೇಶಮುಖ, ಕುಲಕರ್ಣಿ, ಜಹಗೀರುದಾರ ಮುಂತಾದವರನ್ನು ನೇಮಿಸಿಕೋಳ್ಳುತ್ತಿದ್ದರು. ಅವರಿಗೆ ಭೂಮಿ ಮತ್ತು ಪ್ರದೇಶವನ್ನು ನೀಡಿ ವತನದಾರರನ್ನಾಗಿ ಮಾಡಿಸಿ ಕಂದಾಯ ವಸೂಲಿ ಮಾಡುವ ಜೊತೆಗೆ ಸೈನ್ಯವನ್ನು ಇಟ್ಟುಕೊಳ್ಳುವ ಅಧಿಕಾರವನ್ನು ಕೊಡಲಾಗುತ್ತಿತು. ಹೀಗೆ ನಿರ್ದಿಷ್ಟ ಭೂಮಿ ಮತ್ತು ಪ್ರದೇಶಗಳನ್ನು ಇಟ್ಟುಕೊಂಡು ಆಳ್ವಿಕೆ ಮಾಡಲು ನೇಮಕಗೊಂಡ ಇವರು ಅಗತ್ಯ ಬಿದ್ದಾಗ ಸೈನಿಕ ಸಹಾಯವನ್ನೂ ಮಾಡಬೇಕಾಗಿತ್ತು. ರಾಯಚೂರು

ಪ್ರಾಂತ್ಯವನ್ನು ಆಳಿದ ಕೆಲವು ಸಂಸ್ಥಾನಗಳೊದಿಗೆ ನಾಡಗೌಡ ಮನೆತನದವರು ತಮ್ಮದೆಯಾದ ರಾಜಕೀಯ ಮತ್ತು ಸಾಂಸ್ಕೃತಿಕ ಕೊಡುಗೆಯನ್ನು ನೀಡಿರುವರು. ರಾಯಚೂರು ಜಿಲ್ಲೆಯಲ್ಲಿ ಸುಮಾರು ೨೦ ನಾಡಗೌಡ ಮನೆತನಗಳಿದ್ದವು. ಅವುಗಳಲ್ಲಿ ಜವಳಗೇರೆ, ಉದ್ಬಾಳ, ಉಮಲೂಟಿ, ಗೆಜ್ಜಲಗಟ್ಟಿ, ಮೆದಕಿನಾಳ, ಮುದುಗಲ್, ಗಣೆಕಲ್ಲು, ಪ್ರಮುಖಗಳಾಗಿವೆ. ಬಹುತೇಕ ಎಲ್ಲಾ ನಾಡಗೌಡ ಅರಸು ಮನೆತನಗಳು ಸುರಪುರ ಸಂಸ್ಥಾನ ನಾಯಕರಿಗೆ ಅಧೀನವಾಗಿದ್ದವು.[೩೫] ಸುರಪುರದ ನಾಯಕರ ನಂತರ ಇವು ಹೈದರಾಬಾದ್ ನಿಜಾಮನ ಅಧೀನಕ್ಕೆ ಒಳಗಾದವು. ಮಸ್ಕಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡ ನಾಡಗೌಡ ಸಂಸ್ಥಾನಗಳು ಇಲ್ಲವಾದರೂ ಸಹ ಮಸ್ಕಿ ಪರಿಸರದ ಕೆಲವೊಂದು ಗ್ರಾಮಗಳನ್ನು ತಮ್ಮ ಅಧೀನಕ್ಕೆ ಒಳಪಡಿಸಿಕೊಂಡು ಉದ್ಬಾಳ ಮತ್ತು ಮೆದಿಕಿನಾಳ ನಾಡಗೌಡ ಸಂಸ್ಥಾನಗಳು ಆಳ್ವಿಕೆಮಾಡಿವೆ. ಉದ್ಬಾಳ ಸಂಸ್ಥಾನವು ಮೂಲತಃ ೧೨೦ ಹಳ್ಳಿಗಳ ಆಡಳಿತ ಘಟಕವಾಗಿತ್ತು. ಅವುಗಳಲ್ಲಿ ಮಸ್ಕಿ ಪರಿಸರಕ್ಕೆ ಸಂಬಂಧಿಸಿದಂತೆ ಪರಾಪುರ, ಸುಂಕನೂರು, ಚಿಕ್ಕಕಡಬೂರು, ಹುಲ್ಲೂರು ಗ್ರಾಮಗಳು ಸೇರಿದ್ದವು. ಮೆದಿಕಿನಾಳ ನಾಡಗೌಡರ ಸಂಸ್ಥಾನವು ಆರಂಭದಲ್ಲಿ ೪೪ ಹಳ್ಳಿಗಳ ಆಡಳಿತ ಕೇಂದ್ರವಾಗಿತ್ತು. ಮುಂದೆ ಅದು ೩೩ ಹಳ್ಳಿಗಳಿಗೆ ಸೀಮಿತವಾಯಿತು. ಬಹುಶಃ ಇಲ್ಲಿಯ ೧೧ ಹಳ್ಳಿಗಳು ಉಮಲೂಟಿಗೆ ಹಂಚಿಕೆಯಾಗಿರಬೇಕು. ಎಂದರೆ ಉಮಲೂಟಿಯು ಈ ಸಂಸ್ಥಾನದ ಉಪಶಾಖೆಯಾಗಿರಬೇಕು. ಇಂದಿನ ಲಿಂಗಸುಗೂರು ತಾಲ್ಲೂಕಿನ ೧೯, ಸಿಂಧನೂರು ತಾಲ್ಲೂಕಿನ ೭, ಮತ್ತು ಕುಷ್ಠಗಿ ತಾಲ್ಲೂಕಿನ ೭ ಹಳ್ಳಿಗಳು, ಇದರಲ್ಲಿ ಸೇರಿದ್ದವು. ಅವುಗಳಲ್ಲಿ ಪ್ರಸ್ತುತ ಮಸ್ಕಿ ಪರಿಸರಕ್ಕೆ ಸಂಬಂಧಿಸಿದಂತೆ ಕೆಲವು ಗ್ರಾಮಗಳು ಕಂಡುಬರುತ್ತವೆ. ಅವುಗಳೆಂದರೆ ಮೆದಕಿನಾಳ, ಹಂಪನಾಳ, ಹಂಚಿನಾಳ, ಗುಡುಗಲದಿನ್ನಿ ಸೇರಿದಂತೆ ಇದುವರೆಗೆ ೨೯ ಹಳ್ಳಿಗಳು ಲೆಕ್ಕ ಸಿಕ್ಕಿವೆ. ಇನ್ನುಳಿದ ೪ ಹಳ್ಳಿಗಳನ್ನು ಗುರುತಿಸಬೇಕಾಗಿದೆ. ಎಂದು ಸಂಶೋಧಕ ಚನ್ನಬಸವ ಹಿರೇಮಠ ಅವರು ಹೇಳಿದ್ದಾರೆ.[೩೬]

ಪ್ರಸ್ತುತ ಸಂಶೋಧನೆ ಸಮಯದಲ್ಲಿ ಈ ಮೇಲಿನ ೪ ಹಳ್ಳಿಗಳನ್ನು ಹುಡುಕುವ ಪ್ರಯತ್ನದಲ್ಲಿ ಕೆಲವೊಂದು ಗ್ರಾಮಗಳಲ್ಲಿ ಈ ಬಗ್ಗೆ ಮಾಹಿತಿ ದೊರೆತಿದೆ. ಅದರಲ್ಲಿ ಮುಖ್ಯವಾಗಿ ನಂಜಲದಿನ್ನಿ, ನಾಗರಬೆಂಚಿ ಗ್ರಾಮಗಳಲ್ಲಿ ದೊರೆಯುವ ಹುಡೇವಿನ ಕುರುವು, ಲಿಂಗಮುದ್ರೆ ಕಲ್ಲುಗಳು, ವೀರಗಲ್ಲುಗಳು (ಬಂದೂಕು ವೀರಗಲ್ಲುಗಳು), ಗಮನಿಸಿದರೆ ಇವೆಲ್ಲವುಗಳು ಮೆದಕಿನಾಳ ಸಂಸ್ಥಾನಕ್ಕೆ ಸಾಮಿಪ್ಯವನ್ನು ಹೊಂದಿರುವಂತೆ ಕಂಡುಬರುತ್ತವೆ. ಆದರಿಂದ ಈ ಮೇಲಿನ ಆ ೨ ಗ್ರಾಮಗಳು ಮೆದಿಕಿನಾಳ ನಾಡಗೌಡ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದವು ಎಂದು ಹೇಳಬಹುದು.

ಈ ರೀತಿಯಾಗಿ ಮಸ್ಕಿಯು ಆದಿಮಾನವನ ಕಾಲದಿಂದ ಪ್ರಸ್ತುತ ದಿನಮಾನದಲ್ಲಿಯೂ ಸಹ ಜನವಾಸ ಕೇಂದ್ರವಾಗಿ ಗುರುತಿಸಿಕೊಂಡಿದೆ. ಅದರಲ್ಲಿ ಮುಖ್ಯವಾಗಿ ಚಾರಿತ್ರಿಕವಾಗಿ ನೋಡುವುದಾದರೆ. ಮೌರ್ಯರ ದೊರೆ ಅಶೋಕನ ಹೆಸರನ್ನು ಉಲ್ಲೇಖಿಸುವ ಮೂಲಕ ಆರಂಭವಾಗಿ ವಿಜಯನಗರ ಮತ್ತು ನಾಡಗೌಡ ಮನೆತನಗಳ ಕಾಲಾವಧಿಯಲ್ಲಿ ಹೆಚ್ಚು ಕಾರ್ಯ ಚಟುವಟಿಕೆ ಕೇಂದ್ರವಾಗಿ ಕಾರ್ಯನಿರ್ವಹಿಸಿದೆಯೆಂದು ಇದು ತನ್ನ ಒಡಲಲ್ಲಿ ಒಳಗೊಂಡಿರುವಂತ ಪ್ರಮುಖ ಆಕರಗಳ ಮೂಲಕ ತಿಳಿಯಬಹುದು.

## ಕೊನೆ ಟಿಪ್ಪಣಿ

೧. ಜನಗಣತಿಯ ಅಂಕಿಅಂಶಗಳ ಮಾಹಿತಿ, ತಾಲ್ಲೂಕ ಕಛೇರಿ ಲಿಂಗಸುಗೂರು, ೨೦೧೬

೨. ಅಮರೇಶ ಯತಗಲ್, ಇತಿಹಾಸ ದರ್ಶನ, ಸಂ.೧೮, ಪು.೬೫

೩. ವಾಸುದೇವನ್ ಸಿ.ಎಸ್, ರಾಯಚೂರು ಜಿಲ್ಲೆಯ ದೇವಾಲಯ ಕೋಶ, ೨೦೧೨, ಪು.೧೧೭

೪. ಚನ್ನಬಸವ ಹಿರೇಮಠ, ಸತ್ಯದ ಹಾದಿ, ೨೦೦೮, ಪು.೧೫೭

೫. ಅದೇ, ಪು.೧೫೭

೬. ಅದೇ, ಪು.೧೫೮

೭. ಅದೇ, ಪು.೧೫೮

೮. ಮಂಜುನಾಥ ಜೋಗಿನಕಟ್ಟೆ, ಮಸ್ಕಿ ಕನ್ನಡ : ಒಂದು ಭಾಷಿಕ ಅಧ್ಯಯನ, ೨೦೧೧, ಪಿಎಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ., ಪು.೧೪

೯. ಅದೇ, ಪು.೭

೧೦. ಅದೇ, ಪು.೭

೧೧. ರಾಮದಾಸ್ ರೆಡ್ಡಿ ಎಸ್ ಜಿ, ಇತಿಹಾಸ ಮತ್ತು ಸಂಶೋಧನಾಕಾರ್ಯ, ೨೦೧೦, ಪು.೦೭

೧೨. ಅಮರೇಶ ಬಳಗಾನೂರ ಹೋಬಳಿ ಪರಿಸರದ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್.ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ., ೨೦೧೧, ಪು.೮೩

೧೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ೦೭, ರಾಯಚೂರು ಜಿಲ್ಲೆ, ೨೦೦೩, ಪು.೩೦

೧೪. ಚನ್ನಬಸಪ್ಪ ಮಲ್ಕಂದಿನ್ನಿ, ಮಸ್ಕಿಯ ಪ್ರಾಚ್ಯಾವಶೇಷಗಳು, ೨೦೧೭, ಪು. ೨೬

೧೫. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ೦೭, ರಾಯಚೂರು ಜಿಲ್ಲೆ, ೨೦೦೩, ಪು.೩೦

೧೬. ಅದೇ

೧೭. ಅದೇ

೧೮. ಅದೇ

೧೯. ಅದೇ

೨೦. ಅದೇ, ಪು.೩೧

೨೧. ಅದೇ

೨೨. ಅದೇ

೨೩. ಅದೇ, ಪು.೩೨

೨೪. ಅದೇ, ಪು.೩೪

೨೫. ಅದೇ, ಪು.೩೬

೨೬. ಅದೇ, ಪು.೩೭

೨೭.. ಚನ್ನಬಸವ ಹಿರೇಮಠ, ಪೂರ್ವೋಕ್ತ, ೨೦೦೮, ಪು.೧೪

೨೮. ಅದೇ, ಪು.೧೫

೨೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ೦೭, ರಾಯಚೂರು ಜಿಲ್ಲೆ, ಪು.೩೮

೩೦. ಚನ್ನಬಸವ ಹಿರೇಮಠ, ಪೂರ್ವೋಕ್ತ, ೨೦೦೮, ಪು.೧೫೦

೩೧.ಅದೇ, ಪು.೧೫೦

೩೨. ಚನ್ನಬಸವ ಹಿರೇಮಠ, ಎಡದೊರೆನಾಡು, ೨೦೦೦, ಪು.೭

೩೩. ಅದೇ, ಪು.೮

೩೪. ಅದೇ

೩೫. ಅದೇ, ಪು.೯

## ಅಧ್ಯಾಯ – ೩

## ಕಲೆ ಮತ್ತು ವಾಸ್ತುಶಿಲ್ಪ

### ದೇವಾಲಯದ ಉಗಮ ಮತ್ತು ವಿಕಾಸ

ವಾಸ್ತವವಾಗಿ ಕಲೆ ಎಂದರೇ ಮನುಷ್ಯನ ನಿಗೂಢ ಭಾವನೆಗಳನ್ನು ಚಿತ್ರ ಶಿಲ್ಪಕಲೆಗಳ ರೂಪದಲ್ಲಿ ತೋರಿಸುವುದಾಗಿದೆ. ಜೀವನದ ಸಾಮಾಜಿಕ, ರಾಜಕೀಯ, ಮತ್ತು ಸಾಂಸ್ಕೃತಿಕ ಘಟನಾವಳಿಗಳ ವಿಶಿಷ್ಟ ಕಲೆ ಎಂದು ಹೇಳಬಹುದು. ಈ ಕಲೆ ಆದಿಮಾನವನ ಕಾಲದಿಂದಲೂ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಮನುಷ್ಯನಲ್ಲಿ ಕಾಣುವ ಮುಖ್ಯ ಗುಣಗಳೆಂದರೆ, ತಾನು ಕಂಡು ಅನುಭವಿಸಿದ ಸಿಹಿ–ಕಹಿ ಅನುಭವಗಳನ್ನು ಕಲೆಯ ರೂಪದಲ್ಲಿ ತೋರಿಸುವುದು. ಹಾಗೂ ತನ್ನ ಆತಂಕಗಳನ್ನು, ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಕಲೆಯ ಮೂಲಕ ಇತರರಿಗೆ ತಿಳಿಯಪಡಿಸುವುದು. ಈ ರೀತಿ ಮಾನವನಲ್ಲಿ ಅಂತರ್ಗವಾಗಿರುವ ಅಭಿವ್ಯಕ್ತಿಯೇ ಕಲೆಯಾಗುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಯಾವುದೇ ಒಂದು ಕೆಲಸವನ್ನು ನಿಯಮಬದ್ಧವಾಗಿ, ಕ್ರಮಬದ್ಧವಾಗಿ ಮಾಡುವುದೇ ಕಲೆ ಎನಿಸಿಕೊಳ್ಳುತ್ತದೆ. ಗಟ್ಟಿಯಾದ ವಸ್ತುವಿನಿಂದ ವಾಸ್ತುವಿನ (ನಿವೇಶನ) ಮೇಲೆ ರಚನೆಗೊಂಡ ಎಲ್ಲ ವಾಸಯೋಗ್ಯ ರಚನೆಗಳೂ ವಾಸ್ತುರಚನೆ ಎನಿಸಿಕೊಳ್ಳುತ್ತವೆ. ಈ ರೀತಿಯ ವಾಸ್ತುರಚನೆಗಳು ಮಾನವ ನಾಗರಿಕತೆಯ ಮಾನದಂಡ ಎಂದರೆ ತಪ್ಪಾಗಲಾರದು. ಕಾಲಾಂತರದಲ್ಲಿ ಮಾನವನ ಬೌದ್ಧಿಕ ವಿಕಸನದ ರೀತಿಯ ಖಚಿತತೆಯ ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಬಹುದು.[೧]

ಮಾನಸಾರ, ಮಯಮತ, ಕಶ್ಯಪ, ವೈಖಾನಸ, ವಿಶ್ವಕರ್ಮೀಯ, ಇನ್ನೂ ಮೊದಲಾದ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ದೇವಾಲಯಗಳ ನಿರ್ಮಾಣ ಕುರಿತು ಅನೇಕ ವಿವರಗಳು ದೊರೆಯುತ್ತವೆ. ದುರಾದೃಷ್ಟವಶಾತ್ ಈ ಎಲ್ಲಾ ಗ್ರಂಥಗಳು ಪೂರ್ಣಪ್ರಮಾಣದಲ್ಲಿ ದೊರೆಯದೇ ಇದ್ದುದ್ದು ದೇವಾಲಯಗಳ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ.[೨] ಆದರೂ ಮಾನಸಾರ ಗ್ರಂಥವು ದೇವಾಲಯಗಳ ನಿರ್ಮಾಣದ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಸುತ್ತದೆ. ಈ ಗ್ರಂಥವು ಒಟ್ಟು ೫೮ ಅಧ್ಯಾಯಗಳನ್ನು ಹೊಂದಿದೆ, ಪ್ರತಿ ಅಧ್ಯಾಯದಲ್ಲೂ ದೇವಾಲಯಗಳ ನಿರ್ಮಾಣದ ಉದ್ದೇಶ, ಶಿಲ್ಪಿಗೆ ಇರಬೇಕಾದ ಅರ್ಹತೆಗಳು, ದೇವಾಲಯ ನಿರ್ಮಾಣ ಯೋಗ್ಯಸ್ಥಳ, ದೇವಾಲಯಗಳನ್ನು ಗ್ರಾಮ, ನಗರಗಳ ಯಾವ ಭಾಗದಲ್ಲಿ, ಯಾವ ದಿಕ್ಕಿನಲ್ಲಿ ಕಟ್ಟಬೇಕು, ತಳವಿನ್ಯಾಸ, ಅಧಿಷ್ಠಾನ, ಶಿಖರ, ದೇವರುಗಳ ವಿಗ್ರಹಗಳ ಪ್ರತಿಷ್ಠಾಪನೆ, ಪರಿವಾರ ದೇವರುಗಳ ಪ್ರತಿಷ್ಠಾಪನೆ ಇನ್ನೂ ಮೊದಲಾದ ವಿವರಗಳನ್ನು ತಿಳಿಸುತ್ತದೆ.[೩]

ಮಯಮತ ಗ್ರಂಥವೂ ಸಹ ಮಾನಸಾರ ಕೃತಿಯಲ್ಲಿರುವ ವಿವರಗಳನ್ನು ತಿಳಿಸುತ್ತದೆ. ದೇವಾಲಯದ ಕಟ್ಟಡವನ್ನು ಕಟ್ಟಲು ಪ್ರಾರಂಭಿಸುವಾಗ ವಾಸ್ತುಪುರುಷನನ್ನು ತೃಪ್ತಿಪಡಿಸಲು ಮಾಡಬೇಕಾದ ಸಂಸ್ಕಾರ, ವಿಧಿ-ವಿಧಾನಗಳನ್ನು ತಿಳಿಸುತ್ತದೆ. ದೇವಾಲಯದ ಉಪಪೀಠ, ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಟ್ಟಡದ ಮೇಲ್ಛಾವಣಿ, ದೇವಾಲಯದ ಶಿಖರ, ಪ್ರಾಕಾರ, ಮಂಟಪಗಳು, ಬಲಿಪೀಠ ಇನ್ನೂ ಮುತಾಂದ ವಿವರಗಳನ್ನು ತಿಳಿಸುತ್ತದೆ. ಈ ಗ್ರಂಥದ ಕರ್ತೃ 'ಮಯ' ಎಂಬುವವರು ಆಗಿರಬಹುದೆಂದು ಹೇಳಲಾಗುತ್ತದೆ.[೪]

ಕಶ್ಯಪ ಋಷಿಯಿಂದ ರಚನೆಗೊಂಡ 'ಕಶ್ಯಪ' ಕೃತಿಯು ಗದ್ಯ ರೂಪದಲ್ಲಿದೆ, ಹೆಚ್ಚು ಕಡಿಮೆ ಈ ಮೇಲೆ ವಿವರಿಸಿದ ವಿಷಯಗಳನ್ನೇ ವಿವರಿಸುತ್ತದೆ. ದೇವಾಲಯ ನಿರ್ಮಾಣ ಯೋಗ್ಯಸ್ಥಳ, ದೇವಾಲಯ ನಿರ್ಮಾಣದ ಪ್ರಾರಂಭದಲ್ಲಿ ಮಾಡಬೇಕಾದ ಸಂಸ್ಕಾರಗಳು, ದ್ವಾರಗಳು, ಅಲಂಕರಣೆಗಳು, ದೇವಕೊಷ್ಟಗಳು, ಶಿಖರ, ವಿಮಾನ, ಪ್ರಮುಖ ದೇವಾನುದೇವತೆಗಳ ವಿಗ್ರಹಗಳು ಇತ್ಯಾದಿ ವಿವರಗಳನ್ನು ತಿಳಿಸುತ್ತದೆ.

ವೈಖಾನಸ ಋಷಿಯಿಂದ ರಚಿಸಲ್ಪಟ್ಟ 'ವೈಖಾನಸ' ಗ್ರಂಥವು ದೇವಾಲಯಗಳು ಗ್ರಾಮ, ನಗರ, ಪಟ್ಟಣಗಳನ್ನು ಕಟ್ಟುವ ಮೊದಲು ಮಾಡಬೇಕಾದ ಸಂಸ್ಕಾರ ವಿಧಾನಗಳನ್ನೇ ವಿಶೇಷವಾಗಿ ಈ ಗ್ರಂಥವು ತಿಳಿಸುತ್ತದೆ.[೫] ಸಕಲಾಧಿಕಾರ ಇನ್ನೂ ಮುಂತಾದ ಶಿಲ್ಪಶಾಸ್ತ್ರ ಗ್ರಂಥಗಳು ಸಹ ದೇವಾಲಯ ನಿರ್ಮಾಣ ಮತ್ತಿತರ ವಿವರಗಳನ್ನು ತಿಳಿಸುತ್ತದೆ. ಹೀಗೆ ಈ ಗ್ರಂಥಗಳಲ್ಲಿ ಉಲ್ಲೇಖಗೊಂಡಿರುವ ಅಂಶಗಳ ಹಿನ್ನಲೆಯಲ್ಲಿ ದೇವಾಲಯಗಳ ಉಗಮ, ನಿರ್ಮಾಣ ಮತ್ತು ವಿಕಾಸವನ್ನು ಈ ಮುಂದಿನಂತೆ ನೋಡಬಹುದು.

| | |
|---|---|
| ಸಂಖ್ಯೆ | : ೦೧ |
| ಸ್ಮಾರಕದ ಹೆಸರು | : ಈಶ್ವರ (ರಾಮಲಿಂಗ) ದೇವಾಲಯ |
| ಊರು | : ಸಾನಬಾಳ |
| ಸ್ಥಳ | : ಊರ ಒಳಗೆ |
| ಕಾಲ | : ಕ್ರಿ.ಶ. ೧೧-೧೨ನೇ ಶತಮಾನ |
| ಶೈಲಿ | : ಕಲ್ಯಾಣ ಚಾಲುಕ್ಯ |
| ಅಭಿಮುಖ | : ಪೂರ್ವ |
| ಸ್ಥಿತಿ | : ಶಿಥಿಲಾವಸ್ಥೆ |

ಊರ ಒಳಗಡೆ ಇರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಪ್ರಾಚೀನ ಶಿವಲಿಂಗವಿದೆ. ಮೇಲ್ಭಾಗದಲ್ಲಿ ಸರಳ ಭುವನೇಶ್ವರವನ್ನು ಹೊಂದಿದೆ. ಗರ್ಭಗೃಹದ ಬಾಗಿಲವಾಡವು ಮೂರು ಪಟ್ಟಿಕೆಗಳನ್ನು ಹೊಂದಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ತೆರೆದ ಅಂತರಾಳವು ನವರಂಗಕ್ಕೆ ಹೊಂದಿಕೊಂಡಿದೆ.

ಹಾಗೂ ನವರಂಗ ಭಾಗದಲ್ಲಿ ಪೂರ್ವಾಭಿಮುಖವಾಗಿ ಎರಡು ದೇವಕೋಷ್ಠಗಳಿವೆ. ಅಲಂಕರಣೆಯ ಗೋಡೆಗಂಬಗಳು ಅಂತರಾಳ ಮತ್ತು ನವರಂಗ ಭಾಗದ ಕೂಡಿಕೆಯ ಸ್ಥಳದ ಮೂಲೆಯಲ್ಲಿವೆ. ನವರಂಗ ಮಧ್ಯಭಾಗದಲ್ಲಿ ಎತ್ತರದ ವೇದಿಕೆಯ ಮೇಲೆ ನಾಲ್ಕು ಘನಾಕೃತಿಯ ಕಂಬಗಳಿವೆ. ಇವುಗಳ ನಡುವೆ ಇರುವ ಪುಟ್ಟ ವೇದಿಕೆಯಲ್ಲಿ ಬಸವನ (ನಂದಿ) ಶಿಲ್ಪವಿದೆ. (ಈ ಹಿಂದೆ ಇದ್ದಂತಹ ನಂದಿಯು ನಿಧಿಗಳ್ಳರಿಂದ ತೃಟಿತವಾಗಿದ್ದು ಇಲ್ಲಿ ಆಧುನಿಕವಾಗಿ ಕಪ್ಪು ಗ್ರಾನೈಟ್ ಶಿಲೆಯ ನಂದಿಯನ್ನು ಇಟ್ಟಿದ್ದಾರೆ) ಘನಾಕೃತಿಯ ಕಂಬಗಳು ಅಲಂಕರಣೆಯನ್ನು ಹೊಂದಿದ್ದು, ಭುವನೇಶ್ವರಿವನ್ನು ಆಧರಿಸಿವೆ.

ಭುವನೇಶ್ವರಿ ಭಾಗವನ್ನು ಸುಂದರವಾಗಿ ಅಲಂಕರಿಸಲಾಗಿದ್ದು, ಬಾಳೆಗೊನೆಯ ರಚನೆಯನ್ನು ಮೂಡಿಸಲಾಗಿದೆ. ಅವುಗಳ ಕೆಲವು ಭಾಗಗಳು ಶಿಥಿಲವಾಗಿವೆ. ಭುವನೇಶ್ವರಿಯು ಕಲ್ಲಿನಲ್ಲಿ ಅಷ್ಟದಿಕ್ಪಾಲಕರ ಅಥವಾ ನವಗ್ರಹಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಭಾಗದಲ್ಲಿ ಒಂದೆರಡು ಸಾಲಿನ ಬರಹ(ಶಾಸನ)ವಿದೆ. ಇದು ಬಹುಶಃ ಈ ದೇವಾಲಯ ನಿರ್ಮಿಸಿದ ಶಿಲ್ಪಿಯ ಹೆಸರಿರಬಹುದು. ಭುವನೇಶ್ವರಿ ಹೊತ್ತಿರುವ ಅಡ್ಡಪಟ್ಟಿಕೆ ಕಲ್ಲಿನ ಮೇಲೆ ನವರಂಗದ ಮುಂಭಾಗದ ಭಿತ್ತಿಯು ಶಿಥಿಲವಾಗಿದ್ದು, ಪ್ರಸ್ತುತ ತೆರೆದಿದೆ.

ನವರಂಗದ ಉತ್ತರದ ದಿಕ್ಕಿನಲ್ಲಿಯೂ ಸಹ ಪ್ರವೇಶದ್ವಾರವನ್ನು ಇರಿಸಲಾಗಿದೆ. ಗರ್ಭಗೃಹಕ್ಕೆ ಸ್ಪಷ್ಟ ಅಧಿಷ್ಠಾನವಿದೆ. ಪ್ರಸ್ತರದ ಮೇಲಿನ ಭಾಗವನ್ನು ಗಾರೆಯಿಂದ ಸಮ ಮಾಡಲಾಗಿದೆ. ಹಾಗೂ ೧೮-೧೯ನೇ ಶತಮಾನದಲ್ಲಿ ನಿರ್ಮಿಸಲಾದ ಗಾರೆಯ ಶಿಖರವಿದೆ. ಇಲ್ಲಿ ಗಾರೆಯ ನಂದಿ ಶಿಲ್ಪವನ್ನು ಇರಿಸಲಾಗಿದೆ. ಶಿಖರದ ಕೆಳಗೆ ನಾಲ್ಕು ದಿಕ್ಕುಗಳಿಗೆ ಮುಖಮಾಡಿದಂತೆ ನಾಲ್ಕು ಬಸವನ ಗಾರೆಯ ಶಿಲ್ಪಗಳಿವೆ. ಶಿಖರದ ಮೇಲ್ಭಾಗದಲ್ಲಿ ಕಳಸವಿದೆ.

ನವರಂಗ ಭಾಗದ ಅಧಿಷ್ಠಾನ ನಾಶವಾಗಿದೆ. ಇಲ್ಲಿನ ಭಿತ್ತಿಯನ್ನು ಸ್ಥಳೀಯವಾಗಿ ಸಿಗುವ ಸಣ್ಣ ಕಲ್ಲುಗಳಿಂದ ನವೀಕರಿಸಲಾಗಿದೆ. ಇದರ ಮುಂಭಾಗದಲ್ಲಿ ಮುಖಮಂಟಪವಿದ್ದು ಅದರ ಎರಡು ಕಂಬಗಳು ಮಾತ್ರ ಪ್ರಸ್ತುತ ಉಳಿದಿವೆ. ಎರಡು ಪಾವಟೆಗಳ ಮೂಲಕ ಈ ಆಲಯವನ್ನು ಪ್ರವೇಶಿಸಬಹುದಾಗಿದೆ. ಪೂರ್ಣ ಅಧಿಷ್ಠಾನದ ಭಾಗಗಳು ಇಲ್ಲಿ ಕಂಡುಬರುತ್ತವೆ. ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ದೇವಿಗಳ ಅಸ್ಪಷ್ಟ ಶಿಲ್ಪಗಳು, ನಾಗಶಿಲ್ಪಗಳು ಮತ್ತು ಗಣೇಶನ ಶಿಲ್ಪಗಳಿವೆ.[೬] ಇಲ್ಲಿಂದ ಗರ್ಭಗೃಹದವರೆಗೆ ಆಲಯ ಉತ್ತಮ ಸ್ಥಿತಿಯಲ್ಲಿದೆ. ಅದರ ಮುಂದಿನ ಭಾಗಗಳು ಶಿಥಿಲಗೊಂಡಿವೆ. ಕಣಶಿಲೆಯಿಂದ ಈ ಗುಡಿಯನ್ನು ನಿರ್ಮಿಸಲಾಗಿದ್ದು, ಗರ್ಭಗುಡಿಯ ಬಾಗಿಲವಾಡಕ್ಕೆ ಆಧುನಿಕವಾಗಿ ಕಬ್ಬಿಣದ ಬಾಗಿಲನ್ನು ಅಳವಡಿಸಿದ್ದಾರೆ.

ಸಂಖ್ಯೆ : ೦೨

ಸ್ಮಾರಕದ ಹೆಸರು : ಹನುಮಂತ ಗುಡಿ

ಊರು : ಸಾನಬಾಳ

ಸ್ಥಳ : ಅಗಸಿ (ಕೋಟೆ) ಮುಂಭಾಗ

ಕಾಲ : ಕ್ರಿ. ಶ. ೧೮-೧೯ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಉತ್ತರ

ಈ ದೇವಾಲಯವು ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡಿದೆ. ಆದರೆ ಇಲ್ಲಿ ಅದಕ್ಕೂ ಮೊದಲು ಬೇರೆ ದೇವಾಲಯ ಇದ್ದಿರಬಹುದು ಎನ್ನುವುದಕ್ಕೆ ಅನೇಕ ಸಾಕ್ಷಾಧರಗಳಿವೆ. ಅವುಗಳಲ್ಲಿ ಮುಖ್ಯವಾಗಿ ಗರ್ಭಗೃಹದ ಸುಂದರ ಅಲಂಕೃತ ಬಾಗಿಲುವಾಡದ ಅವಶೇಷಗಳಿವೆ. ಅದರಲ್ಲಿ ದ್ವಾರಪಾಲಕರ ಸುಂದರವಾದ ಉಬ್ಬುಶಿಲ್ಪಗಳಿವೆ. ಈ ಬಾಗಿಲುವಾಡವು ನಾಲ್ಕು ಪಟ್ಟಿಕೆಗಳನ್ನು ಹೊಂದಿದ್ದು, ಅದರಲ್ಲಿ ನಾಲ್ಕನೇ ಪಟ್ಟಿಕೆಯಲ್ಲಿ ಸಿಂಹಗಳ ಉಬುಶಿಲ್ಪಗಳಿವೆ. ಇದು ಕಲ್ಯಾಣ ಚಾಲುಕ್ಯರ ದೇವಾಲಯದ ಲಕ್ಷಣವನ್ನು ಹೋಲುತ್ತದೆ. ಎಡಭಾಗದಲ್ಲಿ ಮೂರು ನಾಗ ಶಿಲ್ಪಗಳಿವೆ. ಈ ದೇವಾಯಲದ ಮುಂಭಾಗದಲ್ಲಿ ದೀಪಸ್ತಂಭ ಮತ್ತು ಗರುಡಗಂಬವನ್ನು ಕಾಣುತ್ತೇವೆ. ಆಧುನಿಕವಾಗಿ ದೇವಾಲಯದ ಸುತ್ತ ಸುಮಾರು ಎರಡರಿಂದ ಮೂರು ಅಡಿ ಎತ್ತರದ ಸಣ್ಣ ಕಲ್ಲುಗಳಿಂದ ಕಟ್ಟೆಯನ್ನು ನಿರ್ಮಿಸಲಾಗಿದೆ.

ಈ ದೇವಾಲಯದ ಎಡಭಾಗದಲ್ಲಿ ಪೂರ್ವಭಿಮುಖವಾದಂತಹ ಒಂದು ದೇವಕೋಷ್ಟದಲ್ಲಿ ವೀರನ ಶಿಲ್ಪವಿದೆ. ಈ ಶಿಲ್ಪವು ಕಣಶಿಲೆಯಿಂದ ನಿರ್ಮಾಣಗೊಂಡಿದ್ದು ವೀರನ ಬಲಗೈಯಲ್ಲಿ ಬರ್ಚಿಯನ್ನು, ಎಡಗೈಯಲ್ಲಿ ಖಡ್ಗವನ್ನು ಕೊರಳಲ್ಲಿ ಮತ್ತು ಕಿವಿಯಲ್ಲಿ ವಿವಿಧ ಆಭರಣಗಳನ್ನು ಧರಿಸಿದೆ, ಕಿವಿಗಳು ದೊಡ್ಡವಾಗಿದ್ದು ಅವು ಮಡಚಿದಂತೆ ಭಾಸವಾಗುತ್ತದೆ.

ಸಂಖ್ಯೆ : ೦೩

ಸ್ಮಾರಕ ಹೆಸರು : ಗವಿಸಿದ್ದೇಶ್ವರ

ಊರು : ಹೂವಿನಬಾವಿ

ಸ್ಥಳ : ಊರಿನ ಆಗ್ನೇಯಕ್ಕೆ

ಕಾಲ : ಕ್ರಿ. ಶ ೧೨-೧೩ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಸ್ಥಿತಿ : ಮಧ್ಯಮ

ಊರಿನ ಆಗ್ನೇಯಕ್ಕೆ ಸುಮಾರು ೧೫ ಕಿಲೋಮೀಟರ್ ದೂರದ ಬೆಟ್ಟಗಳ ಮಧ್ಯದಲ್ಲಿರುವ ಈ ದೇವಾಲಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಳಿವೆ. ದೇವಾಲಯವನ್ನು ದಕ್ಷಿಣ ಭಾಗದಿಂದ ಪ್ರವೇಶಿಸಬಹುದಾಗಿದ್ದು, ಅದರ ಉತ್ತರಕ್ಕೆ ನವರಂಗ ಭಾಗದಲ್ಲಿ ಗವಿ ಇದೆ. ಇದರಿಂದಾಗಿ ಈ ದೇವಾಲಯವನ್ನು ಗವಿಸಿದ್ದೇಶ್ವರನೆಂದು ಕರೆಯಲಾಗುತ್ತಿದೆ. ಈ ಗವಿಯು ಸ್ವಾಭಾವಿಕ ಕಲ್ಲಾಸಾರೆಯಾಗಿದ್ದು ಅದಕ್ಕೆ ಹೊಂದಿಕೊಂಡಂತೆ ದೇವಾಲಯವನ್ನು ನಿರ್ಮಿಸಲಾಗಿದೆ. (ಪ್ರಸ್ತುತ ಆ ಗವಿಯ ದ್ವಾರವನ್ನು ಕಲ್ಲು ಬಂಡೆಗಳಿಂದ ಮುಚ್ಚಿದ್ದಾರೆ) ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದೆ. ಗರ್ಭಗೃಹದ ಹೊರಭಾಗದಲ್ಲಿ ಸ್ಪಷ್ಟ ಅಧಿಷ್ಠಾನವನ್ನು ಕಾಣಬಹುದು. ಗರ್ಭಗೃಹದ ಮುಂದಿರುವ ತೆರೆದ ಅಂತರಾಳ ಭಾಗದಲ್ಲಿ ಬಸವನ (ನಂದಿ) ಶಿಲ್ಪವಿದೆ. ನವರಂಗದ ಪಶ್ಚಿಮ ಗೋಡೆಯ ಇಕ್ಕೆಲಗಳಲ್ಲಿ ದೇವಕೋಷ್ಠಗಳನ್ನು ಇರಿಸಲಾಗಿದೆ. ಬಲಭಾಗದ ಕೋಷ್ಠದಲ್ಲಿ ಅನ್ನಪ್ರರ್ಣೆಯ ಶಿಲ್ಪ ಮತ್ತು ಎಡಭಾಗದಲ್ಲಿ ಗಣೇಶನ ಶಿಲ್ಪಗಳಿವೆ. ನವರಂಗದಲ್ಲಿ ನಾಲ್ಕು ಕಂಭಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿದ್ದು, ಕೆಳಗೆ ವೇದಿಕೆ ಇದೆ. ನವರಂಗದ ಪೂರ್ವಭಾಗದ ಭಿತ್ತಿಯನ್ನು ಸಂಪೂರ್ಣವಾಗಿ ನಿರ್ಮಿಸಿರುವುದರಿಂದ ಗುಡಿಯನ್ನು ಸಾಕಷ್ಟು ನವೀಕರಿಸಲಾಗಿದೆ. ಗರ್ಭಗೃಹದ ಮೇಲೆ ಸರಳ ಕಲ್ಲುಗಳ (ಕದಂಬ ನಾಗರ ಶೈಲಿ) ಶಿಖರವಿದೆ. ಹಾಗೂ ಗುಡಿಯ ಸುತ್ತಲೂ ಕಟ್ಟೆಯನ್ನು ವೇದಿಕೆಯಂತೆ ನಿರ್ಮಿಸಿ ಹಾಸುಗಲ್ಲುಗಳನ್ನು ಹಾಸಲಾಗಿದೆ. ನಂದಿಯ ನವೀನ ಗಾರೆ ಶಿಲ್ಪವನ್ನು ನವರಂಗದ ಮೇಲ್ಭಾಗದಲ್ಲಿ (ಹೊರಭಾಗದಲ್ಲಿ) ಇರಿಸಲಾಗಿದೆ.

ಗರ್ಭಗೃಹದ ಬಾಗಿಲವಾಡದಲ್ಲಿ ನಾಲ್ಕು ಪಟ್ಟಿಕೆಗಳು ಕಾಣಸಿಗುತ್ತವೆ. ಇವುಗಳಲ್ಲಿ ಲತಾಸುರಳಿ ಅಲಂಕೃತ ಹೂವಿನ ಎಸಳಿನ ಚಿತ್ತಾರಗಳಿವೆ. ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳಿದ್ದು, ಸುಂದರವಾಗಿ ಕೆತ್ತಲಾಗಿದೆ. ಲಲಾಟಬಿಂಬದಲ್ಲಿ ತ್ರೈಪುರುಷರ ಉಬ್ಬುಶಿಲ್ಪಗಳನ್ನು ಕಾಣಬಹುದು. ಗರ್ಭಗೃಹದ ಮುಂಭಾಗದಲ್ಲಿ ಅರ್ಧಚಂದ್ರ ಶಿಲೆಯಿದೆ. ಗರ್ಭಗೃಹದ ಬಾಗಿಲವಾಡವನ್ನು ಸಿಸ್ಟ್ ಕಲ್ಲಿನಿಂದ ರಚಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಆಧುನಿಕವಾಗಿ ಗ್ರಾನೈಟ್ ನೆಲ ಹಾಸುಗಳನ್ನು ಹಾಕಿದ್ದಾರೆ. ಗುಡಿಯ ಮುಂಭಾಗದ ಪೂರ್ವ ದಿಕ್ಕಿನಲ್ಲಿ ಈಶ್ವರ, ವೀರಭದ್ರ ಮತ್ತು ಹನುಮಂತ ದೇವರುಗಳಿಗೆ ಕಿರಿದಾದ ಗುಡಿ ಅಥವಾ ಗೂಡಿನಾಕಾರದ ಗುಡಿಗಳನ್ನು ನಿರ್ಮಿಸಲಾಗಿದೆ. ಈ ದೇವಾಲಯದ ಪಶ್ಚಿಮಕ್ಕೆ ಒಂದು ಬಾವಿ ಇದ್ದು, ಅದರ ದಂಡೆಯಲ್ಲಿ ಗಂಗಮ್ಮನ ಗುಡಿಯಿದೆ. ಬಾವಿಗೆ ಇಳಿಯಲು ಪೂರ್ವ ಭಾಗದಲ್ಲಿ ಮೆಟ್ಟಿಲುಗಳು ಇವೆ. ಈಗಲೂ ಸಹ ಇದೆ ಬಾವಿಯ ನೀರನ್ನು ದೇವಾಲಯದ ಪೂಜಾಕಾರ್ಯಗಳಿಗೆ ಬಳಸುತ್ತಿದ್ದಾರೆ.[೭] ಈ ಬಾವಿ ಮೇಲಿನ ಭಾಗದಲ್ಲಿ

ಗಣಪತಿಯ ಭಗ್ನಶಿಲ್ಪ, ವಾಸ್ತು ಅವಶೇಷಗಳು, ಭಕ್ತನ ಶಿಲ್ಪ ಹಾಗೂ ಕೆಲವು ಭಗ್ನ ಶಿಲ್ಪಗಳಿವೆ. ದೇವಾಲಯದ ಬಹು ಭಾಗಗಳಿಗೆ ಆಧುನಿಕವಾಗಿ ವರ್ಣವನ್ನು (ಬಣ್ಣ) ಹಚ್ಚಲಾಗಿದೆ.[೬]

ಸಂಖ್ಯೆ : ೦೪

ಸ್ಮಾರಕದ ಹೆಸರು : ಸೋಮನಾಥ ದೇವಾಲಯ

ಊರು : ಕಾಟಿಗಲ್ಲು

ಸ್ಥಳ : ಊರ ಹೊರಗೆ

ಪಂಥ : ಶೈವ

ಕಾಲ : ಕ್ರಿ ಶ ೧೦-೧೨ನೇ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪೂರ್ವ

ಸ್ಥಿತಿ : ಮಧ್ಯಮ

ಸಂರಕ್ಷಣೆ : -------

ಊರಿನ ಪಶ್ಚಿಮ ದಿಕ್ಕಿಗೆ ೧/೨ ಕಿಲೋಮಿಟರ್ ದೂರದಲ್ಲಿದೆ. ಇದು ಗರ್ಭಗುಡಿ ಮತ್ತು ತೆರದ ನವರಂಗವನ್ನು (ಮುಖಮಂಟಪ) ಹೊಂದಿದೆ. ಗರ್ಭಗೃಹದಲ್ಲಿ ಲಿಂಗವಿದೆ. ಇದರ ಹಿಂದಗಡೆ ಪ್ರಸ್ತುತ ಎರಡು ವೀರಗಲ್ಲುಗಳನ್ನು ಪ್ರತಿಷ್ಠಾಪಿಸಿದ್ದಾರೆ. ಗರ್ಭಗೃಹದ ಮೇಲೆ ಭುವನೇಶ್ವರಿವನ್ನು ಹೊಂದಿದೆ. ಇದರ ಬಾಗಿಲವಾಡದಲ್ಲಿ ಏಕಪಟ್ಟಿಕೆಯನ್ನು ಹೊಂದಿದ್ದು ಅದು ಸರಳವಾಗಿದೆ.

ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಮುಂದಿನ ಭೀತ್ತಿಯಲ್ಲಿ ಗಾರೆಯಿಂದ ಹಂತ ಹಂತವಾಗಿ ನಿರ್ಮಾಣಗೊಂಡಿದೆ. ಮೊದಲನೇ ಹಂತದಲ್ಲಿ ವಿವಿಧ ಉಬ್ಬುಶಿಲ್ಪಗಳಿವೆ. ಎಡಭಾಗದಲ್ಲಿ ಮಿಥುನ ಶಿಲ್ಪಗಳು, ಹಿಂಭಾಗದಲ್ಲಿ ಸಂಗೀತಗಾರರು ಮತ್ತು ಲಿಂಗ ತದನಂತರ ಅದರ ಮುಂದಿನ ಬಲ ಭಾಗದಲ್ಲಿ ಎಂಟು ವಿವಿಧ ದೇವಾನುದೇವತೆಗಳ ಉಬ್ಬುಶಿಲ್ಪಗಳಿವೆ. ಇದರ ಮೇಲ್ಭಾದಲ್ಲಿ ನಾಲ್ಕು ದಿಕ್ಕುಗಳಿಗೂ ಒಂದೊಂದು ಮುಖ ಮಾಡಿದ ಗಾರೆಯ ನಂದಿ ಶಿಲ್ಪಗಳಿವೆ ನಂತರ ಈ ಸ್ಥೂಪಿಯನ್ನು ಮತ್ತು ಕಳಸವನ್ನು ಹೊಂದಿದೆ.

ಈ ದೇವಾಲಯದ ಮುಂಭಾಗದಲ್ಲಿ ಅನೇಕ ಪ್ರಾಚ್ಯವಶೇಷಗಳು ತೃಟಿತವಾಗಿ ಬಿದ್ದಿವೆ. ಅದರಲ್ಲಿ 'ಹಂದಿಬೇಟೆ' ವೀರಗಲ್ಲು ಪ್ರಮುಖವಾಗಿದೆ.[೮] ಪ್ರಾಂಗಣದ ಹೊರಗಡೆ ನಾಲ್ಕು ವೀರಗಲ್ಲುಗಳನ್ನು ಎತ್ತರದ ಕಟ್ಟೆಯ ಮೇಲೆ ಇಡಲಾಗಿದೆ. ಜೊತೆಗೆ ಇಲ್ಲಿ ನಾಗಶಿಲ್ಪಗಳೂ ಸಹ ಕಾಣಬಹುದಾಗಿದೆ.

ಸಂಖ್ಯೆ : ೦೫

ಸ್ಮಾರಕದ ಹೆಸರು : ಮುದಿಮಲ್ಲಯ್ಯ

ಊರು : ಮಸ್ಕಿ

ಸ್ಥಳ : ಮುದಗಲ್ಲ ರಸ್ತೆಯ ಚಿಕ್ಕ ಬೆಟ್ಟದಲ್ಲಿ

ಕಾಲ : ಕ್ರಿ.ಶ. ೧೦ನೇ ಶತಮಾನ

ಅಭಿಮುಖ : ಉತ್ತರ

ಸ್ಥಿತಿ : ಮಧ್ಯಮ

ಸಂರಕ್ಷಣೆ : ---

ಈ ದೇವಾಲಯ ಮಸ್ಕಿಯ ಅತೀ ಪ್ರಾಚೀನ ದೇವಾಲಯಗಳಲ್ಲಿ ಒಂದು. ಇದು ಮುದಗಲ್ಲ ರಸ್ತೆಯ ಚಿಕ್ಕ ಬೆಟ್ಟದಲ್ಲಿ ಇದೆ. ನೈಸರ್ಗಿಕ ಬಂಡೆಗಳ ನಡುವೆ ನಿರ್ಮಾಣಗೊಂಡಿದೆ. ಹೇಳಲು ಇಲ್ಲಿ ಯಾವುದೇ ರೀತಿಯ ಪ್ರಾಚೀನ ಕಟ್ಟಡಗಳಿಲ್ಲ. ಬದಲಿಗೆ ಬಂಡೆಯಲ್ಲಿ ಒಂದು ಉದ್ಭವ ಲಿಂಗವಿದೆ. ಇದು ಸ್ಥಳೀಯರ ಪ್ರಕಾರ ಶ್ರೀ ಶೈಲ ಮಲ್ಲಿಕಾರ್ಜನ ದೇವಾಲಯದ ಪ್ರತಿರೂಪ ಎಂದು ಹೇಳುತ್ತಾರೆ. ಈ ದೇವಾಲಯ ಹತ್ತಲು ಆಧುನಿಕವಾಗಿ (೧೮-೧೯ನೇ ಶತಮಾನ) ಮೆಟ್ಟಿಲುಗಳನ್ನು ಸಣ್ಣಕಲ್ಲು ಬಂಡೆಗಳಿಂದ ನಿರ್ಮಿಸಿದ್ದಾರೆ. ಲಿಂಗಕ್ಕೆ ಎದುರಾಗಿ ನಂದಿಯ ಶಿಲ್ಪವಿದೆ. ದೇವಾಲಯದ ಕೆಳಭಾಗದಲ್ಲಿ ಎಡ ಬಲದಲ್ಲಿ ಸಣ್ಣದಾಗಿ ಹನುಮಂತನ ಗುಡಿಯನ್ನು ಎತ್ತರದ ಜಗತಿಯ ಮೇಲೆ ನಿರ್ಮಿಸಿದ್ದಾರೆ. ಬೆಟ್ಟದ ಮಲ್ಲಕಾರ್ಜುನ ದೇವಾಲಯಕ್ಕಿಂತ ಪ್ರಾಚೀನವಾದ ಮತ್ತು ಮೂಲ ಮಲ್ಲಿಕಾರ್ಜುನ ಎಂದು ಹೆಸರು ಪಡೆದಿದೆ. ಇದಕ್ಕೆ ಸಾಕ್ಷಿಯೆಂಬಂತೆ ಅನೇಕ ಶಾಸನಗಳು ಮಾಹಿತಿ ನೀಡುತ್ತವೆ. ಮುದಿ ವಿಶೇಷಣ ಹಿರಿತನವನ್ನು ಸೂಚಿಸುವುದು ನಿಜ. ಇಂದು ಬಳಕೆಯಲ್ಲಿರುವ 'ಮುದಿ' ಎಂಬ ವಿಶೇಷಣ ಮತ್ತು ಹಳೆಯ ಕಾಲದಲ್ಲಿ ಬಳಕೆಯಲ್ಲಿದ್ದ 'ಮೂಲಸ್ಥಾನ' ಎಂಬ ವಿಶೇಷಣ ಎರಡು ಹಿರಿತನವನ್ನು ಸೂಚಿಸುತ್ತವೆ. ಇದಕ್ಕೆ ಪೂರಕವಾಗಿ ಸ್ಥಳೀಯವಾಗಿ ಒಂದು ಐತಿಹ್ಯ ಪ್ರಚಲಿತದಲ್ಲಿದೆ ಅದನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಐತಿಹ್ಯ :- ಮಸ್ಕಿ ಸೀಮೆಯನ್ನು ಸಮೀಪದ ಬೆಲ್ಲದಮರಡಿ ದೇಸಾಯಿಗಳು ಆಳುತ್ತಿದ್ದರು. (ವಿಜಯನಗರೋತ್ತರ ಕಾಲ ೧೮-೧೯ನೇ ಶತಮಾನ) ಬೇಡ ಜನಾಂಗಕ್ಕೆ ಸೇರಿದ ಇವರು ಶ್ರೀಶೈಲ ಮಲ್ಲಿಕಾರ್ಜುನ ದೇವರ ಪರಮ ಭಕ್ತರಾಗಿದ್ದರು. ಈ ಮನೆತನದ ಒಬ್ಬ ಹೆಣ್ಣು ಮಗಳು ನಿತ್ಯವೂ (ಬಹುಶಃ ವರ್ಷಕ್ಕೊಮ್ಮೆ) ಶ್ರೀ ಶೈಲಕ್ಕೆ ಹೋಗಿ ಬರುತ್ತಿದಳಂತೆ. ಇವಳ ನಿಷ್ಕಲ್ಮಶ ಭಕ್ತಿಗೆ ಮೆಚ್ಚಿದ ಮಲ್ಲಿಕಾರ್ಜುನ ಪ್ರತ್ಯಕ್ಷನಾಗಿ ಭಕ್ತಳಿಗೆ ನಾನು ನೀನಿರುವಲ್ಲಿಗೆ ಬರುತ್ತೇನೆ

ಎಂದು ಹೇಳಿದ. ಇದಕ್ಕಾಗಿ ಒಂದು ಷರತ್ತನ್ನೂ ಸಹ ಹಾಕಿದ. ಅದೇನೆಂದರೆ ನೀನು ಹಿಂದಕ್ಕೆ ತಿರುಗಿ ನೋಡಬೇಡ. ಎಲ್ಲಿ ನೋಡುತ್ತಿಯೋ ಅಲ್ಲಿಯೇ ವಾಸಿಸುವುದಾಗಿ ಹೇಳಿದನು. ನಾನು ನಿನ್ನ ಹಿಂದೆ ಹಿಂದೆ ಬರುವೆ, ನಾ ಬರುವುದನ್ನು ನೀನು ಗೆಜ್ಜೆ ಸಪ್ಪಳದಿ ತಿಳಿಯುತ್ತ, ತಿರುಗಿ ನೋಡದೆ ಸಾಗು ಎಂದು ಹೇಳಿದ. ಮಲ್ಲಿಕಾರ್ಜುನ ಬಾಲ ಶಿವನ ರೂಪದಲ್ಲಿ ಗೆಜ್ಜೆಯ ಸಪ್ಪಳದೊಂದಿಗೆ ಭಕ್ತಳ ಹಿಂದೆ ಹಿಂದೆ ಬರುತ್ತಿರಲೂ ಮಸ್ಕಿಯ ಹಿರೇಹಳ್ಳವು ತುಂಬಿ ಹರಿಯುತ್ತಿರಲೂ ಅದರ ರಭಸಕ್ಕೆ ಶಿವನ ಗೆಜ್ಜೆ ಸಪ್ಪಳ ಕೇಳಿಸದೆ ಒದು ಕ್ಷಣ ವಿಚಲಿತಳಾದಂತಾಗಿ ಶಿವನು ಬರುತ್ತಾನವೋ ಇಲ್ಲವೋ ಎಂದು ಪರಿಕ್ಷಿಸಲು ಹಿಂತಿರುಗಿ ನೋಡುತ್ತಾಳೆ. ಹಾಗ ಶಿವನು ಮೊದಲೇ ಹೇಳಿದ ಹಾಗೆ ತಕ್ಷಣ ಹಳ್ಳದ ಪಕ್ಕದ ಸಣ್ಣ ಗುಡ್ಡದಲ್ಲಿ ನೆಲೆಸುತ್ತಾನೆ. ಅದೇ ಪ್ರಸ್ತುತ ಮುದಿಮಲ್ಲಯ್ಯನ ಗುಡಿಯಾಗಿದೆ. ಶ್ರೀ ಶೈಲ ಮಲ್ಲಿಕಾರ್ಜುನ ಬಾಲ ಶಿವನಾಗಿ ಬಂದು ನೆಲೆಸಿರುವ ಹಿನ್ನೆಲೆಯಲ್ಲಿ ಈ ದೇವಸ್ಥಾನವು ಮುದ್ದು ಮಲ್ಲಯ್ಯ, ಮುದಿ ಮಲ್ಲಯ್ಯ ಎಂದು ಕರೆಸಿಕೊಂಡಿದೆ. ತದನಂತರ ಅಗಸರು ಹಳ್ಳದಲ್ಲಿ ಬಟ್ಟೆಗಳನ್ನು ಸ್ವಚ್ಚಮಾಡುವಾಗ ಉಂಟಾಗುತ್ತಿದ ಶಬ್ಧವು ದೇವರ ಏಕಾಂತಕ್ಕೆ ಭಂಗವಾಗುತ್ತಿತ್ತು. ಇದರಿಂದ ತಪ್ಪಿಸಿಕೊಳ್ಳಲು ಮಲ್ಲಿಕಾರ್ಜುನ ದೇವರು ಆ ಕಡೆಯ ಬೆಟ್ಟಕ್ಕೆ ಹೋದನೆಂದು ಹೇಳುತ್ತಾರೆ. ಇದಕ್ಕೆ ಪೂರಕವಾಗಿ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಕೆಳಭಾಗದಲ್ಲಿ ಪಾದಗಳ ಗುರುತು ಮೂಡಿರುವುದು ಕಾಣುತ್ತೇವೆ.[೧೦]

| | |
|---|---|
| ಸಂಖ್ಯೆ | : ೦೬ |
| ಸ್ಮಾರಕ ಹೆಸರು | : ಬೆಟ್ಟದ ಮಲ್ಲಿಕಾರ್ಜುನ |
| ಊರು | : ಮಸ್ಕಿ |
| ಸ್ಥಳ | : ದುರ್ಗದ ಬೆಟ್ಟ |
| ಕಾಲ | : ವಿಜಯನಗರೋತ್ತರ |
| ಶೈಲಿ | : ಕಲ್ಯಾಣ ಚಾಲುಕ್ಯ |
| ಅಭಿಮುಖ | : ಪೂರ್ವ |
| ಸ್ಥಿತಿ | : ಉತ್ತಮ |
| ಸಂರಕ್ಷಣೆ | : --- |

'ಎರಡನೆಯ ಶ್ರೀಶೈಲ' ಎಂದೇ ಖ್ಯಾತಿ ಹೊಂದಿರುವ ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಐತಿಹಾಸಿಕ ಹಿನ್ನೆಲೆಯಿದೆ. ಇದು ಹೊಯ್ಸಳರ, ಕಲ್ಯಾಣ ಚಾಲುಕ್ಯ, ವಿಜಯನಗರ ಮತ್ತು ಸ್ಥಳೀಯ ನಾಡಗೌಡರ ಕಾಲಾವಧಿಯಲ್ಲಿ ಹಂತ ಹಂತವಾಗಿ ನಿರ್ಮಾಣಗೊಂಡಿರುವುದರ ಜೊತೆಗೆ ಅಭಿವೃದ್ಧಿಪಡಿಸಲಾಗಿದೆ. ದೇವಸ್ಥಾನದ ಹೊರ ಭಾಗದ ಎಡ ಭಾಗದ ಗೋಡೆಯಲ್ಲಿ

ಹೊಯ್ಸಳರ ಲಾಂಛನವಾದ ಸಳನ ಶಿಲ್ಪವಿದೆ. ಇದರಿಂದ ಈ ದೇವಾಲಯ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರಬಹುದಾದ ಸಾಧ್ಯತೆಗಳಿವೆ. ಇದನ್ನು ಕುರಿತು ತೆಲಂಗಾಳದ ಕೊತ್ತಪಲ್ಲಿ (ಕ್ರಿ.ಶ.೧೦೫೨) ಶಾಸನ ಮತ್ತು ಶಿವಪುರ ಶಾಸನ (ಕ್ರಿ.ಶ೧೧೪೯) ಮೋಸಂಗಿಯ ಬ್ರಹ್ಮೇಶ್ವರ ದೇವಾಲಯವನ್ನು ಉಲ್ಲೇಖಿಸುತ್ತವೆ. ಮೂಲತಃ ಬ್ರಹ್ಮೇಶ್ವರವೆನಿಸಿದ ಇದು ಕಾಲದ ಹೊಡೆತಕ್ಕೆ ಸಿಲುಕಿ ನಾಶಗೊಂಡಾಗ ಹೊಯ್ಸಳರ ಅರಸರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿರಬೇಕು ಎಂದು ಅನೇಕ ಸಂಶೋಧಕರು ಅಭಿಪ್ರಾಯಪಡುತ್ತಾರೆ, (ಇದಕ್ಕೆ ಪೂರಕವಾಗಿ ಈ ದೇವಾಲಯದ ಗೋಡೆಯ ಮೇಲೆ ವಿಷ್ಣುವಿನ ಮಲಗಿರುವ ಶಿಲ್ಪ ಇರುವುದು ಕಾಣುತ್ತದೆ.)

ಈ ದೇವಾಲಯವು ಗರ್ಭಗುಡಿ, ನವರಂಗ ಒಳಗೊಂಡಿದೆ. ನವರಂಗದ ಪ್ರವೇಶದ್ವಾರವು ಮೂರು ಕಡೆ (ದಿಕ್ಕು) ನಿರ್ಮಾಣ ಮಾಡಿರುವುದನ್ನು ಕಾಣುತ್ತೇವೆ. (ಪೂರ್ವ, ಉತ್ತರ, ದಕ್ಷಿಣ). ಗರ್ಭಗುಡಿಯಲ್ಲಿ ನೈಸರ್ಗಿಕ ಬಂಡೆಯ ಆಗ್ನೇಯ ತುದಿಯಲ್ಲಿ ಉದ್ಭವಮೂರ್ತಿಯಾದ ಮಲ್ಲಿಕಾರ್ಜುನ ದೇವರಿಗೆ ಉದ್ದವಾದ ಜಡೆಯನ್ನು ಕಂಡರಿಸಲಾಗಿದೆ, ಇದು ಶಾಸನೋಕ್ತ ಏಕಜಡೆ ದೇವಾಲಯವಾಗಿದೆ.[೧೧] ಗರ್ಭಗೃಹದ ಬಾಗಿಲುವಾಡದಲ್ಲಿ ತ್ರಿಶಾಖೆಗಳು ಕೆಳಭಾಗದಲ್ಲಿ ದ್ವಾರಪಾಕರ ಉಬ್ಬು ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವುದು ಗಮರ್ಹ. ದ್ವಾರಬಂಧದಲ್ಲಿ ತ್ರಿಮೂರ್ತಿಗಳ ಚಿತ್ರಣವು ಅಸ್ಪಷ್ಟವಾಗಿದೆ. ಗರ್ಭಗೃಹದ ಮಾಡಿನಲ್ಲಿ ಭುವನೇಶ್ವರಿವನ್ನು ಕಾಣಬಹುದು. ಇದರ ನೆಲ ಭಾಗಕ್ಕೆ ಆಧುನಿಕವಾದ ಗ್ರಾನೈಟ್ ಶಿಲೆಯ ನೆಲಹಾಸನ್ನು ಹಾಕಲಾಗಿದೆ. ಗರ್ಭಗೃಹದ ಉದುಂಬರವು ಪುಷ್ಪಾಲಂಕಾರದಿಂದ ಕೂಡಿದ್ದು ಮಧ್ಯ ಭಾಗದಲ್ಲಿ ಕಮಲದ ಅಲಂಕಾರವಿದೆ. ನವರಂಗದಲ್ಲಿ ನಾಲ್ಕು ಘನಾಕೃತಿಯ ಕಂಬಗಳು ಮತ್ತು ಹನ್ನೆರಡು ಅರೆಗಂಬಗಳು ಕಾಣುತ್ತವೆ. ಇವುಗಳ ತಳಭಾಗವು ೮-೧೬-೮ ಭಾಗಗಳನ್ನು ಹೊಂದಿದೆ. ಇವು ವಿಜಯನಗರ ಕಾಲದ ಕಂಬದ ಕೆಲವು ಲಕ್ಷಣಗಳನ್ನು ಸಹ ಹೊಂದಿವೆ. ನವರಂಗದ ಮಧ್ಯದಲ್ಲಿ ವೇದಿಕೆಯಿದೆ. ಕಂಭದಲ್ಲಿ ಲತಾಸುರುಳಿ ಪ್ರಾಣಿ, ಶಿವಲಿಂಗ, ಭಕ್ತಕುಂಬಾರ, ಹಂಸ ಇತ್ಯಾದಿಗಳ ಉಬ್ಬುಶಿಲ್ಪಗಳಿವೆ. ಬೋದಿಗೆಯು ಸುರುಳಿಯಾಕರದಲ್ಲಿ ಅಲಂಕಾರಗೊಂಡಿದೆ. ಅದೇ ರೀತಿಯಾಗಿ ಸಾಮಾನ್ಯ ಶಿಲೆಯ ತೊಲೆಗಳನ್ನು ಹೊಂದಿದೆ.

ಗರ್ಭಗೃಹ ಮತ್ತು ನವರಂಗದ ಗೋಡೆಗಳಲ್ಲಿ ಆಂಜನೇಯ, ಶೇಷಶಾಯಿ, ವಿಷ್ಣು, ಗಣಪತಿ ಸಂಗೀತಗಾರರು, ವೀರರು, ಹಸು, ಶಿವಲಿಂಗ, ಆನೆ, ನೃತ್ಯಗಾರರು, ಮಿಥುನ ಶಿಲ್ಪಗಳಿವೆ. ನವರಂಗದ ಒಂದನೆಯ ಕಂಭದ ಮೇಲೆ ಹಸುವೊಂದು ಶಿವಲಿಂಗಪಿಕ್ಕೆ

ಹಾಲುಣಿಸುವ ಚಿತ್ರ ಮತ್ತು ಹಂಸಗಳ ಚಿತ್ರಗಳಿವೆ. ಎರಡನೆಯ ಕಂಭದಲ್ಲಿ ಸ್ತ್ರೀಯರು ಅಡ್ಡಪಲಕ್ಕಿಯನ್ನು ಹೊತ್ತಿರುವಂತೆ, ಮತ್ತು ಒಂದೇ ಶಿಲ್ಪದಲ್ಲಿ ಆನೆ ಮತ್ತು ನಂದಿಯ ಶಿಲ್ಪವಿರುವಂತೆ ಕೆತ್ತಲಾಗಿದೆ. ನಂದಿಯ ಭಾಗದಲ್ಲಿ ಬೇಡರ ಕಣ್ಣಪ್ಪನು ಶಿವನಿಗೆ ತನ್ನ ಕಣ್ಣುಗಳನ್ನು ಸಮರ್ಪಿಸುತ್ತಿರುವ ಹಾಗೆ ಕೆತ್ತಲಾಗಿದೆ.

ಮೂರನೆಯ ಕಂಬದಲ್ಲಿ ಶೈವ ಶಿಲ್ಪಗಳು, ಮಹಿಷಮರ್ದಿನಿ ಶಿಲ್ಪ, ಪರಿಹಾರ ದೇವತೆಗಳ ಚಿಕ್ಕ ಶಿಲ್ಪಗಳಿವೆ. ನಾಲ್ಕನೇ ಕಂಬದಲ್ಲಿ ಎಲೆ, ಪದ್ಮದ ಅಲಂಕಾರ, ಹಾಗೂ ನಂದಿ ಮಲಗಿರುವ ಹಾಗೆ ಮತ್ತೊಂದು ಭಾಗದಲ್ಲಿ ಗಂಡಬೇರುಂಢ ಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗೃಹಕ್ಕೆ ಅಭಿಮುಖವಾಗಿ ಎರಡು ದೇವಕೋಷ್ಟಗಳಿವೆ. ಇದರ ಮೇಲ್ಭಾಗದಲ್ಲಿ ಉಬ್ಬುಕೆತ್ತನೆಗಳನ್ನು ಕಾಣುತ್ತೇವೆ. ಇದು ವಿಜಯನಗರೋತ್ತರ ಕಾಲದ ಶೈಲಿಯಾಗಿದೆ.[೧೨] ನವರಂಗಕ್ಕೆ ಮೂರು ಪ್ರವೇಶದ್ವಾರಗಳನ್ನು ಹೊಂದಿದೆ. ಅವುಗಳು ಪೂರ್ವ, ಉತ್ತರ, ದಕ್ಷಿಣಕ್ಕೆ ಮುಖ ಮಾಡಿರುವುದನ್ನು ಕಾಣುತ್ತೇವೆ. ಈ ಮೂರು ದ್ವಾರಗಳಲ್ಲಿ ಪೂರ್ವಕ್ಕೆ ಮುಖ ಮಾಡಿರುವ ದ್ವಾರದಿಂದ ಈ ಆಲಯಕ್ಕೆ ಪ್ರವೇಶ ಮಾಡಲಾಗುತ್ತದೆ. ಇವುಗಳ ಮೇಲೆ ಅಲಂಕಾರವನ್ನು ಬಹಳ ಸುಂದರವಾಗಿ ಕೆತ್ತಲಾಗಿದೆ.

### ಪೂರ್ವಕ್ಕೆ ಮುಖ ಮಾಡಿರುವ ದ್ವಾರ

ಈ ದ್ವಾರದಲ್ಲಿ ಮುಖ್ಯವಾಗಿ ಲಲಾಟದಲ್ಲಿ ಗಜಲಕ್ಷ್ಮಿ ಮತ್ತು ಅದರ ಮೇಲ್ಭಾಗದಲ್ಲಿ ನೃತ್ಯಮಾಡುವಂತ ಸ್ತ್ರೀಯರ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ದ್ವಾರವು ನಾಲ್ಕು ಪಟ್ಟಿಕೆಗಳನ್ನು ಒಳಗೊಂಡಿದೆ. ಅದರಲ್ಲಿ ಸಾಮಾನ್ಯ ಪಟ್ಟಿಕೆ, ಲತಾಸುರುಳಿ, ಪದ್ಮಕಮಲ ಕೆತ್ತನೆಗಳಿವೆ. ಪೇದ್ಯ ಭಾಗದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ಉದುಂಬರವು ಸಾಮಾನ್ಯ ಪಟ್ಟಿಕೆಯಲ್ಲಿದೆ.

### ಉತ್ತರ ಮತ್ತು ದಕ್ಷಿಣ ದ್ವಾರಗಳು

ಎರಡು ದ್ವಾರಗಳ ಅಲಂಕಾರವು ಒಂದೇ ರೀತಿಯಲ್ಲಿ ಕೆತ್ತನೆ ಮಾಡಲಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದ್ವಾರದಲ್ಲಿ ಮೂರು ಪಟ್ಟಿಕೆಗಳಿವೆ. ಅವು ಸಾಮಾನ್ಯ ಅಲಂಕಾರವನ್ನು ಹೊಂದಿವೆ. ಪೇದ್ಯ ಭಾಗದಲ್ಲಿ ಪೂರ್ಣಕುಂಭಗಳಿವೆ ಮತ್ತು ಉದುಂಬರವನ್ನು ಸಾಮಾನ್ಯವಾಗಿ ಕೆತ್ತಲಾಗಿದೆ.

## ಹೊರಭಾಗದ ಭಿತ್ತಿಯಲ್ಲಿನ ಶಿಲ್ಪಗಳು

ದೇವಾಲಯದ ಹೊರ ಭಾಗದ ಭಿತ್ತಿಯಲ್ಲಿ ಅನೇಕ ಸುಂದರವಾದ ದೇವಶಿಲ್ಪಗಳು ಹಾಗೂ ಲೌಖಿಕ ಜೀವನಕ್ಕೆ ಸಂಬಂಧಿಸಿದ ರತಿ ಮನ್ಮಥರ ಶಿಲ್ಪಗಳನ್ನು ಅತ್ಯಂತ ಹಾವಭಾವದಿಂದ ಕೆತ್ತಲಾಗಿದೆ. ಗರ್ಭಗುಡಿಯ ಬಲ ಭಾಗದ ಭಿತ್ತಿಯಲ್ಲಿ ಯುದ್ಧದ ಸನ್ನಿವೇಶಗಳನ್ನು ಶಿಲ್ಪಗಳ ಮೂಲಕ ತೋರಿಸಲಾಗಿದೆ. ನಂದಿಯ ಮೇಲಿನ ಭಾಗದಲ್ಲಿ ತಾಯಿ ಮಗುವಿನ ಶಿಲ್ಪವಿದೆ. ಆ ಮಗು ತಾಯಿಯನ್ನು ಅವಿತುಕೊಂಡು ಕುಳಿತಿರುವಹಾಗೆ, ಸೇವಕನು ನಂದಿಯನ್ನ ಮುಂದೆ ಎಳೆದು ಹಿಡಿದಿರುವ ಹಾಗೆ ಇದರ ಹಿಂದೆ ಸೇವಕರು ಕೊಡೆ ಹಿಡಿದಿರುವ ಹಾಗೆ ಕೆತ್ತಲಾಗಿದೆ. ಇದರ ಮೇಲ್ಗಡೆ ನಂದಿ, ನಂದಿಯ ಮೇಲೆ ವರಾಹದ ಶಿಲ್ಪಗಳಿವೆ. ಮಿಥುನ ಶಿಲ್ಪಗಳು, ಸಂಗೀತವಾದಕರು, ನೃತ್ಯಗಾರನ್ನೂ ಸಹ ಕೆತ್ತಲಾಗಿದೆ. ಈ ಶಿಲ್ಪಗಳ ಕೆಳಭಾಗದಲ್ಲಿ ಆಂಜನೇಯ, ಗಂಡಬೇರುಂಢ ಚಿತ್ರವಿದೆ. ಇದನ್ನು *(NCERT)* ದೆಹಲಿಯ ರಾಷ್ಟ್ರೀಯ ಶಿಕ್ಷಣ ಹಾಗೂ ಸಂಶೋಧನ ಹಾಗೂ ತರಬೇತಿ ಸಂಸ್ಥೆ ತಮ್ಮ ಲಾಂಛನವಾಗಿ ಅಳವಡಿಸಿಕೊಂಡಿವೆ.

ಈ ಲಾಂಛನದ ಬಲ ಭಾಗದಲ್ಲಿ ಹಸುವೊಂದು ಲಿಂಗಕ್ಕೆ ಹಾಲುಣಿಸುತ್ತಿರುವ ಹಾಗೆ, ಅದರ ಕರು ಅದಕ್ಕೆ ಅಭಿಮುಖವಾಗಿ ನಿಂತಿರುವಾಗೆ ಕೆತ್ತಲಾಗಿದೆ. ಗರ್ಭಗುಡಿಯ ಹಿಂಭಾಗದಲ್ಲಿ ವೀಣೆ ನುಡಿಸುತ್ತಿರುವ ಶಿಲ್ಪ ಮತ್ತು ಒಂದೇ ಶಿಲ್ಪದಲ್ಲಿ ನಂದಿ ಮತ್ತು ಆನೆಯನ್ನ ಸೇರಿಸಿ ಕೆತ್ತಲಾಗಿದೆ. ಇವೆರಡರ ನಡುವೆ ಕುಂಭಪಂಜರ, ಲಿಂಗ, ನಂದಿ ಶಿಲ್ಪಗಳು. ಈ ಶಿಲ್ಪಗಳ ಮೇಲ್ಭಾಗದಲ್ಲಿ ಮಿಥುನ ಶಿಲ್ಪಗಳು, ಆನೆಯ ಶಿಲ್ಪಗಳನ್ನು ಕಾಣುತ್ತೇವೆ. ಇನ್ನೂ ಎಡಭಾಗದ ಭಿತ್ತಿಯಲ್ಲಿ ಬಹಳ ಮುಖ್ಯವಾಗಿ ಹೊಟ್ಟೆಗಣಪನ ಶಿಲ್ಪ ಮತ್ತು ಗಣೇಶನ ವಾಹನವಾದ ಇಲಿಯನ್ನು ಸಹ ಹೊಂದಿದೆ. ದೇವಕೋಷ್ಠದಲ್ಲಿ ವೀರಭದ್ರನ ಶಿಲ್ಪವಿದೆ ಈ ಶಿಲ್ಪವು ಸ್ಥಾನಿಕ ಭಂಗಿಯಲ್ಲಿದೆ. ಎಡಗೈಯಲ್ಲಿ ಖಡ್ಗ ಬಲಗೈಯಲ್ಲಿ ಧನಸ್ಸು, ಹಿಂದಿನ ಎರಡು ಕೈಗಳಲ್ಲಿ ಸಣ್ಣ ಆಯುಧಗಳಿವೆ. ಇದರ ಪಕ್ಕದಲ್ಲಿ ಇವನ ವಾಹನವಿದೆ. ಕೆಳಭಾಗದಲ್ಲಿ ನಾಗರಹಾವಿನ ಶಿಲ್ಪವಿದೆ. ವಿಶೇಷವಾಗಿ ಇಲ್ಲಿ ಇನ್ನೊಂದು ಶಿಲ್ಪ ಗಮನಿಸಬಹುದಾಗಿದೆ. ವಿಷ್ಣು ಸರ್ಪದ ಮೇಲೆ ಮಲಗಿರುವಂತೆ ಮತ್ತು ಹೊಕ್ಕಳಬಳ್ಳಿಯಿಂದ ಹೊರಬಂದ ಲಕ್ಷ್ಮಿಯಉಬ್ಬು ಶಿಲ್ಪವನ್ನು ಕಾಣುತ್ತೇವೆ. ಇದನ್ನು ಅನೇಕ ಸಂಶೋಧಕರು ಈ ದೇವಾಲಯ ಬ್ರಹ್ಮೇಶ್ವರ ದೇವಾಲಯ ಎಂದು ಹೇಳಲು ಆಧಾರವಾಗಿ ಬಳಸಿಕೊಂಡಿದ್ದಾರೆ. ಇದರೊಂದಿಗೆ ಮಹಾನಂದಿ, ಶಿವಲಿಂಗ, ಆಂಜನೇಯ, ಆನೆ, ಜಿಂಕೆಗಳು ಮತ್ತು ತಪಸ್ವಿ ಮುನಿಯ ಶಿಲ್ಪಗಳನ್ನು ಕಾಣತ್ತೇವೆ. ನವರಂಗದ ಭಾಗ ಭಿತ್ತಿಯು ಅನೇಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ಮಲ್ಲಿಕಾರ್ಜುನ ಗುಡಿ ಈಗ ಕಾಣುವಷ್ಟು ಚಿಕ್ಕದಾಗಿ ಇರಲಿಲ್ಲ. ಅದಕ್ಕೆ ಇನ್ನೊಂದು ತುಸು ವಿಶಲವಾದ ಮುಖ ಮಂಟಪವಿದ್ದಿರಬೇಕು. ಅಲ್ಲಿ ದೊರೆಯುವ ಅನೇಕ ಅವಶೇಷಗಳು ಇದನ್ನು ಸಮರ್ಥಿಸುತ್ತವೆ. ಈ ದೇವಾಲಯವನ್ನು ಹತ್ತಲು ೩೦೦ ರಿಂದ ೩೫೦ ಮೆಟ್ಟಿಲುಗಳಿದ್ದು ಅವುಗಳು ೧೮-೧೯ನೆಯ ಶತಮಾನದಲ್ಲಿ ನಿರ್ಮಿತಗೊಂಡಿರಬಹುದಾಗಿವೆ. ಈ ಮೆಟ್ಟಿಲುಗಳ ನಡುವಿನ ಒಂದರಲ್ಲಿ ಒಂದು ಸಾಲಿನ ಶಾಸನವಿದೆ. ಪ್ರಸ್ತುತ ಗೋಡೆಗೆ ಭಕ್ತರು ಬಣ್ಣವನ್ನು ಹಚ್ಚಿ ಶಿಲ್ಪಕಲೆಯ ಮೂಲರೂಪವನ್ನು ಹಾಳು ಮಾಡಿದ್ದಾರೆ. ಇಲ್ಲಿ ಶ್ರಾವಣ ಮಾಸದ ಕೊನೆಯ ವಾರ ಜಾತ್ರೆ ನಡೆಯುತ್ತದೆ. ವೃದ್ಧರಿಗೆ ಮತ್ತು ಮಕ್ಕಳಿಗೆ ಅನುಕೂಲವಾಗಲೆಂದು ಪ್ರಸ್ತುತ ಶಾಸಕರ ಅನುದಾನದಲ್ಲಿ ಈ ಬೆಟ್ಟದ ಹಿಂಬದಿಯಲ್ಲಿ ಕಾಂಕ್ರಿಟ್ ರಸ್ತೆಯನ್ನು ನಿರ್ಮಿಸಿದ್ದಾರೆ. ಈ ದೇವಾಲಯದ ಕಾಲವನ್ನು ಸಿ.ಎಸ್ ವಾಸುದೇವನ್‌ರವರು ತಮ್ಮ ಕೃತಿಯಾದ 'ಕರ್ನಾಟಕ ದೇವಾಲಯ ಕೋಶ, ರಾಯಚೂರು ಜಿಲ್ಲೆ' ಇದರಲ್ಲಿ ೧೯ನೇ ಶತಮಾನವೆಂದು ತಿಳಿಸಿದ್ದಾರೆ.

ಆದರೆ ಮಸ್ಕಿಯ ಕ್ರಿ.ಶ ೧೦೩೨ ಶಾಸನ ಮತ್ತು ಕ್ರಿ.ಶ ೧೦೫೭ರ ಶಾಸನಗಳು ಏಕಜಡೆ ದೇವಾಲಯವನ್ನು ಉಲೇಖಿಸುವುದರಿಂದ ಇದರ ಕಾಲಮಾನ ಸುಮಾರ ೧೧-೧೨ನೇ ಶತಮಾನವಿರಬಹುದು ಎಂದು ಈ ಅಧ್ಯಯನದ ಮೂಲಕ ತರ್ಕಿಸಲಾಗಿದೆ.

| | |
|---|---|
| ಸಂಖ್ಯೆ | : ೦೭ |
| ಸ್ಮಾರಕ ಹೆಸರು | : ಬೋರಮ್ಮ ಗುಡಿ (ಬ್ರಹ್ಮೇಶ್ವರ ದೇವಾಲಯ) |
| ಊರು | : ಮಸ್ಕಿ |
| ಸ್ಥಳ | : ಬೆಟ್ಟದ ಮಲ್ಲಿಕಾರ್ಜುನ ದೇವಾಲಯ ಹಿಂಭಾಗದಲ್ಲಿ |
| ಕಾಲ | : ಕ್ರಿ.ಶ.೧೨ನೆಯ ಶತಮಾನ |
| ಶೈಲಿ | : ಕಲ್ಯಾಣ ಚಾಲುಕ್ಯ |
| ಅಭಿಮುಖ | : ಪೂರ್ವ |
| ಸ್ಥಿತಿ | : ಮಧ್ಯಮ |
| ಸಂರಕ್ಷಣೆ | : --- |

ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಹಿಂಭಾಗದಲ್ಲಿ ಬೋರಮ್ಮ ಹೆಸರಿನ ಚಿಕ್ಕ ಗುಡಿ ಇದೆ. ಅದರ ಅಧಿಷ್ಠಾನ ಭಾಗವು ಕಲ್ಯಾಣ ಚಾಲುಕ್ಯರ ದೇವಾಲಯದ ಲಕ್ಷಣಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಸಪ್ತಮಾತೃಕೆಯ ಶಿಲ್ಪಗಳಿವೆ. ಇವುಗಳ ಪಕ್ಕದಲ್ಲಿ ಭಗ್ನವಾದ ನಂದಿ ಶಿಲ್ಪವಿದೆ. ಬಹುಶಃ ಇವೆಲ್ಲವು ಈ ದೇವಾಲಯದ ಭಾಗವಾಗಿರಬೇಕು. ಇಲ್ಲಿಯ

ಬೋರಮ್ಮ ಹೆಸರಿನ ನಿಜರೂಪ ಬ್ರಹ್ಮೇಶ್ವರವಾಗಿರಬೇಕು. ಅಂದರೆ ಇದು ಬ್ರಹ್ಮೇಶ್ವರ>ಬ್ರಮೇಶ>ಬೊಮ್ಮ>ಬೋರಮ್ಮ ಎಂದು ಬದಲಾಗಿರಬಹುದು.[೧೩] ಬ್ರಮ್ಮಯ್ಯ ಹೆಸರಿನ ವ್ಯಕ್ತಿ ಇದನ್ನು ನಿರ್ಮಿಸಿರಬೇಕು. ಈ ಬ್ರಹ್ಮಯ್ಯ ಯಾರು? ಎಂದು ತಿಳಿಯದು. ಈ ದೇವಾಲಯದ ಮುಂದಿರುವ ಮಲ್ಲಿಕಾರ್ಜುನ ದೇವಾಲಯದ ಮುಖಮಂಟಪದ ಹಾಳು ಬಿದ್ದ ಕಂಭದಲ್ಲಿ (ಗುಂಡ) ಬ್ರಹ್ಮಯ್ಯಗಳ ಶಿಲ್ಪಗಳಿವೆ. ಒಂದು ಕಂಬದ ಕೆಳಗಿನ ಪಟ್ಟಿಯಲ್ಲಿ ಗುಂಡಯ್ಯ ಮತ್ತು ಬ್ರಹ್ಮಯ್ಯರು ಶೂಲದ ಎಡ-ಬಲದಲ್ಲಿ ಕುಳಿತ್ತಿದ್ದಾರೆ. ಮೇಲಿನ ಭಾಗದಲ್ಲಿ ಇಬ್ಬರು ಕೈಲಾಸದಲ್ಲಿ ಶಿವನೊಂದಿಗೆ ಇರುವಂತೆ ಕೆತ್ತಲಾಗಿದೆ. ಮತ್ತೊಂದು ಕಂಬದ ಕೆಳಭಾಗದಲ್ಲಿ ಗುಂಡಬ್ರಹ್ಮಯ್ಯನು ಎಡಗೈಯಲ್ಲಿ ಶಿವಲಿಂಗವನ್ನು, ಬಲಗೈಯಲ್ಲಿ ರುದ್ರಾಕ್ಷಿಯನ್ನು ಹಿಡಿದು ಕುಳಿತ ಶಿಲ್ಪವಿದೆ. ಇದಲ್ಲದೆ ಹೊಯ್ಸಳ ಲಾಂಛನ ಇರುವ ಶಿಲ್ಪವು ಸಹ ಇಲ್ಲಿದೆ. ಇದರಿಂದ ದೇವಾಯದ ಈ ಭಾಗವನ್ನು ಹೊಯ್ಸಳರು ತಮ್ಮ ವಿಜಯದ ಸಂದರ್ಭದಲ್ಲಿ ಜಿರ್ಣೋದ್ಧಾರಗೊಳಿಸಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಆದಿಷ್ಠಾನ ಭಾಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಕೆತ್ತನೆಗಳನ್ನು ಕಾಣುತ್ತೇವೆ.

ಈ ದೇವಾಲಯದ ಗರ್ಭಗುಡಿಯ ದ್ವಾರಪಟ್ಟಿಕೆ ಸಾಮಾನ್ಯವಾಗಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಪೇದ್ಯಭಾಗದಲ್ಲಿ ಶೈವ ದ್ವಾರ ಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ಈ ದೇವಾಲಯಕ್ಕೂ ಸಹ ಆಧುನಿಕವಾಗಿ ಬಣ್ಣ ಬಳಿದಿದ್ದಾರೆ. ಇದಕ್ಕೆ ಹೊಂದಿಕೊಂಡು ಮಠವಿದೆ (ಕಂಚಿನಮಠ). ಇದು ಆ ಕಾಲದ ವಿದ್ಯಾ ಕೇಂದ್ರವಾಗಿರಬೇಕು. ಈ ದೇವಸ್ಥಾನವನ್ನು ಶಿವಪುರದ ೧೦೭೯ರ ಶಾಸನ ಉಲ್ಲೇಖಿಸುತ್ತದೆ.[೧೪]

ಈ ದೇವಾಲಯವನ್ನು ಕುರಿತು ವಿದ್ವಾಂಸರಾದ ಚನ್ನಬಸವ ಹಿರೇಮಠರು ಈ ರೀತಿಯಾಗಿ ತಿಳಿಸಿದ್ದಾರೆ. ಆಂಧ್ರಪ್ರದೇಶದ ಕೊತ್ತಪಲ್ಲಿ (ಕ್ರಿ.ಶ. ೧೦೨೭) ಮತ್ತು ಶಿವಪುರ (ಕ್ರಿ.ಶ. ೧೦೭೯) ಶಾಸನಗಳು ಆಧಾರದ ಮೇಲೆ ಸುರೇಶ್ವರ ಪಂಡಿತರ ಗುರುಗಳಾದ ಗಂಗರಾಸಿ ಭಟ್ಟರನ್ನು ಮೊಸಂಗಿಯ ಬ್ರಹ್ಮೇಶ್ವರ ದೇವಾಲಯದ ಸ್ಥಾಪನಾಚಾರ್ಯರೆಂದು ಹೇಳಿವೆ. ಇಲ್ಲಿಯ ಮೊಸಂಗಿಯು ಇಂದಿನ ರಾಯಚೂರು ಜಿಲ್ಲೆಯ ಮಸ್ಕಿಯಾಗಿದೆ. ಕಳೇಶ್ವರ ಪಂಡಿತನು ಶಿವಲಿಂಗಬ್ರತಿಯ ಅಗ್ರ ಶಿಷ್ಯನಾಗಿರುವುದರಿಂದ ಆ ಕಾಲಕ್ಕೆ ಇವರು ಕಿಟ್ಟಗಾವೆಗೆ ಬಂದು ನಿಂತಿರಬೇಕು. ಅಲ್ಲಿಂದ ಈ ಶಾಖೆಯವರು ಕೊತ್ತಪಲ್ಲಿ, ಶಿವಪುರ, ಮೊಸಂಗಿ, ಕೆಂಬಾವಿ ಮೊದಲಾದ ಸ್ಥಳಗಳಿಗೆ ಹೋಗಿರಬೇಕು. ಈ ಹೆಸರಿನ ದೇವಾಲಯವನ್ನು ಜೈನ ಮತ್ತು ಶೈವ ಎರಡರಲ್ಲೂ ಕಾಣುತ್ತೇವೆ. ಬೊಮ್ಮ ಹೆಸರಿನ ವ್ಯಕ್ತಿ ಕಟ್ಟಿಸಿದ್ದರಿಂದ ಬ್ರಹ್ಮೇಶ್ವರ ಅಷ್ಟೆ ಎಂದಿದ್ದಾರೆ.[೧೫]

ಮಸ್ಕಿಯಲ್ಲಿ ಇಂದು ಬ್ರಹ್ಮೇಶ್ವರ ಹೆಸರಿನ ದೇವಾಲಯ ಕಾಣಸಿಗುವುದಿಲ್ಲ. ಕಾರಣಾಂತರಗಳಿಂದ ಅದು ನಾಶವಾಗಿರಬೇಕು. ಇಲ್ಲಿಯ ಬೆಟ್ಟದ ಮೇಲಿರುವ ದೇವಾಲಯದ ಹೊರಗೋಡೆಯ ಮೇಲೆ ಬ್ರಹ್ಮೇಶ್ವರನನ್ನು ನೆನಪಿಸುವ ಶಿಲ್ಪವಿದೆ. ಆದರೆ ಪ್ರಸ್ತುತ ಕೈಗೊಂಡ ಅಧ್ಯಯನದ ಸಮಯದಲ್ಲಿ ಈಗ ಇರುವಂತಹ ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ ಬಿದ್ದಿರುವ ಅವಶೇಷಗಳು 'ಬ್ರಹ್ಮೇಶ್ವರ ದೇವಾಲಯದ' ಅವಶೇಷಗಳಾಗಿರಬಹುದು ಎಂದು ತರ್ಕಿಸಿದ್ದೇನೆ. ವಿಜಯನಗರ ಅಥವಾ ಮುಂದಿನ ಕಾಲದಲ್ಲಿ ಈ ದೇವಸ್ಥಾನ ತನ್ನ ಮಹತ್ವವನ್ನು ಕಳೆದುಕೊಂಡಿರಬೇಕು. ಇದೇ ವೇಳೆಗೆ ಬೆಲ್ಲದಮರಡಿ ದೇಸಾಯಿಗಳು ೧೯ ಮತ್ತು ೧೯ನೆಯ ಶತಮಾನದಲ್ಲಿ ನಿಜಾಮರ ಅಧೀನರಾಗಿ ಆಳತೊಡಗಿದ್ದರು. ಇವರು ಶ್ರೀಶೈಲ ಮಲ್ಲಿಕಾರ್ಜುನನ ಪರಮ ಭಕ್ತರಾಗಿದ್ದರು. ಇವರ ಕಾಲದಲ್ಲಿ ಬೆಟ್ಟದ ಮೇಲೆ ಹಾಳು ಬಿದ್ದ ದೇವಾಲಯಗಳೂ ಜೀರ್ಣೋದ್ಧಾರಗೊಂಡವು. ಇಂತಹ ಸಂದರ್ಭದಲ್ಲಿ ಇದನ್ನು ಭ್ರಮರಾಂಭ ದೇವರೆಂದು ಕರೆದಿರಬೇಕು. ಆಳರಸರ ಬಗ್ಗೆ ಭಯ, ಭಕ್ತಿ ಇಟ್ಟುಕೊಂಡಿದ್ದ ಜನರು ಅದನ್ನು ಒಪ್ಪಿಕೊಂಡಿರಬೇಕು. ಒಟ್ಟಿನಲ್ಲಿ ಕ್ರಿ.ಶ. ೧೦೫೭ರಲ್ಲಿ ಬ್ರಹ್ಮೇಶ್ವರ ದೇವಾಲಯ ಅಸ್ತಿತ್ವದಲ್ಲಿ ಇದ್ದಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಹಾಳು ಬಿದ್ದ ಚಿಕ್ಕ ಗುಡಿಯು ಬೊರಮ್ಮಳೆಂದು (ಭ್ರಮರಾಂಭ) ಎಂದು ಕರೆಯಲ್ಪಟ್ಟಿರಬಹುದಾಗಿದೆ.

ಸಂಖ್ಯೆ : ೦೮

ಸ್ಮಾರಕ ಹೆಸರು : ಬಸವೇಶ್ವರ

ಊರು : ಮಸ್ಕಿ

ಸ್ಥಳ : ಮೇನ್ ಬಜಾರು (ರಥ ಬೀದಿ)

ಕಾಲ : ಕ್ರಿಶ ೧೧-೧೨ನೆಯ ಶತಮಾನ

ಶೈಲಿ : ಕಲ್ಯಾಣ ಚಾಲುಕ್ಯ

ಅಭಿಮುಖ : ಪಶ್ಚಿಮ

ಸ್ಥಿತಿ : ಮಧ್ಯಮ

ಸಂರಕ್ಷಣೆ : ---

ಈ ದೇವಾಲಯವು ಗರ್ಭಗುಡಿ ಮತ್ತು ನವರಂಗವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಆಧುನಿಕ ಗ್ರಾನೈಟ್ ಶಿಲೆಯನ್ನು ಬಳಸಿ ನಿರ್ಮಿಸಿದ ಸುಮಾರು ಎರಡು ಎತ್ತರದ ಜಗತಿ (ಕಟ್ಟೆ) ಮೇಲೆ ಆಧುನಿಕವಾಗಿ ತಯಾರಿಸಿದಂತಹ ಕಪ್ಪು ಗ್ರಾನೈಟ್ ಶಿಲೆಯ ಬಸವ(ನಂದಿ) ಶಿಲ್ಪವನ್ನು ಇಡಲಾಗಿದೆ. ಮೇಲ್ಭಾಗದಲ್ಲಿ ಸರಳ ಭುವನೇಶ್ವರಿಯನ್ನು ಹೊಂದಿದೆ. ಗರ್ಭಗೃಹದ

ಬಾಗಿಲುವಾಡವು ಐದು ಪಟ್ಟಿಕೆಗಳನ್ನು ಒಳಗೊಂಡಿದೆ. ಪೇದ್ಯ ಭಾಗದಲ್ಲಿ ಪೂರ್ಣ ಕುಂಭಪಂಜರವನ್ನು ಕಾಣುತ್ತೇವೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪ, ಉದುಂಬರ ಭಾಗದಲ್ಲಿ ಹರಳಿದ ಕಮಲದ ಹೂವಿನ ಅಲಂಕಾರವು ಕಂಡುಬರುತ್ತದೆ. ನವರಂಗ ಭಾಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ನಾಲ್ಕು ಕಂಭಗಳಿವೆ. ಛಾವಣಿ ಭಾಗದ ಕುಸಿತವನ್ನು ತಪ್ಪಿಸಲು ಆಧುನಿಕವಾಗಿ ಕಟ್ಟಿಗೆಗಳಿಂದ ತಡೆಹಿಡಿಯಲಾಗಿದೆ. ನವರಂಗ ಭಾಗದಲ್ಲಿ ಒಟ್ಟು ಎಂಟು ದೇವಕೊಷ್ಠಗಳಿವೆ. ಗರ್ಭಗೃಹದಲ್ಲಿ ಮೇಲ್ಭಾಗದಲ್ಲಿ ಗಾರೆಯಿಂದ ನಿರ್ಮಾಣಗೊಂಡ ಶಿಖರವಿದ್ದು ನಂದಿಯ ಉಬ್ಬುಶಿಲ್ಪಗಳಿವೆ. ಇದರ ಮೇಲೆ ಕಳಸವನಿಟ್ಟಿದ್ದಾರೆ.





| | |
|---|---|
| ಸಂಖ್ಯೆ | : ೦೯ |
| ಸ್ಮಾರಕದ ಹೆಸರು | : ಬೆಟ್ಟದ ಚೌಡೇಶ್ವರಿ |
| ಊರು | : ಮಸ್ಕಿ |
| ಸ್ಥಳ | : ಊರ ಒಳಗಿನ (ಪುರಸಭೆಯ) ಎಡಭಾಗದ ಬೆಟ್ಟದ ಮೇಲೆ |
| ಕಾಲ | : ಕ್ರಿ.ಶ. ೧೧-೧೨ನೆಯ ಶತಮಾನ |
| ಶೈಲಿ | : ಕಲ್ಯಾಣ ಚಾಲುಕ್ಯ |
| ಅಭಿಮುಖ | : ಉತ್ತರ |
| ಸ್ಥಿತಿ | : ಮಧ್ಯಮ |

ಈ ದೇವಾಲಯದ ಹೆಸರು ಬೇರೆಯಾಗಿರಬೇಕು. ಕಾಲಾಂತರದಲ್ಲಿ ಬದಲಾಗಿ ಇಂದು ಚೌಡೇಶ್ವರಿ ಎಂದು ಕರೆಸಿಕೊಂಡಿದೆ. ಈ ಗುಡಿಯ ಗರ್ಭಗೃಹ ಮತ್ತು ತೆರೆದ ನವರಂಗವನ್ನು ಹೊಂದಿದೆ. ಗರ್ಭಗುಡಿಯಲ್ಲಿ ಲಿಂಗವಿದೆ. ಅದರ ಹಿಂದಗಡೆ ಆಧಿನಿಕವಾಗಿ ನಿರ್ಮಾಣಗೊಂಡ ಸಿಂಹಾಸನರೂಢ ಚೌಡೇಶ್ವರಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಗರ್ಭಗೃಹದ ಮೇಲ್ಭಾಗದಲ್ಲಿ ಭುವನೇಶ್ವರಿಯವನ್ನು ಹೊಂದಿದೆ. ಬಾಗಿಲವಾಡ ಏಕಪಟ್ಟಿಕೆಯನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ನವರಂಗದ ಒಳಭಾಗವನ್ನು ಆಧುನಿಕವಾಗಿ ನಿರ್ಮಿಸಲಾಗಿದೆ. ಹೊರಭಾಗವು ಪ್ರಾಚೀನವಾಗಿದೆ. ಮುಖ್ಯವಾಗಿ ಬಲಭಾಗದ ಗೋಡೆಯಲ್ಲಿ (ಭಿತ್ತಿ) ಒಂದು ಅಪ್ರಕಟಿತ ಶಾಸನವಿದೆ. ಅದು ಅಸ್ಪಷ್ಟವಾಗಿದೆ.

ಗರ್ಭಗೃಹದ ಮೇಲ್ಭಾಗದಲ್ಲಿ ಶಿಖರವಿದ್ದು ಗಾರೆಯಿಂದ ನಿರ್ಮಾಣಗೊಂಡಿದೆ. ಮುಸ್ಲಿಂ ಶೈಲಿಯ ನಾಲ್ಕು ಮಿನಾರಗಳನ್ನು ಹೊಂದಿದೆ. ಇದರ ಎರಡನೇ ಹಂತದಲ್ಲಿ ನಾಲ್ಕು ದಿಕ್ಕುಗಳಿಗೂ ವೃತ್ತಾಕಾರದ ಗುಮ್ಮಟವಿದ್ದು ಅದರ ಮೇಲ್ಭಾಗದಲ್ಲಿ ಕಳಸವಿದೆ. ದೇವಾಲಯದ ಹೊರ ಭಾಗದಲ್ಲಿ ಪ್ರಾಚೀನ ದೇವಾಲಯಯಕ್ಕೆ ಸಂಬಂಧಿಸಿದ ತ್ರುಟಿತವಾದ ಭಾಗಗಳಿವೆ. ಮೂಲ ನಂದಿ ವಿಗ್ರಹ ಪ್ರಸ್ತುತ ಆರಂಭದ ಮೆಟ್ಟಲುಗಳನ್ನು ಹತ್ತುವ ಸ್ಥಳದಲ್ಲಿ ಇಟ್ಟಿರುವುದನ್ನು ಕಾಣತ್ತೇವೆ.

| | |
|---|---|
| ಸಂಖ್ಯೆ | : ೧೦ |
| ಸ್ಮಾರಕದ ಹೆಸರು | : ಕಲ್ಗುಡಿ ಚೌಡೇಶ್ವರಿ |
| ಊರು | : ಮಸ್ಕಿ |
| ಸ್ಥಳ | : ದೈವದ ಕಟ್ಟೆಯ ಮುಂದೆ |
| ಕಾಲ | : ಕ್ರಿ.ಶ. ೧೦-೧೨ನೇ ಶತಮಾನ |
| ಶೈಲಿ | : ಕಲ್ಯಾಣ ಚಾಲುಕ್ಯ |
| ಅಭಿಮುಖ | : ಉತ್ತರ |
| ಸ್ಥಿತಿ | : ಮಧ್ಯಮ |

ಮಸ್ಕಿಯಲ್ಲಿ ದೈವದ ಕಟ್ಟೆಯಿಂದ ಸಲ್ಪ ದೂರ ಹೋದರೆ ಕಲ್ಲಿನಿಂದ ನಿರ್ಮಾಣವಾದ ಈ ದೇವಾಲಯವನ್ನು ಕಾಣುತ್ತೇವೆ. ಸ್ಥಳೀಯರು ಕಲ್ಗುಡಿ ಚೌಡೇಶ್ವರಿ ಎಂದು ಕರೆಯುತ್ತಾರೆ. ಪ್ರಾಚೀನವಾಗಿ ಬಸವಣ್ಣಗುಡಿ, ನಂತರ ಕಾಳಮ್ಮನ ಗುಡಿಯೆಂದು ಪ್ರಸ್ತುತ ಕಲ್ಗುಡಿ ಚೌಡೇಶ್ವರಿಯೆಂದು ಕರೆಯಲಾಗುತ್ತಿದೆ. ಇದು ತ್ರಿಕೂಟ ದೇವಾಲಯವಾಗಿದೆ. ಎಡಭಾಗದಲ್ಲಿ ಚೌಡೇಶ್ವರಿ, ಬಲಭಾಗದಲ್ಲಿ ಈಶ್ವರ ಲಿಂಗ, ಮತ್ತು ಗಣೇಶನ ವಿಗ್ರಹವಿಗಳಿವೆ. ಮಧ್ಯ ಭಾಗದಲ್ಲಿ ಗರ್ಭಗುಡಿಯಲ್ಲಿ ನಂದಿ ವಿಗ್ರಹ, ಈಶ್ವರಲಿಂಗ, ದುರ್ಗಾದೇವಿ ವಿಗ್ರಹಗಳನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಗರ್ಭಗುಡಿಯ ಮಧ್ಯ ದ್ವಾರದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪ, ಕೆಳ ಭಾಗದಲ್ಲಿ ಪೂರ್ಣಕಂಭಗಳು, ಬಲಗಡೆ ಇರುವ ಗರ್ಭಗೃಹದ ದ್ವಾರದ ಲಲಾಟಬಿಂಬದಲ್ಲಿ ಶಕ್ತಿಶಿಲ್ಪ, ಕೆಳ ಭಾಗದಲ್ಲಿ ಕುಂಭ ಮತ್ತು ಎಡಭಾಗದ ದ್ವಾರದಲ್ಲಿ ಅಂಜನಿ ಹಸ್ತವಾಗಿ ಕುಳಿತಿರುವ ಭಕ್ತ (ಬಹುಶಃ ಜೈನ ಶಿಲ್ಪ) ಶಿಲ್ಪವಿದೆ. ಪೇದ್ಯ ಭಾಗದಲ್ಲಿ ಪೂರ್ಣ ಕುಂಭಗಳಿವೆ.

ನವರಗಂದಲ್ಲಿ ಗರ್ಭಗುಡಿಗೆ ಅಭಿಮುಖವಾಗಿ ಕೂರ್ಮದ ಉಬ್ಬು ಶಿಲ್ಪವಿದೆ. ನವರಂಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ೧೨ ಕಂಬಗಳಿವೆ. ಇದರ ಮುಂದೆ ಆಧುನಿಕವಾಗಿ ನಿರ್ಮಿಸಿದ ಮುಖಮಂಟಪವಿದೆ. ಈ ದೇವಾಲಯದ ಹೊರ ಭಾಗವನ್ನು ಸೂಕ್ಷ್ಮವಾಗಿ

ಅವಲೋಕಿಸಿದರೆ ಇದು ಮೂಲತಃ ಜೈನ ಬಸದಿ ಎಂದು ಹೇಳಬಹುದು. ಆದರೆ ಪ್ರಸ್ತುತ ಜೈನರಿಗೆ ಸಂಬಂಧಿಸಿದ ಯಾವುದೇ ಕುರುಹುಗಳು ಕಂಡುಬರುವುದಿಲ್ಲ. ಅವುಗಳನ್ನು ಬೇರೆಡೆ ಸ್ಥಳಾಂತರಿಸಿರಬಹುದು ಅಥವಾ ನಾಶಪಡಿಸಿರಬಹುದು. ನವರಂಗ ಮಾತ್ರ ಪ್ರಾಚೀನವಾಗಿದೆ. ಗರ್ಭಗುಡಿ ಮತ್ತು ಮುಖಮಂಟಪ ಆಧುನಿಕವಾಗಿ ನಿರ್ಮಾಣಗೊಂಡಂತೆ ಕಂಡುಬರುತ್ತದೆ.

**ವೈಷ್ಣವ ದೇವಾಲಯ**

ವಿಷ್ಣುವಿನ ಆರಾಧನೆಯು ವೇದಗಳ ಕಾಲದಿಂದ ನಡೆದು ಬಂದಿದ್ದರು ಪ್ರಮುಖ ದೇವತೆಯೆನಿಸಿರಲಿಲ್ಲ. ಭಾಗವತ ಧರ್ಮವು ಈ ಆರಾಧನೆಯನ್ನು ಪ್ರಚಾರ ಮಾಡಿತು. ಕ್ರಿಸ್ತಶಕದ ಆರಂಭದ ವೇಳೆಗೆ ಕೃಷ್ಣನ ಪೂಜೆಯನ್ನು ಪ್ರಮುಖ ಲಕ್ಷಣಗಳುಳ್ಳ ಭಾಗವತವು ಸಾಕಷ್ಟು ಪ್ರಚಾರಕ್ಕೆ ಬಂದಿತ್ತು. ಪ್ರಮುಖ ದೈವವಾದ ವಾಸುದೇವನಲ್ಲಿ ವೇದಗಳಲ್ಲಿನ ವಿಷ್ಣುವು ಬ್ರಾಹ್ಮಣಗಳ ನಾರಾಯಾಣನೂ ಅವತ್ತಿಗಾಗಲೇ ಸಮೀಕೃತವಾಗಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಈ ಭಾಗವತ ಧರ್ಮವೇ ವೈಷ್ಣವ ಧರ್ಮವಾಗಿ ಮುಂದೆ ಪ್ರಸಿದ್ಧವಾಯಿತು. ಈ ಧರ್ಮಕ್ಕೆ ಸಂಬಂಧಿಸಿದ ದೇವಾಲಯವು ಮಸ್ಕಿ ಪಟ್ಟಣದಲ್ಲಿ ಒಂದು ಇರುವುದನ್ನು ಕಾಣುತ್ತೇವೆ. ಅದೇ ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಾಲಯವಾಗಿದೆ.[೧೬]

| | |
|---|---|
| ಸಂಖ್ಯೆ | : ೧೧ |
| ಸ್ಮಾರಕದ ಹೆಸರು | : ಲಕ್ಷ್ಮೀ ವೆಂಕಟೇಶ್ವರ ದೇವಾಲಯ |
| ಊರು | : ಮಸ್ಕಿ |
| ಸ್ಥಳ | : ದೈವದ ಕಟ್ಟೆ |
| ಕಾಲ | : ಕ್ರಿ.ಶ. ೧೬-೧೭ನೆಯ ಶತಮಾನ |
| ಶೈಲಿ | : ವಿಜಯನಗರೋತ್ತರ |
| ಅಭಿಮುಖ | : ಪೂರ್ವ |
| ಸ್ಥಿತಿ | : ಉತ್ತಮ |

ಸುಮಾರು ೧೧-೧೨ನೆಯ ಶತಮಾನದಿಂದಲೂ ಮಸ್ಕಿಯಲ್ಲಿ ಬ್ರಾಹ್ಮಣರು ಮತ್ತು ಶೈವರು ಇದ್ದರು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಬ್ರಹ್ಮ ದೇವಾಲಯ ಬ್ರಾಹ್ಮಣರಿಂದು ಆರಾಧಿಸಲ್ಪಡುತ್ತಿತ್ತು ಎಂದು ಹೇಳಲಾಗುತ್ತದೆ. ಅದು ಈಗಿರುವ ವೆಂಕಟೇಶ್ವರ ದೇವಸ್ಥಾನದ ಮುಂಚೆ ಇದೇ ಸ್ಥಳದಲ್ಲಿ ಇತ್ತು ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[೧೭] ಈ ದೇವಾಲಯ ಗರ್ಭಗುಡಿಯಲ್ಲಿ ಆಧುನಿಕವಾಗಿ (೨೭/೦೨/೨೦೧೨) ಹೊಸ ಮೂರ್ತಿಯನ್ನು

ಪ್ರತಿಷ್ಠಾಪಿಸಿದ್ದಾರೆ. ಇದು ಸ್ಥಾನಿಕ ಭಂಗಿಯಲ್ಲಿದ್ದು ಚತುರ್ಭುಜಧಾರಿಯಾಗಿದೆ. ಮುಂದಿನ ಬಲಗೈನಲ್ಲಿ ಚಕ್ರ ಎಡಗೈನಲ್ಲಿ ಶಂಖವಿದೆ. ಪಾದ ಭಾಗದಲ್ಲಿ ಈತನ ಪತ್ನಿಯರಾದ ಪದ್ಮಾವತಿ ಮತ್ತು ಲಕ್ಷ್ಮೀಯನ್ನು ಕಾಣುತ್ತೇವೆ. ಇಲ್ಲಿನ ನೆಲಹಾಸು ಆಧುನಿಕ ಬಿಳಿ ಗ್ರಾನೈಟ್ ಶಿಲೆಯಿಂದ ಕೂಡಿದೆ. ಪ್ರನಾಳವೂ ಸರಳತೆಯಿಂದ ಕೂಡಿದೆ. ದ್ವಾರದಲ್ಲಿ ಐದು ಪಟ್ಟಿಕೆಗಳಿವೆ. ಅದರಲ್ಲಿ ವಿವಿಧ ಲತಾಬಳ್ಳಿಗಳ ಅಲಂಕಾರಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪ, ಪೇದ್ಯ ಭಾಗದಲ್ಲಿ ಗಂಗೆ ಯಮುನೆಯರ ಶಿಲ್ಪಗಳಿವೆ. ಮುಂದೆ ತೆರೆದ ಮುಖಮಂಟವಿದ್ದು ಇದು ಆಧುನಿಕವಾಗಿ ನಿರ್ಮಾಣಗೊಂಡಿದೆ.

ದೇವಾಲಯದ ಮುಂಭಾಗದಲ್ಲಿ ಗರುಡಗಂಭವಿದ್ದು ಅದರಲ್ಲಿ ಆಂಜನೇಯನ ಉಬ್ಬುಶಿಲ್ಪ ಸ್ಥಾನಿಕ ಭಂಗಿಯಲ್ಲಿದೆ. ಈ ದೇವಸ್ಥಾನದ ಈಶಾನ್ಯ ದಿಕ್ಕಿಗೆ ನವಗ್ರಹ ದೇವತೆಗಳನ್ನು ಪ್ರತಿಷ್ಠಾಪಿಸಿದ್ದಾರೆ. ಇದರ ಉತ್ತರ ದಿಕ್ಕಿನಲ್ಲಿ ಆಂಜನೇಯನ ದೇವಾಲಯವಿದೆ. ಪೂರ್ವ ದಿಕ್ಕಿನಲ್ಲಿ ಆಧುನಿಕವಾಗಿ ನಿರ್ಮಿಸಿದಂತ ಕಲ್ಯಾಣ ಮಂಟಪವಿದೆ. ಈ ದೇವಾಲಯದ ಸುತ್ತಲು ಪ್ರಾಕಾರ ಗೋಡೆಯಿದ್ದು, ಅಲ್ಲಲ್ಲಿ ಉಬ್ಬುಶಿಲ್ಪಗಳು ಇವೆ. ಅದರಲ್ಲಿ ಮುಖ್ಯವಾಗಿ ಹೂವು, ಆನೆ, ಚಕ್ರ, ಶಂಖದ ಕೆತ್ತನೆಗಳಿವೆ. ಪ್ರವೇಶ ದ್ವಾರದ ಎಡಗೋಡೆಯಲ್ಲಿ ಒಂದು ಅಸ್ಪಷ್ಟವಾದ ಶಾಸನವನ್ನು ಕಂಡುಬರುತ್ತದೆ. ಗರ್ಭಗುಡಿಯ ಮೇಲ್ಭಾದಲ್ಲಿ ಗಾರೆಯಿಂದ ನಿರ್ಮಿಸಿದ ಶಿಖರವಿದೆ. ಇಲ್ಲಿ ನಾಲ್ಕು ದಿಕ್ಕುಗಳಿಗೂ ನಾಲ್ಕು ಗರ್ಜಿಸುವ ರೀತಿಯಲ್ಲಿ ಸಿಂಹಗಳ ಗಾರೆಯ ಶಿಲ್ಪಗಳಿವೆ. ಮೇಲ್ಭಾಗದಲ್ಲಿ ಕಳಸವನ್ನು ಹೊಂದಿದೆ. ಪ್ರಸ್ತುತ ಈ ದೇವಾಲಯದ ಸಂಪೂರ್ಣ ಭಾಗಕ್ಕೆ ಬಣ್ಣ ಬಳಿದಿದ್ದಾರೆ.

| | |
|---|---|
| ಸಂಖ್ಯೆ | : ೧೨ |
| ಸ್ಮಾರಕದ ಹೆಸರು | : ಮೌನೇಶ್ವ ದೇವಸ್ಥಾನ |
| ಊರು | : ಮಸ್ಕಿ |
| ಸ್ಥಳ | : ಮುದಗಲ್ಲ ರಸ್ತೆಯ ಎಡಭಾಗದಲ್ಲಿ |
| ಕಾಲ | : ಕ್ರಿ.ಶ. ೧೭-೧೮ನೆಯ ಶತಮಾನ |
| ಶೈಲಿ | : ನಿಜಾಮರ ಶೈಲಿ |
| ಅಭಿಮುಖ | : ಉತ್ತರ |
| ಸ್ಥಿತಿ | : ಉತ್ತಮ |

'ಎರಡನೆಯ ತಿಂಥಣಿ' ಎಂದು ಕರೆಯಲ್ಪಡುವಂತಹ ಈ ದೇವಸ್ಥಾನ ಮುದಗಲ್ಲ ರಸ್ತೆಯ ಎಡಭಾಗದಲ್ಲಿದೆ. ಈ ದೇವಾಲಯ ವಾಸ್ತು ಶೈಲಿಯ ದೃಷ್ಟಿಯಿಂದ ಮೂಲ ತಿಂಥಣಿಯನ್ನು ಹೋಲುತ್ತದೆ. ೫-೬ ಅಡಿ ಎತ್ತರದ ಜಗತಿ (ಕಟ್ಟೆ)ಯ ನಿರ್ಮಿಸಿಲಾಗಿರುವಂತಹ

ಈ ದೇವಸ್ಥಾನ ಗರ್ಭಗುಡಿ, ಅಂತರಾಳ, ನವರಂಗ ಭಾಗಗಳನ್ನು ಒಳಗೊಂಡಿದೆ. ಗರ್ಭಗುಡಿಯನ್ನು ಗುಹೆಯಂತೆ ನಿರ್ಮಿಸಿದ್ದಾರೆ. ಅದು ಆರು ಅಡಿ ಆಳದಲ್ಲಿರುವುದನ್ನು ಕಾಣುತ್ತೇವೆ. ಈ ಗುಹೆಯಲ್ಲಿ ಮೌನೇಶ್ವರ ತಪಸ್ಸು ಮಾಡಿದ್ದಾರೆ ಎಂಬ ಪ್ರತೀತಿ ಇದೆ. ಈ ಭಾಗದಲ್ಲಿ ಸುಮಾರು ಅರ್ಧ ಅಡಿ ಎತ್ತರದ ಕಟ್ಟೆಯಿದ್ದು ಇದರ ಮೇಲೆ ಮೌನೇಶ್ವರರು ಬಳಸುತ್ತಿದ್ದರು ಎಂದು ಹೇಳಲಾಗುವ ಕಂಚಿನಿಂದ ತಯಾರಾದ ಎರಡು ಸಣ್ಣ ಕೊಡಲಿಗಳು ಮತ್ತೊಂದು ದೊಡ್ಡ ಕೊಡಲಿ, ಇನ್ನೊಂದು ಅಭಯ ಸೂಚಕದಂತಿರುವ ಫಲಕವಿದೆ ಹಾಗೂ ಇನ್ನೆರಡು ಮಕುಟವನ್ನು ಧರಿಸಿದ ರೀತಿಯ ವಸ್ತುಗಳನ್ನಿಟ್ಟಿದ್ದಾರೆ.

ಹಿಂದೆ ಎಡ ಮತ್ತು ಬಲದಲ್ಲಿ ಸಣ್ಣದಾದ ದೇವಕೊಷ್ಠಾಗಳಿವೆ. ಗರ್ಭಗುಡಿಯನ್ನು ಪ್ರವೇಶಿಸಲು ಅಂತರಾಳದಿಂದ ಏಣಿಯ ವ್ಯವಸ್ಥೆ ಮಾಡಿದ್ದಾರೆ. ಇನ್ನೂ ಅಂತರಾಳ ಭಾಗದಲ್ಲಿ ಗರ್ಭಗುಡಿಗೆ ಪ್ರವೇಶಿಸಲು ಎರಡು ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಇಲ್ಲಿಯ ಬಾಗಿಲವಾಡ ಸರಳವಾಗಿದೆ. ನವರಂಗ ಭಾಗದ ಎರಡು ಕಡೆಯಿಂದಲೂ ಗರ್ಭಗುಡಿಯ ಮೇಲೆ ಇರುವಂತಹ ಮೌಲಾಲಿಯ ಉಪಗುಡಿಯನ್ನು ಪ್ರವೇಶಿಸಲು ಮೆಟ್ಟಿಲುಗಳಿವೆ. ಮೇಲಿನ ಗರ್ಭಗುಡಿಯಲ್ಲಿ ಮುಸ್ಲಿಂರ ದರ್ಗ ಮಾದರಿಯ ಸಮಾಧಿಯು ಕಂಡುಬರುತ್ತದೆ. ಇದರ ಮೇಲಾಭಾಗದಲ್ಲಿ ಶಿಖರವಿದೆ. ನವರಂಗದಲ್ಲಿ ೯ ಕಮಾನಗಳನ್ನು ಆಧುನಿಕವಾಗಿ ನಿರ್ಮಿಸಿದ್ದಾರೆ. ಶಿಖರ ಭಾಗದಲ್ಲಿ ಸಣ್ಣದಾದ ಮಿನಾರಗಳಿವೆ. ನಡುವೆ ಕಮಲ ಹೂವಿನ ಅರಳಿದ ದಳಗಳ ಮೇಲೆ ನಾಲ್ಕರಿಂದ ಐದು ಅಡಿ ವ್ಯಾಸದ ಒಂದು ಗುಮ್ಮಟವನ್ನು ನಿರ್ಮಿಸಿದ್ದಾರೆ.

| | |
|---|---|
| ಸಂಖ್ಯೆ | : ೧೩ |
| ಸ್ಮಾರಕದ ಹೆಸರು | : ವೀರಭದ್ರ ದೇವಾಲಯ |
| ಊರು | : ಮಸ್ಕಿ |
| ಸ್ಥಳ | : ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಹೋಗುವ ಹಾದಿಯಲ್ಲಿ |
| ಕಾಲ | : ಕ್ರಿ.ಶ. ೧೮-೧೯ನೆಯ ಶತಮಾನ |
| ಶೈಲಿ | : ವಿಜಯನಗರೋತ್ತರ |
| ಅಭಿಮುಖ | : ಪೂರ್ವ |
| ಸ್ಥಿತಿ | : ಮಧ್ಯಮ |

ಈ ದೇವಸ್ಥಾನವು ಮಸ್ಕಿಯ ಮಲ್ಲಯ್ಯನ ಬೆಟ್ಟವನ್ನು ಹತ್ತುವ ನಡುದಾರಿಯ ಬಲಭಾಗದಲ್ಲಿದೆ. ಇದು ಗರ್ಭಗುಡಿಯನ್ನು ಮಾತ್ರ ಹೊಂದಿದೆ. ಇಲ್ಲಿ ಯಾವುದೇ ರೀತಿಯ ಶಿಲ್ಪಗಳಿಲ್ಲ. ಬದಲಿಗೆ ಇಲ್ಲಿ ಎರಡು ಅಡಿ ಎತ್ತರ ಮತ್ತು ಒಂದು ಅಗಲದಲ್ಲಿನ ಕಪ್ಪು ಶಿಲೆಯ

ವೀರಭದ್ರನ ಮೂರ್ತಿಶಿಲ್ಪವನ್ನು ಕಾಣುತ್ತೇವೆ. ಎಡ-ಬಲದ ಭಿತ್ತಿಯಲ್ಲಿ ಸಣ್ಣದಾದ ಎರಡು ಖಾಲಿ ದೇವಕೋಷ್ಠಗಳಿವೆ. ಮೇಲ್ಭಾಗದಲ್ಲಿ ಸರಳ ಕೆತ್ತನೆಯಿಂದ ಕೂಡಿದ ಭುವನೇಶ್ವರಿವೂ ಕಂಡುಬರುತ್ತದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇನ್ನೂ ಬೋದಿಗೆಗಳು ದೇವಸ್ಥಾನದ ಮುಂಭಾಗದವರೆಗೂ ಮುಂಚಾಚಿಕೊಂಡಿದೆ. ಮುಂದಿನ ಭಿತ್ತಿಯಲ್ಲಿ ಪುಷ್ಪದ ಅಲಂಕಾರವಿದೆ. ಶಿಖರ ಭಾಗವು ನಾಲ್ಕು ಹಂತಗಳಲ್ಲಿ ಗಾರೆಯಿಂದ ನಿರ್ಮಾಗೊಂಡಿದೆ. ಅತ್ಯಂತ ಮೇಲ್ಭಾಗದಲ್ಲಿ ಕಮಲದ ಹೂವಿನ ದಳಗಳ ನಡುವೆ ಸುಮಾರು ನಾಲ್ಕರಿಂದ ಐದು ಅಡಿ ವ್ಯಾಸದ ಗುಮ್ಮಟವಿದೆ. ಪ್ರಸ್ತುತ ಈ ದೇವಾಸ್ಥಾನಕ್ಕೆ ಸುಣ್ಣವನ್ನು ಬಳಿದಿರುವುದರಿಂದ ಸೂಕ್ಷ್ಮ ಕೆತ್ತನೆಗಳನ್ನು ಗುರುತಿಸಲು ಕಷ್ಟಸಾಧ್ಯವಾಗಿದೆ.

**ರೊಟ್ಟಿ ಮಠ (ರಟ್ಟಯ್ಯ ಶಿಲಾಮಂದಿರ)**

ಇದು ಮೂಲತಃ ರೊಟ್ಟಿ ಮಠವಾಗಿದ್ದು. ಹಿಂದಿನ ದಿನಮಾನಗಳಲ್ಲಿ ಸ್ವಾಮಿಜೀ ಒಬ್ಬರು ಊರಲ್ಲಿ ದಾನ ಪಡೆದುಕೊಂಡು ಬಂದ ರೊಟ್ಟಿಗಳನ್ನು ಇಲ್ಲಿನ ಕಂಭಗಳಿಗೆ ನೇತು ಹಾಕುತ್ತಿದ್ದರಂತೆ. ಮಸ್ಕಿ ನದಿ (ಹಿರೇ ಹಳ್ಳ) ತುಂಬಿ ಬಂದಾಗ ಉತ್ತರ ದಿಕ್ಕಿನಿಂದ ಬರುವ ಬೇರೆ ಊರಿನ ಗ್ರಾಮಸ್ಥರು ಮಸ್ಕಿ ಗ್ರಾಮಕ್ಕೆ ತಲುಪಲು ಸಾಧ್ಯವಾಗದೆ ಈ ಹಳ್ಳದ ದಂಡೆಯ ಮೇಲಿರುವ ಈ ಮಂದಿರದಲ್ಲಿ ಆಶ್ರಯ ಪಡೆದುಕೊಂಡು ಇಲ್ಲಿಯೇ ಊಟ ಮಾಡುತಿದ್ದರಂತೆ. ಅದಕ್ಕೆ ಈ ಮಂದಿರಕ್ಕೆ 'ರೊಟ್ಟಿ ಮಠ' ಎಂದು ಕರೆಯುತ್ತಾರೆ. ಇತ್ತೀಚಿಗೆ ಈ ಮಂದಿರಕ್ಕೆ ಹೆಸರು ಬರೆಯುವಾಗ ರಟ್ಟಯ್ಯ ಶಿಲಾಶಾಸನ ಮಂದಿರ ಎಂದು ತಪ್ಪಾಗಿ ಬರೆಯಲಾಗಿದೆ.[೧೮]

ಪ್ರಸ್ತುತ ಈ ಮಂದಿರದಲ್ಲಿ ಸ್ಥಳೀಯವಾಗಿ ಸಿಗುವಂತಹ ಬಿಳಿ ಗಡಸು ಗ್ರಾನೈಟ್ ಶಿಲೆಯ ೧೨ ಕಂಭಗಳು ಮಾತ್ರವೆ ಕಾಣಸಿಗುತ್ತವೆ. ಇದಕ್ಕೆ ಮೇಲ್ಭಾಗದಲ್ಲಿ ಆಧುನಿಕವಾಗಿ ಸಿಮೆಂಟಿನ ಛಾವಣಿಯನ್ನು ಜಿಲ್ಲಾ ಪಂಚಾಯತ್ ತನ್ನ ಬಿ.ಆರ್.ಜಿ.ಎಫ್ ಯೋಜನೆಯ ಅಡಿಯಲ್ಲಿ ೨೦೦೯-೨೦೧೦ರಲ್ಲಿ ಪುನಶ್ಚೇತನ ಕಾರ್ಯ ಮಾಡಿದೆ.

**ಸೂಳಿ (ಸೂಳೆ) ದಿಬ್ಬ**

ಮಸ್ಕಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿಂಭಾಗದಲ್ಲಿ ದಿಣ್ಣೆಯ ಮಾದರಿ ಕಂಡು ಬರುವ ಸ್ಥಳಕ್ಕೆ ಸ್ಥಳೀಯರು ಸೂಳಿ ದಿಬ್ಬ, ಸೂಳೆದಿಬ್ಬ ಎಂದು ಕರೆಯುತ್ತಾರೆ. ಈ ದಿಬ್ಬವನ್ನು ಕುರಿತು ಸ್ಥಳೀಯ ಚರಿತ್ರೆಕಾರರು ಮತ್ತು ವಿದ್ವಾಂಸರಿಂದ ಎರಡು ರೀತಿಯ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಅವುಗಳೆಂದರೆ,

ಹಿಂದುಗಳಿಗೆ ದೇವಸ್ಥಾನ ಯಾವ ರೀತಿ ಆರಾಧನೆಯ ವಸ್ತುವಾಗಿದೆಯೋ ಅದೇ ರೀತಿ ಸ್ತೂಪವು ಕೂಡ ಬೌದ್ಧರಿಗೆ ಆರಾಧನೆಯ ವಸ್ತು. ಅದರಲ್ಲಿ ಸಾಮಾನ್ಯವಾಗಿ ಬುದ್ಧನ ಪಾದಕೆಗಳು, ಬುದ್ಧನ ಕೂದಲು, ಹಲ್ಲು ಮುಂತಾದವುಗಳನ್ನು ಒಂದು ಚಿಕ್ಕ ಪೆಟ್ಟಿಗೆಯಲ್ಲಿಟ್ಟು ನಂತರ ಅದನ್ನು ಮುಚ್ಚಿ, ಅದರ ಮೇಲೆ ಇಟ್ಟಿಗೆಯಲ್ಲಿ ಅಥವಾ ಕಲ್ಲಿನಲ್ಲಿ ಸ್ತೂಪ ಕಟ್ಟುತ್ತಿದ್ದರು. ಅದೇ ರೀತಿ ಈ ಮೇಲಿನದ್ದು ಸ್ತೂಪ ಇರಬಹುದು ಎಂದು ಹೇಳುತ್ತಾರೆ. ಇದ್ದಕ್ಕೆ ಸಾಕ್ಷಿ ಎಂಬಂತೆ ಇದರ ಮೇಲ್ಭಾಗದಲ್ಲಿ ಇದನ್ನು ಕಟ್ಟಲು ಬಳಸಿರಬಹುದಾದ ಇಟ್ಟಿಗೆಗಳ ಕುರುಹುಗಳನ್ನು ಕಾಣುತ್ತೇವೆ.[೧೯]

ಕ್ರಿ.ಶಕ ೧೫೩೭ ರಿಂದ ೧೫೪೭ರ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಅಚ್ಯುತದೇವರಾಯ ಹಾಗೂ ಸದಾಶಿವರಾಯ ಇವರ ಆಳಿಕ್ವೆಯಲ್ಲಿ ಮೊಸಗಿ ಸಂಸ್ಥಾನವನ್ನು ಗುಜ್ಜಲ ವಂಶದ ಇಮ್ಮಡಿ ಮೇದಿನಿರಾಯ ಎಂಬುವವರಿಗೆ ಬಳುವಳಿಯಾಗಿ ಕೊಡಲಾಗಿತ್ತು. ಮೊಸಗಿಯನ್ನು ಅಮರನಾಯಕಥನ ಎಂಬ ನಾಮದಿಂದ ಇಮ್ಮಡಿ ಮೇದಿನಿರಾಯ ಆಳುತ್ತಿದ್ದ ಬಗ್ಗೆ ಇತಿಹಾಸವಿದೆ. ಇದಕ್ಕೆ ಸಾಕ್ಷಿ ಎಂಬಂತೆ ಮಸ್ಕಿ ಸಮೀಪದ ಸಾನಬಾಳ ಗ್ರಾಮದಲ್ಲಿ ದೊರೆತ ಶಾಸನ ಒಂದರಲ್ಲಿ ಗುಜ್ಜಲ ವಂಶದ ಉಲ್ಲೇಖವಿದೆ ಎಂದು ಸಂಶೋಧಕ ಚನ್ನಬಸವ ಹಿರೇಮಠ ಹೇಳುತ್ತಾರೆ. ಹಿಮ್ಮಡಿ ಮೇದಿನಿರಾಯನಿಗೆ ರಾಣಿಯ ಜೊತೆಗೆ ಉಪಪತ್ನಿಯರಿಗಾಗಿಯೇ ಮಸ್ಕಿಯಲ್ಲಿ ಅರಮನೆ ನಿರ್ಮಿಸಿದ್ದಾನೆ. ಅದು ಕಾಲ ಕ್ರಮೇಣ ಮಣ್ಣಿನಲ್ಲಿ ಹುದುಗಿರಬಹುದು. ಆ ಸ್ಥಳವೆ 'ಸೂಳಿದಿಬ್ಬ' ಎಂಬುವುದು ಇವರ ಅಭಿಪ್ರಾಯ.[೨೦] ಇದರ ಪಕ್ಕದಲ್ಲಿಯೇ ಹಾಳಾದ ಊರು (ಹಳೆ ಕ್ಯಾತನಹಟ್ಟಿ) ಇರುವುದು ಇದಕ್ಕೆ ಪುಷ್ಟಿ ನೀಡುತ್ತದೆ.

ಪ್ರಸ್ತುತ ಈ ಸ್ಥಳವನ್ನು ಪ್ರಾಚ್ಯವಸ್ತು ಇಲಾಖೆ ತನ್ನ ಅಧೀನಕ್ಕೆ ತೆಗೆದುಕೊಂಡು ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಎಚ್ಚರಿಕೆಯ ನಾಮಫಲಕವನ್ನು ಹಾಕಲಾಗಿದೆ. ವಾದ ಪ್ರತಿವಾದಗಳು ಏನೇ ಇದ್ದರು ಇಲ್ಲಿ ಉತ್ಖನನ ಮಾಡಿದಾಗ ಮಾತ್ರ ಸತ್ಯಾಂಶ ಹೊರ ಬೀಳಲಿದೆ ಎಂದು ಹೇಳಬಹುದು.

ಈ ಮೇಲಿನ ದೇವಸ್ಥಾನಗಳ ಜೊತೆಯಲ್ಲಿ ಮಸ್ಕಿಯಲ್ಲಿ ಇನ್ನೂ ಅನೇಕ ಸಣ್ಣ ಪುಟ್ಟ ದೇವಸ್ಥಾನಗಳನ್ನು ಕಾಣುತ್ತೇವೆ. ಅವುಗಳೆಂದರೆ ಸೋಮನಾಥ ಗುಡಿ, ಕಣಿವೆ ಆಂಜನೇಯ ಗುಡಿ, ಬಾಲ ಮಾರುತಿ ಗುಡಿ, ಕಟ್ಟೆ ದುರ್ಗಮ್ಮ ದೇವಾಲಯಗಳು ಪ್ರಮುಖವಾಗಿವೆ.

## ಮೂರ್ತಿ ಶಿಲ್ಪ

ವಾಸ್ತು ಶಿಲ್ಪಗಳಷ್ಟೇ (ದೇವಾಲಯ) ಪ್ರಾಮುಖ್ಯತೆಯನ್ನು ಮೂರ್ತಿಶಿಲ್ಪಗಳು ಸಹ ಹೊಂದಿವೆ. ಮೂರ್ತಿಶಿಲ್ಪವು ಶಿಲ್ಪದಲ್ಲಿಯೇ ಸೇರುವ ಅನಾದಿಯಾದ ಕಲೆ. ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ಧವಾದ ೬೪ ಕಲೆಗಳಿಗೆಲ್ಲಾ ಶಿಲ್ಪ ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ಶಿಲ್ಪ ಎಂಬ ಪದಕ್ಕೆ ಬೆರಗನ್ನುಂಟುಮಾಡುವ ಕೈ ಕೆಲಸ ಎಂಬ ಅರ್ಥವಿದೆ. ಸಂಸ್ಕೃತದ ಶಿಲ್ಪವೆಂಬ ಶಬ್ಧ 'ಶೀಲ ಸಮಧೌ' ಎನ್ನುವ ಧಾತುವಿನಿಂದ ಉತ್ಪತ್ತಿಯಾಗಿದೆ.[೨೧] ಸಮಾಧಿ ಎಂಬ ಅರ್ಥವುಳ್ಳ ಶೀಲಾಧಾತುವು ತಪಸ್ಸನ್ನು ಸೂಚಿಸುತ್ತದೆ. ಅಂದರೆ ತಪಸ್ಸಿನ ಪ್ರಭಾವದಿಂದ ನಿರ್ವಹಿಸಲ್ಪಡುತ್ತಿರುವುದು ಶಿಲ್ಪ ಎಂಬುವುದು ಒಂದು ಅರ್ಥ. ಶಿಲ್ಪೋಪನೊಷತ್ತೆಂಬ ಗ್ರಂಥವು ಜಗತ್ತೆನೆಲ್ಲಾ ಸೃಷ್ಟಿ ಮಾಡಿದ ಬ್ರಹ್ಮನು ತನ್ನ ಮನಸ್ಸಿನಿಂದ ಮಾಡಿದುದ್ದೆಲ್ಲಾ ಶಿಲ್ಪವೇ ಎಂದು ಹೇಳುತ್ತದೆ.[೨೨] ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ ಶಿಲ್ಪ ಶಬ್ಧವನ್ನು 'ಕಲಾಕೌಶಲ' ಎಂಬ ಅರ್ಥದಲ್ಲಿ ಬಳಸಲಾಗಿದೆ.[೨೩] ಶಿಲ್ಪವೆಂದರೆ. 'ಲಲಿತ ಅಥವಾ ಯಂತ್ರ ಕಲೆ' ಎಂದು ಅರ್ಥವಾಗುತ್ತದೆ. ಮುಂದೆ ಈ ಪದದ ವ್ಯಾಪ್ತಿ ಪರಿಮಿತಗೊಂಡು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಗುತ್ತದೆ.[೨೪] ಮೂರ್ತಿಯೆಂಬುದಕ್ಕೆ ಪರ್ಯಾಯವಾಗಿ ಬಳಸಿರುವ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ ಎಂಬ ಪದಗಳು ಅದೊಂದು ಭೌತಿಕ ವಸ್ತು ಎಂಬಂತ್ತೆ ಅರ್ಥ ಕೊಡುತ್ತವೆ. ಮೂರ್ತಿ ಶಿಲ್ಪವನ್ನು ಕುರಿತು ಶಾಸ್ತ್ರೀಯ ಅಧ್ಯಯನ ಮಾಡುವುದಕ್ಕೆ ಮೂರ್ತಿಶಾಸ್ತ್ರ ಅಥವಾ ಪ್ರತಿಮಾಶಾಸ್ತ್ರವೆಂದು ಎಂದು ಕರೆಯಲಾಗುತ್ತದೆ.

ಮೂರ್ತಿಶಿಲ್ಪವನ್ನು ದೇವಶಿಲ್ಪ ಮತ್ತು ಮಾನವಶಿಲ್ಪ ಎಂಬ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ದೇವಶಿಲ್ಪಗಳು ಎಂದರೆ ದೇವಸಂಬಂಧ ಇರಿಸಿಕೊಂಡಿರುವ ಶಿಲ್ಪಗಳು. ಅಂದರೆ ಯಜ್ಞವೇದಿ, ಯಜ್ಞಕುಂಡ, ಯಜ್ಞಶಾಲೆ, ದೇವಾಲಯ, ದೇವಮೂರ್ತೊ, ದೇವೋಪಕರಣ, ಪೂಜಾಪಾತ್ರೆ, ಸುವರ್ಣಾಲಂಕಾರ, ರಥ, ಆಯುದಗಳು, ಯಜ್ಞ ಮತ್ತು ಸುವರ್ಣ, ತಾಮ್ರ, ಕಬ್ಬಿಣ, ಮರ, ಕಲ್ಲು ಎಂಬ ಪಂಚವಿಧ ವಸ್ತುಗಳಲ್ಲಿ ತಯಾರಿಸಿ ದೇವಾಲಯಕ್ಕೆ ಯಜ್ಞ ಮತ್ತು ಪೂಜೆಗೆ ಸಂಬಂಧಿಸಿದಂತೆ ನಿರ್ಮಿಸುವ ಶಿಲ್ಪಗಳು.[೨೫] ಪ್ರಪಂಚದಲ್ಲಿ ಮಾನವನ ಉಪಯೋಗಾರ್ಥವಾಗಿ ಅವನ ಬದುಕನ್ನು ಸುಖಗೊಳಿಸಲು ಮತ್ತು ಅವನ ಆತ್ಮದ ಸಂಸ್ಕರಣೆಗೆ ಅವಶ್ಯವಾಗು ಪಂಚ ವಿಧ ಶಿಲ್ಪಗಳನ್ನು ನಡೆಸಲಾಗುತ್ತದೆ. ಇವು ಇಹದಲ್ಲಿ ಮನುಷ್ಯನ ಜೀವನವು ಸುಖಮಯವಾಗಿರುವಂತೆ ನಡೆಸಲು ನೆರವಾಗುತ್ತವೆ. ಇಂತಹ ಮನುಷೋಪಯೋಗಿ ವಸ್ತು ನಿರ್ಮಾಣವು 'ಮಾನವ ಶಿಲ್ಪ' ಎಂದು ಕರೆಯಲ್ಪಡುತ್ತದೆ.[೨೬]

ಶಿಲ್ಪವು ಮಾನವನ ಬಹಿರಂಗ ಮತ್ತು ಅಂತರಂಗಗಳನ್ನು ಸಂಸ್ಕರಿಸುವ ಪ್ರಬಲ ಶಕ್ತಿಯಾಗಿದೆ. ಮಾನವನಿಗು ಮತ್ತು ಮೂರ್ತಿ ಶಿಲ್ಪಕ್ಕೂ ಬಹಳ ನಿಕಟವಾದ ಸಂಬಂಧವಿದೆ. ಮಾನವನು ಹುಟ್ಟಿನಿಂದಲೇ ಮೂರ್ತಿಶಿಲ್ಪವೂ ಹುಟ್ಟಿತೆಂದು ಹೇಳಬಹುದು. ಮೂರ್ತಿಗಳಲ್ಲಿ ಮೂರ್ತ ಮತ್ತು ಅಮೂರ್ತ ರೂಪಗಳೆರಡು ಇವೆ. ಮೂರ್ತಿ ಬಿಂಬಗಳಿಗೆ ನಿರ್ದಿಷ್ಟವಾದ ರೂಪವಿದೆ. ಮನುಷ್ಯನ ಅದಕ್ಕಿಂತ ಹೆಚ್ಚಿನ ಅವಯವಗಳನ್ನು ಹೊಂದಿರುತ್ತದೆ. ಆದರೆ ಅಮೂರ್ತರೂಪಕ್ಕೆ ನಿರ್ದಿಷ್ಟ ರೂಪವಿರುವುದಿಲ್ಲ.

ಹುಟ್ಟು ಬಂಡೆಯ ಆಕಾರವನ್ನು ಅನುಸರಿಸಿ ಒಂದು ಕಲ್ಪಿತ ಆಕಾರವನ್ನು ರೂಪಿಸುತ್ತರೆ. ಇಂತಹ ಮೂರ್ತಿಗಳನ್ನು ಒಡಮೂಡಿದ ಅಥವಾ ಉದ್ಭವ ಮೂರ್ತಿಗಳೆಂದು ಸಾಮಾನ್ಯವಾಗಿ ಭಾವಿಸಿ, ಇವುಗಳ ಸುತ್ತಲೂ ಪೌರಾಣಿಕ ಕಥೆಗಳನ್ನು ಹೆಣೆಯಲಾಗುತ್ತದೆ. ಅನೇಕ ಕ್ಷೇತ್ರಗಳಲ್ಲಿನ ಉದ್ಭವ ಲಿಂಗಗಳು ನರಸಿಂಹ ಮೂರ್ತಿಗಳು, ಶಿವಲಿಂಗಳು, ಗಣಪತಿ ವಿಗ್ರಹಗಳು ಮತ್ತು ಇತರೆ ಸ್ತ್ರೀ ದೇವತಾ ಮೂರ್ತಿಗಳು ಈ ಬಗೆಯದ್ದಾಗಿವೆ.[೨೭] ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಮಸ್ಕಿ ಮತ್ತು ಮಸ್ಕಿ ಪರಿಸರದಲ್ಲಿ ಪ್ರಾಚೀನ ಕಾಲವಧಿಯಿಂದ ಪಾಳೆಯಗಾರರ ಕಾಲಘಟ್ಟದವರೆಗೆ ನಿರ್ಮಿಸಲಾದ ಮೂರ್ತಿಶಿಲ್ಪಗಳು ಲಭ್ಯವಾಗಿವೆ. ಆಯಾ ರಾಜವಂಶಗಳ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪಗಳು ಬೆಳೆದುಬಂದಿವೆ. ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಶೈವ, ವೈಷ್ಣವ, ಶಾಕ್ತ ಎಂದು ವಿಭಾಸಿ ಅಭ್ಯಾಸಿಸಲಾಗಿದೆ.

### ಶೈವ ಮೂರ್ತಿಗಳು

ಶೈವಧರ್ಮ ಅತೀ ಪ್ರಾಚೀನ ಧರ್ಮಗಳಲ್ಲಿ ಒಂದು. ಹರಪ್ಪಾ ಮೊಹೆಂಜೋದಾರೊ ಸಂಸ್ಕೃತಿಗಳ ಅವಶೇಷಗಳಲ್ಲಿ ಶಿವನ ಸ್ತಂಭಾಕಾರದ ಲಿಂಗಗಳು ಕಂಡುಬರುವುದರಿಂದ ಶೈವಧರ್ಮವು ಸಿಂಧೂ ನಾಗರಿಕತೆಯ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿತ್ತೆಂದು ಊಹಿಸಬಹುದು. ಶೈವ ಧರ್ಮವು ಎಷ್ಟು ಪ್ರಾಚೀನವೋ ಅಷ್ಟೆ ವ್ಯಾಪಕವಾಗಿ ಹರಡಿತ್ತೆಂಬುವುದಕ್ಕೆ ಎಲ್ಲೆಡೆಗಳಲ್ಲಿಯೂ ಕಾಣುವ ಶಿವ ದೇವಾಲಯಗಳು ಮತ್ತು ಲಿಂಗಗಳೇ ಸಾಕ್ಷಿಯಾಗಿವೆ.[೨೮] ಅಧ್ಯಯನದ ಕ್ಷೇತ್ರವಾದ ಮಸ್ಕಿ ಮತ್ತು ಮಸ್ಕಿ ಪರಿಸರದಲ್ಲಿ ಶೈವ ಶಿಲ್ಪಗಳಲ್ಲಿ ಉದ್ಭವ ಮೂರ್ತಿಗಳು, ಲಿಂಗಗಳು, ನಂದಿ, ವೀರಭದ್ರ, ಗಣೇಶ, ಭೈರವ ಪ್ರಮುಖವಾಗಿ ಈ ಪರಿಸರದಲ್ಲಿ ಕಾಣಬರುತ್ತವೆ.

## ಗುಂಡ ಬ್ರಹ್ಮಯ್ಯ ಶಿಲ್ಪ

ನೂತನ ಯುಗದ ಶಿವ ಶರಣರಲ್ಲಿ ಗುಂಡ ಬ್ರಹ್ಮಯ್ಯರು ಅತ್ಯಂತ ಪ್ರಮುಖರಾದವರು. ಓರಂಗಲ್ಲೂ ಪಟ್ಟಣದಲ್ಲಿದ್ದ ಈ ಗುಂಡ ಬ್ರಹ್ಮಯ್ಯರನ್ನು ಪರೀಕ್ಷಿಸಲು ಒಮ್ಮೆ ಪರಮೇಶ್ವರನು ಕಾಕತೀಯ ಅರಸನ ಮನೆಯಲ್ಲಿ ಕಳ್ಳತನ ಮಾಡಿ ಗುಂಡ ಬ್ರಹ್ಮಯ್ಯರಲ್ಲಿಗೆ ಹೋಗಿ ರಕ್ಷಣೆ ಬೇಡುತ್ತಾನೆ. ಮೊರೆ ಹೊಕ್ಕವನನ್ನು ಸಂರಕ್ಷಿಸಲು ಹೋಗಿ ಈ ಶಿವಶರಣರು ತಾವೇ ಸ್ವಂತ ಶೂಲವನ್ನೇರಿ ಪ್ರಾಣ ಬಿಡುತ್ತಾರೆ. ಕೈಲಾಸವನ್ನು ಸೇರಿ ಸದ್ಗತಿ ಪಡೆಯುತ್ತಾರೆ. ಈ ಕಥೆಯು ಹಲವಾರು ವೀರಶೈವ ಪುರಾಣಗಳಲ್ಲಿ ಚಿತ್ರಿತವಾಗಿದೆ.

ಗುಂಡ ಬ್ರಹ್ಮಯ್ಯಗಳ ವಿಗ್ರಹಗಳು ಸಾಧಾರಣವಾಗಿ ಜೋಡಿಯಾಗಿ ಇರುತ್ತವೆ. ಕೈಯಲ್ಲಿ ಇಷ್ಟ ಲಿಂಗವನ್ನು ಹಿಡಿದು ಶೂಲದ ಮೇಲೆ ಕುಳಿತಿರುವ ಅಥವಾ ಶೂಲದ ಪಕ್ಕದಲ್ಲಿ ನಿಂತಿರುವ ಭಂಗಿಯಲ್ಲಿ ಈ ವಿಗ್ರಹಗಳು ದೊರೆಯುತ್ತವೆ. ಇದು ಗುಂಡ ಬ್ರಹ್ಮಯ್ಯರ ವಿಗ್ರಹಗಳ ಸಾಮಾನ್ಯ ಸ್ವರೂಪ. ಗುಂಡ ಬ್ರಹ್ಮಯ್ಯನ ಸುವ್ವಿ, ಓರುಗಲ್ಲು ಸೂರೆ, ಕವಿಚೆನ್ನನ ಗುಂಡ ಬ್ರಹ್ಮಯ್ಯಗಳ ಕಥೆ ಮುಂತಾದ ಕೃತಿಗಳಲ್ಲಿ ಇವರ ಸಾಹಸಗಾಥೆಯೇ ಕಾವ್ಯದ ವಸ್ತುವಾಗಿದೆ. ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಗುಂಡ ಬ್ರಹ್ಮಯ್ಯಗಳ ಕಥೆಯು ಆನುಷಂಗಿಕವಾಗಿ ಚಿತ್ರಿತವಾಗಿದೆ.

ಕ್ರಿ.ಶ.೧೧೬೦ರಲ್ಲಿದ್ದ ಮಲ್ಲಿಕಾರ್ಜುನ ಪಂಡಿತರಾಧ್ಯರು ತಮ್ಮ 'ಗಣಸಹಸ್ರನಾಮವಳಿ' ಕೃತಿಯಲ್ಲಿ ಈ ಶಿವಶರಣರನ್ನು ಗುಂಡದ ಬ್ರಹ್ಮಯ್ಯ, ಶೂಲದ ಬ್ರಹ್ಮಯ ಎಂದು ಕರೆದಿದ್ದಾರೆ. ಕ್ರಿ.ಶ.೧೫೫೦ರಲ್ಲಿದ್ದ ನಂಜುಂಡ ದೇವನು ತನ್ನ ಕೃತಿಯಲ್ಲಿ ಗುಂಡ ಬೊಮ್ಮಿಗಳೆಂದು ಕರೆದಿದ್ದಾನೆ. ಕ್ರಿ.ಶ.೧೫೬೦ರ ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮನಾಥನ 'ಸೋಮೇಶ್ವರ ಪುರಾಣ'ದಲ್ಲಿ ಗುಂಡ ಬ್ರಹ್ಮರು ಎಂದು ಕರೆಯಲಾಗಿದೆ. ಕ್ರಿ.ಶ.೧೫೮೫ರ ವಿರುಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ'ದಲ್ಲಿ ಧೀರ ಗುಂಡ ಬೊಮ್ಮಯ್ಯ ಎಂದು ಹೇಳಲಾಗಿದೆ ಇನ್ನು ಕ್ರಿ.ಶ.೧೫೮೭ರ ದೇವಕವಿಯ 'ಮರುಳಸಿದ್ಧ ಕಾವ್ಯ'ದಲ್ಲಿ ಗುಂಡಯ್ಯ ಬೊಮ್ಮಯ್ಯ ಎಂದು ಗುಂಡ ಬ್ರಹ್ಮಯ್ಯರನ್ನು ಉಲ್ಲೇಖಿಸಲಾಗಿದೆ.

ಹೀಗೆ ಪ್ರಸಿದ್ಧರಾದ ಇವರ ವಿಗ್ರಹಗಳು ಹಾಗೂ ದೇವಾಲಯಗಳು ಕರ್ನಾಟಕದಾದ್ಯಂತ ಅಲ್ಲಲ್ಲಿ ದೊರೆತಿವೆ. ಗುಂಡ ಬ್ರಹ್ಮಯ್ಯಗಳ ವಿಗ್ರಹಗಳನ್ನು 'ಶೂಲಬ್ರಹ್ಮ' ಎಂದು ಸಹ ಕರೆಯಲಾಗುತ್ತದೆ. ಗಂಡೇನಹಳ್ಳಿಯಲ್ಲಿ ಗುಂಡ ಬ್ರಹ್ಮಯ್ಯಗಳ ದೇವಾಲಯ, ವಿಗ್ರಹ ಹಾಗೂ ಶೂಲಸ್ತಂಭಗಳಿವೆ.[೨೯]

ಪ್ರಸ್ತುತ ಕ್ಷೇತ್ರಕಾರ್ಯದ ವೇಳೆಯಲ್ಲಿ ದೊರೆತ ಗುಂಡ ಬ್ರಹ್ಮಯ್ಯಗಳು ವಿಗ್ರಹಗಳು ಮಸ್ಕಿಯ ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ ಕಂಡುಬಂದಿವೆ. ಅದು ಗುಂಡಯ್ಯ ಮತ್ತು ಬ್ರಹ್ಮಯ್ಯರು ಶೂಲದ ಎಡ ಬಲದಲ್ಲಿ ಕುಳಿತಿದ್ದಾರೆ. ಮೇಲಿನ ಭಾಗದಲ್ಲಿ ಇಬ್ಬರು ಕೈಲಾಸದಲ್ಲಿ ಶಿವನೊಂದಿಗೆ ಇರುವಂತೆ ಕೆತ್ತಲಾಗಿದೆ. ಮತ್ತೊಂದು ಕಂಭದ ಕೆಳಭಾಗದಲ್ಲಿ ಗುಂಡ ಬ್ರಹ್ಮಯ್ಯನು ಎಡಗೈಯಲ್ಲಿ ಶಿವಲಿಂಗವನ್ನು, ಬಲಗೈಯಲ್ಲಿ ರುದ್ರಾಕ್ಷಿಯನ್ನು ಹಿಡಿದು ಪದ್ಮಾಸನದಲ್ಲಿ ಕುಳಿತಂತೆ ಕೆತ್ತಲಾಗಿದೆ.

### ವೀರಭದ್ರ

ಈ ಶಿಲ್ಪವು ನೀರ್ ಅಗಸಿಯ ಆಂಜನೇಯ ದೇವಸ್ಥಾನದ ಆವರಣದಲ್ಲಿ ಕಂಡುಬರುತ್ತದೆ. ಇದು ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣಗೊಂಡಿರಬಹುದಾಗಿದೆ. ಈ ಶಿಲ್ಪವು ಸುಮಾರು ಎರಡು ಅಡಿ ಎತ್ತರ ಒಂದು ಅಡಿ ಅಗಲವನ್ನು ಹೊಂದಿದೆ. ಸ್ಥಾನಿಕ ಭಂಗಿಯಲ್ಲಿರುವ ಇದರ ರುಂಡ ಭಾಗ ತೃಟಿತವಾಗಿದ್ದು, ಕೊರಳಲ್ಲಿ ಕಂಠಹಾರ ಮತ್ತು ಯಜ್ಞೋಪವೀತ ಧರಿಸಿದೆ. ಚತುರ್ಭುಜಧಾರಿಯಾದ ಇದರ ಹಿಂದಿನ ಬಲಗೈಯಲ್ಲಿ ಪದ್ಮವನ್ನು ಹಿಡಿದಿದೆ, ಎಡಗೈ ಭಾಗ ತೃಟಿತವಾಗಿದೆ ಮುಂದಿನ ಬಲಗೈಯನ್ನು ಅರ್ಧ ಮಡಿಚಿದ್ದು ತೋಳಬಂದಿ ಹಾಗೂ ಕೈಯಲ್ಲಿ ಖಡ್ಗವನ್ನು ಧರಿಸಿದ್ದು ಮುಷ್ಟಿಯಲ್ಲಿ ಖಡ್ಗವನ್ನು ಹಿಡಿದಿದೆ. ಇನ್ನು ಎಡಗೈಯಲ್ಲಿ ತೋಳಬಂದಿ ಮತ್ತು ಖಡ್ಗವನ್ನು ಕಾಣುತ್ತೇವೆ. ಈ ಕೈ ಪಾದಾಭಿಮುಖವಾಗಿದ್ದು ಒಂದು ಶಿಲೆಯ ಮೇಲೆ ಇಟ್ಟಂತೆ ಕಂಡರಿಸಲಾಗಿದೆ. ಸೊಂಟದಲ್ಲಿ ಆಭರಣಗಳು ಮತ್ತು ವಸ್ತ್ರಗಳನ್ನು ಧರಿಸಿದ್ದು ರುಂಡಮಾಲೆಯು ಮೊಣಕಾಲಿನವರೆಗೂ ಬಂದಿದೆ. ಪಾದದಲ್ಲಿ ಪಾದರಕ್ಷೆಯನ್ನು ಮೆಟ್ಟಿರುವಂತೆ ಕೆತ್ತಲಾಗಿದೆ. ಎಡಬಲದಲ್ಲಿ ಇವನ ವಾಹನವಾದ ನಿಲ್ಲಿಸಲಾಗಿದೆ. ಇದರ ಕೆಳಭಾಗದಲ್ಲಿ ಪುಷ್ಪದ ವೃತ್ತಾಕಾರವಾದ ಅಲಂಕಾರ ಕಂಡುಬರುತ್ತದೆ.

### ವೀರಭದ್ರ

ಈ ಶಿಲ್ಪವು ಸ್ಥಾನಿಕ ಭಂಗಿಯಲ್ಲಿದ್ದು ಎರಡು ಅಡಿ ಎತ್ತರ, ಒಂದು ಅಡಿ ಉದ್ದವನ್ನು ಹೊಂದಿದೆ. ತಲೆಯಲ್ಲಿ ಮಕುಟವನ್ನು ಧರಿಸಿದ್ದು ಕಿವಿಯಲ್ಲಿ ಕರ್ಣಕುಂಡಲಿಗಳಿವೆ. ಮೀಸೆಯು ತಿರುವಿದ್ದು ಉಗ್ರರೂಪವನ್ನು ಪ್ರತಿನಿಧಿಸುವಂತಿದೆ ಕೊರಳಲ್ಲಿ ಹಾರ, ಸರ ಯಜ್ಞೋಪವೀತ ಧರಿಸಿದ್ದು ಚತುರ್ಭುಜಧಾರಿಯಾಗಿದೆ. ಹಿಂಬದಿಯ ಬಲಗೈಯಲ್ಲಿ ಬಿಲ್ಲನ್ನು ಹಿಡಿದಿದ್ದು ಎಡಗೈನಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಮುಂದಿನ ಬಲಗೈ ವಿಸ್ತಾರವಾಗಿದ್ದು ತೊಡೆಯ ಭಾಗದವರೆಗೂ ಚಾಚಿದೆ. ಎಡಗೈಯಲ್ಲಿ ಖಡ್ಗವನ್ನು ಹಿಡಿದಿದೆ. ಸೊಂಟದಲ್ಲಿ ಸೊಂಟಪಟ್ಟಿಯನ್ನು

ಕಟ್ಟಿ ಅದರಲ್ಲಿ ಕಿರುಗತ್ತಿಯನ್ನು ಇರಿಸಿಕೊಂಡಿದ್ದಾನೆ. ಮುಂದುವರೆದು ಸೊಂಟ ಭಾಗದಲ್ಲಿ ಅಲಂಕಾರಿಕ ಬಟ್ಟೆಗಳನ್ನು ಧರಿಸಿದೆ. ಅದರ ಒಂದು ಭಾಗ ಎರಡು ಕಾಲುಗಳ ನಡುವೆ ಬಂದು ಪಾದದವರೆಗೂ ಇದೆ. ಈ ವೀರಭದ್ರನ ಎಡಭಾಗದಲ್ಲಿ ಅವನ ವಾಹನವಾದ ಶಿಲ್ಪವಿದ್ದು ಇದು ಕೈಮುಗಿದು ನಿಂತಿರುವ ಹಾಗೆ ಕೆತ್ತಲಾಗಿದೆ ಪ್ರಸ್ತುತ ಈ ಶಿಲ್ಪವನ್ನು ಸ್ಥಳೀಯರು ಸುಣ್ಣವನ್ನು ಬಳಿದಿರುವುದರಿಂದ ಅನೇಕ ಭಾಗಗಳು ಅಸ್ಪಷ್ಟವಾಗಿವೆ.

**ಮಲ್ಲಿಕಾರ್ಜುನ**

ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನದ ಗರ್ಭಗುಡಿಯಲ್ಲಿರುವಂತಹ ಈ ಶಿಲ್ಪವು ಶಾಸನೋಕ್ತವಾಗಿ ಉಲ್ಲೇಖಿತಗೊಂಡಿದೆ. ಗರ್ಭಗುಡಿಯಲ್ಲಿನ ನೈಸರ್ಗಿಕ ಹಾಸುಬಂಡೆಯ ಮೇಲಿನ ಆಗ್ನೇಯ ದಿಕ್ಕಿನಲ್ಲಿ ಕೆತ್ತಲ್ಪಟ್ಟದ್ದು ಪೂರ್ವಾಭಿಮುಖವಾಗಿದೆ. ಇದರ ಉದ್ಭವ ಮೂರ್ತಿಯಾದ ಈ ಶಿಲ್ಪವು ಕಪ್ಪು ಶಿಲೆಯಲ್ಲಿ ನಿರ್ಮಾಣಗೊಂಡಿದ್ದು ಮಲ್ಲಿಕಾರ್ಜುನನ ರುಂಡಭಾಗ ಮಾತ್ರ ಇದೆ. ತಲೆಯಲ್ಲಿ ಕಿರೀಟವನ್ನು ಧರಿಸಿದ್ದು ಹಣೆಯಲ್ಲಿ ಮೂರು ವಿಭೂತಿ ಪಟ್ಟಿಗಳಿವೆ. ಕಣ್ಣಿನ ಹುಬ್ಬುಗಳು ವಿಶಾಲವಾಗಿದ್ದು ಕಣ್ಣುಗಳು ತೆರೆದ ರೀತಿಯಲ್ಲಿ ಮೂಗಿನ ಭಾಗ ಇಡೀ ಶಿಲ್ಪದ ಮೂಲ ಬಿಂದುವಿನಂತಿದೆ. ಮೀಸೆಗಳು ಮೇಲ್ಮುಖವಾಗಿ ತಿರಿವಿದು ಇವು ಉಗ್ರರೂಪವನ್ನು ಪ್ರತಿನಿಧಿಸುವಂತಿವೆ. ತಲೆಯ ಹಿಂಭಾಗದಲ್ಲಿ ಸುಮಾರು ಎರಡರಿಂದ ಮೂರು ಅಡಿಗಳವರೆಗೂ ಇರುವ ಉದ್ದನೆಯವಾದ ಜಟೆ (ಜಡೆ) ಇರುವುದನ್ನು ಕಾಣುತ್ತೇವೆ. ಶಾಸನಗಳು 'ಏಕಜಡೆ' ದೇವಾಲಯ ಎಂದು ಸಂಭೋದಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಪ್ರಸ್ತುತ ನಿತ್ಯವು ಪೂಜಾ ಕಾರ್ಯಗಳು ಜರುಗುವುದರಿಂದ ಹೂವಿನ ಆಲಂಕಾರವನ್ನು ಮಾಡುವುದು ಚಾಲ್ತಿಯಲ್ಲಿದೆ.

**ಶಿವ**

ಹೂವಿನಬಾವಿಯ ಗವಿಸಿದ್ದೇಶ್ವರ ದೇವಸ್ಥಾನದ ಮುಂದಿನ ಪುಷ್ಕರಿಣಿ (ಬಾವಿ)ಯ ದಂಡೆಯ ಮೇಲಿರುವಂತೆ ಈ ಶಿಲ್ಪವು ಸ್ಥಾನಿಕ ಭಂಗಿಯಲ್ಲಿದೆ. ತಲೆಯಲ್ಲಿ ಮುಕುಟವನ್ನು ಧರಿಸಿದ್ದು ಕಿವಿಯಲ್ಲಿ ಕರ್ಣಕುಂಡಲಿಗಳು ಕಂಡುತ್ತೇವೆ. ಕೊರಳಲ್ಲಿ ವಿವಿಧ ಆಭರಣಗಳಿವೆ. ಕೈಯಲ್ಲಿ ತ್ರಿಶೂಲ ಮತ್ತು ಢಮರುಗಳಿವೆ ಯಜ್ಞೋಪವಿತವು ಮೊಣಕಾಲಿನ ಭಾಗದವರೆಗೂ ಬಂದಿದ್ದು ಸೂಕ್ಷ್ಮ ಅಲಂಕಾರಗಳನ್ನು ಹೊಂದಿದೆ. ಸೊಂಟದ ಭಾಗದಲ್ಲಿ ವಿವಿಧ ಆಭರಣಗಳನ್ನು ಧರಿಸಿರುವುದು ಕಂಡುಬರುತ್ತದೆ. ಕಾಲಿನಲ್ಲಿ ಕಡಗವನ್ನು ಧರಿಸಿದ್ದು ಪಾದದಲ್ಲಿ ಪಾದರಕ್ಷೆಗಳನ್ನು ಧರಿಸಿದೆ. ಮುಂದಿನ ಎಡಗೈನಲ್ಲಿ ಗಂಗೆಯನ್ನು ಹಿಡಿದಿರುವಂತೆ ಆ ಗಂಗೆಯೂ ಅರ್ಧ ಆಸಿನ

ಭಂಗಿಯಲ್ಲಿದ್ದು ಸೊಂಟದಲ್ಲಿ ಮಗುವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಇನ್ನೂ ಬಲಭಾಗದಲ್ಲಿ ಇನ್ನೆರಡು ಅಸ್ಪಷ್ಟವಾದಂತಹ ಶಿಲ್ಪಗಳಿವೆ. ಇಲ್ಲಿ ಆಧುನಿಕವಾಗಿ ಬಣ್ಣವನ್ನು ಬಳಿಸಿರುವುದರಿಂದ ಅನೇಕ ಕೆತ್ತನೆಗಳನ್ನು ಗುರುತಿಸಲಾಗುತ್ತಿಲ್ಲ.

**ಶಿವಲಿಂಗ**

ಈ ಶಿವಲಿಂಗವು ಸಾನಬಾಳ ಗ್ರಾಮದ ರಾಮಲಿಂಗ ದೇವಸ್ಥಾನದಲ್ಲಿನ ಗರ್ಭಗುಡಿಯಲ್ಲಿ ಕಂಡುಬರುತ್ತದೆ. ಕೆತ್ತನೆ ಮತ್ತು ಬಳಸಿದ ಶಿಲೆಯ ಮೇಲೆ ಇದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದು. ಅರ್ಧ ಅಡಿ ಎತ್ತರ ಪೀಠ ಪಟ್ಟಿಕೆಯ ಮೇಲೆ ರಚನೆಗೊಂಡಿದೆ. ಶಿವಲಿಂಗವು ೧೦ ಸೆಂ.ಮೀ. ಎತ್ತರ ಮತ್ತು ವೃತ್ತಾಕಾರದಲ್ಲಿದೆ. ಇದರ ಕೆಳಭಾಗದಲ್ಲಿ ಒಂದು ಪಟ್ಟಿಕೆಯನ್ನು ಕಾಣುತ್ತೇವೆ. ಅದು ಆಯತಾಕಾರವಾಗಿದ್ದು ಬಲಭಾಗವು ಸಣ್ಣದಾಗುತ್ತಾ ಹೋಗಿ ಮುಂದೆ ಪ್ರನಾಳದ ಸಮೀಪದಲ್ಲಿದೆ.

**ಶಿವ ಪಾರ್ವತಿ**

ಮಸ್ಕಿಯ ಪ್ರವಾಸಿ ಮಂದಿರದ ಆವರಣದಲ್ಲಿರುವ ಈ ಶಿಲ್ಪವು ಶಿಲೆ ಮತ್ತು ಕೆತ್ತನೆಗಳ ದೃಷ್ಟಿಯಿಂದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅಥವಾ ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿರಬಹುದಾಗಿದೆ. ಆಸಿನ ಭಂಗಿಯಲ್ಲಿರುವ ಈ ಶಿಲ್ಪವು ಸುಂದರವಾಗಿದೆ. ಶಿವನು ತಲೆಯಲ್ಲಿ ಮುಕುಟವನ್ನು ಧರಿಸಿದ್ದು ಕೊರಳಲ್ಲಿ ಹಾರ, ಸರ, ಯಜ್ಞೋಪವೀತ ಧರಿಸಿದೆ. ಕೈಯಲ್ಲಿ ಢಮರು ಹಿಡಿದಿದೆ ಉಳಿದಂತೆ ಕೈಗಳ ಭಾಗ ತೃಟಿತವಾಗಿದೆ. ಸೊಂಟದಲ್ಲಿ ಸೊಂಟಪಟ್ಟಿಯನ್ನು ಧರಿಸಿದೆ. ಬಲ ತೊಡೆಯ ಮೇಲೆ ಪಾರ್ವತಿ ಕುಳಿತಂತೆ ಕೆತ್ತಲಾಗಿದೆ. ಪಾರ್ವತಿ ಶಿಲ್ಪವು ಕಿರೀಟ, ಕರ್ಣಕುಂಡಲ, ಕೊರಳಲ್ಲಿ ಹಾರ, ಸರಗಳನ್ನು ಧರಿಸಿದೆ. ತನ್ನ ಎಡಗೈಯನ್ನು ಶಿವನ ಹೆಗಲ ಮೇಲೆ ಹಾಕಿರುವುದನ್ನು ಕಂಡುಬರುತ್ತದೆ. ಈ ಶಿಲ್ಪದ ಮುಂದಿನ ಭಾಗವು ತೃಟಿತವಾಗಿದೆ.

**ಸಪ್ತ ಮಾತೃಕೆಯರು**

ಶೈವ ಇಲ್ಲವೆ ವೈಷ್ಣವ ದೇವಾಲಯಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಕಂಡುಬರುತ್ತವೆ. ಸಪ್ತಮಾತೃಕೆಯರು ಊರ ಹೆಸರನ್ನು ಪಡೆದು ದೇವತೆಗಳಾಗಿ ಎಲ್ಲಾ ವರ್ಗದ ಜನರಿಂದ ಪೂಜೆಗೊಳ್ಳುವವರಾಗಿರುತ್ತಾರೆ. ಅನೇಕ ವೇಳೆ ಶಿವ ದೇವಾಲಯಗಳ ಪರಿವಾರ ದೇವತೆಗಳಾಗಿ ಕೆಲವೊಮ್ಮೆ ಸ್ವತಂತ್ರವಾಗಿಯೂ ಪೂಜೆಗೊಳ್ಳುತ್ತಾರೆ. ಇವರನ್ನು ಕನ್ಯೆಯರು ಎಂದು, ಹಾಗೂ ಅಮ್ಮನವರೆಂದು ಕರೆಯುವುದು ವಾಡಿಕೆ. ಈ ಮೂರ್ತಿಗಳ ಗಾತ್ರ ಮತ್ತು ಅಂಗುಲಗಳ

ವಿನ್ಯಾಸವು ಕಲ್ಲಿನ ಅಳತೆ, ಆಕರವನ್ನು ಅವಲಂಬಿಸಿರುತ್ತದೆ. ಕೌಶಿಕ ದುರ್ಗಿ ರಕ್ತಬಿಜಾಸುರನೊಡನೆ ಹೋರಾಡುತ್ತಿರುವಾಗ ಅಸುರನ ರಕ್ತ ನೆಲಕ್ಕೆ ಬಿದ್ದ ತಕ್ಷಣ ಮತ್ತೊಬ್ಬ ರಕ್ತಬಿಜಾಸುರ ಜನಿಸಿ ದೇವಿಯೊಡನೆ ಹೋರಾಟಕ್ಕಿಳಿಯುತ್ತಿದ್ದ. ಈ ಸಂದರ್ಭದಲ್ಲಿ ದೇವಿಯು ತನ್ನ ಸಹಾಯಕ್ಕಾಗಿ ಏಳು ಜನ ದೇವತೆಗಳನ್ನು ಸೃಷ್ಟಿಸಿದಳು. ಈ ದೇವತೆಗಳೆ ಸಪ್ತಮಾತೃಕೆಯರು. ದುರ್ಗ ಸಪ್ತಸತಿ ಗ್ರಂಥವು ಇದೇ ವಿವರಣೆ ನೀಡುತ್ತದೆ. ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಪ್ರದೇಶಗಳಾದ ಮಸ್ಕಿ ಮತ್ತು ಚಿಕ್ಕಕಡಬೂರುಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಕಂಡುಬಂದಿವೆ. ವಿಪರ್ಯಾಸವೆಂದರೆ ಈ ಎರಡು ಮೂರ್ತಿಶಿಲ್ಪಗಳು ತೃಟಿತಗೊಂಡಿವೆ. ಆದರೂ ಸಹ ಮಸ್ಕಿಯ ಬೋರಮ್ಮ ಗುಡಿಯಲ್ಲಿರುವ ಶಿಲ್ಪವು ಲಲಿತಾಸನದಲ್ಲಿ ಕ್ರಮವಾಗಿ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ ಇಂದ್ರಾಣಿ, ಚಾಮುಂಡೇಶ್ವರಿ ಮೂರ್ತಿಗಳು ಕಿರೀಟಧಾರಿಗಳಾಗಿವೆ.

**ಗಜಲಕ್ಷ್ಮೀ**

ಈ ದೇವಿಯ ಶಿಲೆಯ ಬಳಕೆಯ ದೃಷ್ಟಿಯಿಂದ ನೋಡಿದರೆ ಕಲ್ಯಾಣ ಚಾಲುಕ್ಯ ಮನೆತನಕ್ಕೆ ಸಂಭಂಧಿಸಿದಂತಿದೆ. ಇದರಲ್ಲಿ ಲಕ್ಷ್ಮೀಯ ಅಸ್ಪಷ್ಟವಾದಂತಹ ಶಿಲ್ಪವಿದೆ. ಇದರ ಎಡ-ಬಲದಲ್ಲಿ ಆನೆಗಳಿದ್ದು ಅವು ತಮ್ಮ ಹಿಂಗಾಲುಗಳನ್ನು ಸ್ವಲ್ಪ ಮಡಿಚಿದಂತೆ ಮತ್ತು ತಮ್ಮ ಸೊಂಡಿಲುಗಳಿಂದ ಬಿಂದಿಗೆಯನ್ನು ಎತ್ತಿ ಲಕ್ಷ್ಮೀಯ ತಲೆಯ ಮೇಲೆ ನೀರು ಸುರಿಯುತ್ತಿರುವಂತೆ ಕೆತ್ತಲಾಗಿದೆ. ಇನ್ನು ಈ ಎರಡು ಆನೆಗಳ ಹಿಂಭಾಗದಲ್ಲಿ ಪೂರ್ಣಕುಂಭಗಳನ್ನು ಕಾಣುತ್ತೇವೆ.

**ತೀರ್ಥಂಕರ**

ಇದು ಪ್ರಸ್ತುತ ಸರಕಾರಿ ಪ್ರಥಮದರ್ಜೆ ಕಾಲೇಜನ ಮುಂದೆ ಇರುವ ಜಾಲಿ ಗಿಡದ ಪೊದೆಯಲ್ಲಿ ಕಂಡುಬರುತ್ತದೆ. ಈ ಶಿಲ್ಪದ ಜೈನ ತೀರ್ಥಂಕರನೊಬ್ಬ ಪದ್ಮಾಸನದಲ್ಲಿ ಕುಳಿತಿರುವಂತೆ ಕೆತ್ತಲಾಗಿದ್ದು, ಅವನ ಎರಡು ಕೈಗಳು ತಪಸ್ಸಿನ ಸ್ಥಿತಿಯಲ್ಲಿ ಇಟ್ಟುಕೊಂಡಿದ್ದಾನೆ. ಇವನ ಕೆಳಭಾಗದಲ್ಲಿ ಆನೆಯ ಶಿಲ್ಪ ಮತ್ತು ಇನ್ನೊಂದು ಅಸ್ಪಷ್ಟವಾದ ಪ್ರಾಣಿಯ ಶಿಲ್ಪವಿದೆ. ಇದರ ಕೆಳಭಾಗದಲ್ಲಿ ಶಾಸನವನ್ನು ಬರೆಯಲಾಗಿದ್ದು ಅದು ಸಹ ಕಾಲದ ಹೊಡೆತಕ್ಕೆ ಸಿಲುಕಿ ಮಾಸಿಹೋಗಿದ್ದು ಅಲ್ಲಲ್ಲಿ ಕೆಲವೊಂದು ಅಕ್ಷರಗಳು ಮಾತ್ರ ಕಂಡುಬರುತ್ತವೆ.

## ಲೌಕಿಕ ವಾಸ್ತುಶಿಲ್ಪ

ಭಾರತದಲ್ಲಿ ನಗರಜೀವನ ಮತ್ತು ಅರಸೊತ್ತಿಗೆಯಲ್ಲದವರ ವಾಸ್ತುಶಿಲ್ಪದ ಪರಿಚಯವಾಗುವುದು ಹರಪ್ಪ ನಾಗರಿಕತೆಯ ಪುರಗಳ ಪಳೆಯುಳಿಕೆಗಳಿಂದ. ಇದರ ನಂತರ ಅನೇಕ ಏಳುಬೀಳುಗಳ ನಡುವೆ ಕ್ರಮವಾಗಿ ಲೌಕಿಕ ವಾಸ್ತುಶಿಲ್ಪ ಬೆಳೆದುಕೊಂಡು ಬಂದಿದೆ ಎಂದು ಹೇಳಬಹುದು. ಕರ್ನಾಟಕದಲ್ಲಿ ಕೂಡ ಈ ರೀತಿಯ ಲೌಖಿಕ ವಾಸ್ತುಶಿಲ್ಪ ಕಂಡುಬರುತ್ತದೆ. ಪ್ರಾಚೀನ ಕಾಲದ ಸಾವಿರಾರು ವರ್ಷಗಳ ದೇವಾಲಯಗಳಿರುವಾಗ ಸಾಮಾನ್ಯ ಜನ ಜೀವನದ ವಾಸ್ತು ಬಿಂಬಗಳೇಕಿಲ್ಲ ಎಂಬ ಗೊಂದಲಕ್ಕೆ ನೇರ ಉತ್ತರ ಕಷ್ಟಸಾಧ್ಯ. ದೈವತ್ವ ಮತ್ತು ಧರ್ಮಕ್ಕೆ ಸಂಬಂಧಪಟ್ಟ ವಾಸ್ತು ಶಿಲ್ಪವನ್ನೆಲ್ಲವನ್ನು ಕೂಡ ಇಟ್ಟಿಗೆ, ಮಣ್ಣು, ಮರಗಳಿಂದ ನಿರ್ಮಿಸಬಹುದು ಎಂಬುದು ಒಂದು ಅಂದಾಜು ಆದ್ದರಿಂದ ಆರಾಧನಾ ಸ್ಥಳಗಳ ದೀರ್ಘ ವಿಶ್ಲೇಷಣೆ ಬಹು ಸುಲಭವಾಗಿ ಸಾಧ್ಯವಾದರೆ, ಲೌಕಿಕ ವಾಸ್ತುಶಿಲ್ಪದ ಅಧ್ಯಯನವನ್ನು ಕೋಟೆ, ಕೆರೆ, ಬಾವಿ ಅರಮನೆಗಳಿಗೆ ಸೀಮಿತಗೊಳಿಸಿಕೊಳ್ಳಬೇಕು.[೩೦] ಕರ್ನಾಟಕದ ಅನೇಕ ಅರಸು ಮನೆತನಗಳಲ್ಲಿ ಇಂತಹ ಧಾರ್ಮಿಕ ಮತ್ತು ಲೌಕಿಕ ವಾಸ್ತುಶಿಲ್ಪಕ್ಕೆ ಎಷ್ಟು ಪ್ರಾಮುಖ್ಯತೆ ನೀಡಿದರೋ ಅಷ್ಟೋ ಪ್ರಾಮುಖ್ಯತೆಯನ್ನೂ ಲೌಕಿಕ ವಾಸ್ತುಶಿಲ್ಪ ನಿರ್ಮಾಣದ ಕಡೆಗೂ ನೀಡಿದರು.

## ಕೋಟೆ–ಕೊತ್ತಲಗಳು

ದುರ್ಗಹಿನೋ ಪ್ರಜಾಪತಿಃ ವಾತ್ರಾಭ್ರಮಿವ ದುರ್ಗಗಳಿಲ್ಲದ ರಾಜನು ಬಿರುಗಾಳಿಗೆ ಸಿಲುಕಿದ ಮೋಡವಾಗಿಚದುರಿಸಲ್ಪಡುತ್ತಾನೆ. ಎಂದು 'ಅಭಿಲಾಷಿತಾರ್ಥ ಚಿಂತಾಮಣಿ' ಗ್ರಂಥವು ರಾಜನ ವಾಸ್ತವ್ಯಕ್ಕೆ ದುರ್ಗದ ಮಾಹಿತಿಯನ್ನು ಹೇಳುತ್ತದೆ.[೩೧] ರಕ್ಷಣಾ ವ್ಯವಸ್ಥೆಯ ಈ ಪ್ರಾಚೀನ ಸೂತ್ರಕ್ಕೆ ಅನುಗುಣವಾಗಿ ಕರ್ನಾಟಕದ ರಾಜರು ಕೂಡ ಇನ್ನುಳಿದ ಅರಸರಂತೆ ರಾಜ್ಯ ಕಟ್ಟುವ ಹವ್ಯಾಸದದಲ್ಲಿ ಘೋರ ಯುದ್ಧಗಳನ್ನೆಸಗಿ ಜಯಿಸಿದ ನಾಡ ನೆಲದ ರಕ್ಷಣೆಗಾಗಿ ಹಾಗೂ ಅಲ್ಲಿಯ ಜನರ ರಕ್ಷಣೆಗಾಗಿ ಮತ್ತು ಸ್ವರಕ್ಷಣೆಗಾಗಿ ಅಲ್ಲಲ್ಲಿ ಕೋಟೆಕೊತ್ತಲಗಳನ್ನು ಕಟ್ಟಿದರು. ಆ ರಕ್ಷಣಾ ಗೋಡೆಗಳು ನೆಲದ ಹಾಗೂ ಜನರ ರಕ್ಷಣೆ ಮಾಡುದಿದ್ದುಲ್ಲದೆ ಮಾನವನ ಜೀವನದ ಗುಣಮೌಲ್ಯಗಳನ್ನು ತನ್ನ ರಕ್ಷಣ ರೆಕ್ಕೆಗಳಲ್ಲಿ ತುಂಬಿಕೊಂಡವು ಹಾಗೂ ಅವುಗಳನ್ನು ಉಳಿಸಿ ಬೆಳಸಿಕೊಂಡು ಬಂದವು.

ಕಾಲದಿಂದ ಕಾಲಕ್ಕೆ ಯುದ್ಧ ಅಥವಾ ಅಕ್ರಮಗಳಲ್ಲಿಯ ತಂತ್ರಗಳಿಗೆ ಹೊಸದಾಗಿ ಹಾಗೂ ಆವಿಷ್ಕಾರಗೊಂಡ ಆಯುಧಗಳಿಗೆ ತಕ್ಕಂತೆ ಕೋಟೆಗಳ ರಚನೆಯ ವಿಧಾನದಲ್ಲಿ ಮಾರ್ಪಾಡುಗಳಾದವು.[೨೧] ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಲ್ಲಿ ತಾವು ವಾಸಿಸಿದ ನೆಲೆಯ ಸುತ್ತಲೂ ರಕ್ಷಣೆಯ ಬೇಲಿ ಅಥವಾ ಕಿರುಗಾತ್ರದ ಗೋಡೆಯನ್ನು ನಿರ್ಮಿಸಿದ ಉದಾಹರಣೆಗಳಿವೆ. ಹರಪ್ಪಾ ಸಂಸ್ಕೃತಿಯ ಪ್ರಮುಖ ನಗರಗಳು ರಕ್ಷಣಾ ಗೋಡೆಗಳನ್ನು ಹೊಂದಿದ್ದವು. ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಹಾಗೂ ಪುರಾಣಗಳಲ್ಲಿ ಕೋಟೆಗಳಿಂದ ಕೂಡಿದ ನಗರಗಳ ಉಲ್ಲೇಖಗಳಿವೆ. ರಾಮಾಯಣದಲ್ಲಿ ಉಲ್ಲೇಖಿಸಿದಂತೆ ಲಂಕಾಪಟ್ಟಣ ಬಲವಾದ ಕೋಟೆಯಿಂದ ಸುತ್ತುವರಿದಿತ್ತು. ಕೋಟೆಗಳ ರಚನೆಯ ವಿಷಯವಾಗಿ ಕೌಟಿಲ್ಯ ನೈಸರ್ಗಿಕ ಸನ್ನಿವೇಷಗಳಿಗನುಗುಣವಾಗಿ ಕೋಟೆಗಳನ್ನು ಜಲದುರ್ಗ, ವನದುರ್ಗ, ಸ್ಥಳದುರ್ಗ, ಗಿರಿದುರ್ಗ ಇತ್ಯಾದಿಯಾಗಿ ವರ್ಗೀಕರಿಸಿ ಅವುಗಳ ರಚನೆಯ ವಿಧಾನವನ್ನೂ ವಿವರಿಸಿದ್ದಾನೆ.[೨೨]

ರಾಜ್ಯದ ಅತ್ಯಾವಶ್ಯಕವಾದ ಸಪ್ತಾಂಗಗಳಲ್ಲಿ ದುರ್ಗವೂ ಒಂದು ಎಂದು ರಾಜನೀತಿ ಹೇಳುತ್ತದೆ. ಮನುಸ್ಮೃತಿ, ಶುಕ್ರನೀತಿಸಾರ, ಮಾನಸಾರ, ಪಂಚತಂತ್ರ, ಮಾನಸೋಲ್ಲಾಸಗಳಲ್ಲಿ ಕೋಟೆಗಳ ವರ್ಗೀಕರಣ, ಕಟ್ಟಲು ಉಪಯೋಗಿಸಿದ ಸಾಮಾಗ್ರಿ, ಸಂರಕ್ಷಣ ವಿಧಾನ ಇವುಗಳ ದೀರ್ಘ ಪರಿಚಯವಿದೆ.[೨೪] ಕ್ರಿ.ಶ.೧೮೦೦ರ ಅವಧಿಯಲ್ಲಿ ಕರ್ನಲ್ ಮೆಕೆಂಜಿ ಮೈಸೂರು ಪ್ರಾಂತ್ಯದ ಸಂರಕ್ಷಣೆ ಮಾಡಿ ರಚಿಸಿದ ನಕ್ಷೆಯಲ್ಲಿ ಅಸ್ತಿತ್ವದಲ್ಲಿದ್ದ ಕೋಟೆಗಳನ್ನು ದಾಖಲಿಸಲಾಗಿದೆ. ಆ ನಕ್ಷೆಯ ಪ್ರಕಾರ ಸಾಮಾನ್ಯವಾಗಿ ಪ್ರತಿ ಹೋಬಳಿಯೂ ಕೋಟೆಗಳಿಂದ ಕೂಡಿದ್ದವು. ಆ ಕೋಟೆಗಳು ನಿರ್ದಿಷ್ಟ ಅಂತರದಲ್ಲಿದ್ದು, ಕೇವಲ ಒಂದು ದಿನದ ಅವಧಿಯಲ್ಲಿ ಒಂದು ಕೋಟೆಯಿಂದ ಇನ್ನೊಂದು ಕೋಟೆಗೆ ಎತ್ತಿನ ಗಾಡಿಯ ಮೂಲಕ ಹೋಗಬಹುದಾದ ಸಮಯದ ಅಂತರದಲ್ಲಿರುತ್ತಿದ್ದವು. ಅಲ್ಲದೆ ಈ ಕೋಟೆಗಳನ್ನು ಹೆದ್ದಾರಿ ಅಥವಾ ವಾಣಿಜ್ಯ ಮಾರ್ಗಗಳ ಆಯಕಟ್ಟಿನಲ್ಲಿ ನಿರ್ಮಿಸಿರುವುದು ನಕ್ಷೆಗಳಿಂದ ತಿಳಿದುಬರುವುದು.[೨೫] ಕೋಟೆಗಳು ಕೇವಲ ರಾಜಕೀಯ ಸೈನಿಕ ಕೇಂದ್ರಗಳಾಗಿರದೆ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಮನರಂಜನೆಗಾಗಿ ಹಬ್ಬ-ಹರಿದಿನಗಳು, ಉತ್ಸವಗಳು, ಕ್ರೀಡಾಕೂಟಗಳು ಆಗಾಗ್ಗೆ ಕೋಟೆಯೊಳಗೆ ನಡೆಯುತ್ತಿದ್ದವು. ಹಾಗೆಯೆ ಕೋಟೆಯೊಳಗೆ ಅನೇಕ ಕೈಗಾರಿಕಾ ಕೇಂದ್ರಗಳು, ಗುಡಿಕೈಗಾರಿಕೆಗಳು ಅಸ್ತಿತ್ವದಲ್ಲಿರುತ್ತಿದ್ದವು. ಪ್ರಸ್ತುತ ಮಸ್ಕಿ ಪರಿಸರದಲ್ಲಿ ಕೋಟೆ, ವಾಡೆ ಮತ್ತು ಹುಡೇವುಗಳು ಕಾಣಸಿಗುತ್ತವೆ.

**ಮಸ್ಕಿಕೋಟೆ**

ಮಸ್ಕಿಯ ಮಲ್ಲಿಕಾರ್ಜುನ ದೇವಾಲಯದ ಭಾಗ ಮತ್ತು ಅದರ ಹಿಂದಿನ ಭಾಗದಲ್ಲಿ ಕೋಟೆಯನ್ನು ಈ ಹಿಂದಿನ ಕಾಲದಲ್ಲಿ ಕಟ್ಟಲಾಗಿತ್ತು ಎನ್ನುವುದಕ್ಕೆ ಅನೇಕ ಕುರುಹುಗಳು ಕಾಣಸಿಗುತ್ತವೆ. ಅವುಗಳು ಪ್ರಮುಖವಾಗಿ ಗಮನಿಸಿದಾಗ ಕೋಟೆಯ ಕುರುಹುಗಳು ಎಂದು ತೀರ್ಮಾನಿಸಬಹುದಾಗಿದೆ. ಆದರೆ ಪ್ರಸ್ತುತ ಯಾವುದೇ ರೀತಿಯ ಗೋಡೆ, ಕಟ್ಟಡಗಳು ಇತ್ಯಾದಿಗಳು ಕಾಣಸಿಗುವುದಿಲ್ಲ. ಬರೀ ಕೋಟೆಗಳನ್ನು ಕಟ್ಟಲು ಬಳಸಿದ ಕಲ್ಲುಗಳು ಮಾತ್ರ ಕಂಡುಬರುತ್ತವೆ.

**ಸಾನಬಾಳ ಕೋಟೆ**

ಈ ಊರಿನಲ್ಲಿ ಅಗಸಿಯ ಬಾಗಿಲ ಮುಂದೆ ಕೋಟೆ ದ್ವಾರ, ಗೋಡೆಗಳ ಅವಶೇಷಗಳನ್ನು ಕಾಣುತ್ತೇವೆ. ಕೋಟೆಯ ಕಮಾನಿನ (ದ್ವಾರ) ಮೊದಲನೆಯ ದ್ವಾರವು ಸಂಪೂರ್ಣವಾಗಿ ನಶಿಸಿದೆ. ಇನ್ನೂ ಎರಡನೆ ದ್ವಾರ ಮಾತ್ರ ಮಧ್ಯಮ ಸ್ಥಿತಿಯಲ್ಲಿದೆ. ಈ ಎರಡು ದ್ವಾರಗಳ ನಡುವೆ ಕಕ್ಷಾಸನವನ್ನು ಕಾಣುತ್ತೇವೆ. ಇದರ ಕೆಳಭಾಗದಲ್ಲಿ ಎಡ ಮತ್ತು ಬಲ ಭಾಗಗಳಲ್ಲಿ ಸಾಲು ಸಾಲಾಗಿ ಆನೆಗಳ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ.

**ನಂಜಲದಿನ್ನಿ ಹುಡೇವು**

ಈ ಗ್ರಾಮದ ಊರ ನಡುವೆ ಇರುವ ಸಣ್ಣ ಗುಡ್ಡ (ಊರಗುಡ್ಡ)ದಲ್ಲಿ ವಿಜಯನಗರೋತ್ತರ ಕಾಲದಲ್ಲಿ ನಿರ್ಮಿಸಿರಬಹುದಾದ ಹುಡೇವುನ್ನ ಕಾಣುತ್ತೇವೆ. ಇದು ಸ್ಥಳೀಯವಾಗಿ ದೊರೆಯುವ ಕಲ್ಲುಗಳಿಂದ ಎರಡು ಹಂತಗಳಲ್ಲಿ ನಿರ್ಮಾಣಗೊಂಡಿದೆ. ಪ್ರಸ್ತುತ ಇದರ ಬಹುತೇಕ ಭಾಗವು ಕುಸಿತಗೊಂಡಿದೆ. ಅಲ್ಲಲ್ಲಿ ಸ್ವಲ್ಪ ಪ್ರಮಾಣದ ಮಾತ್ರ ಕೋಟೆ ಗೋಡೆಗಳು ಕಂಡುಬರುತ್ತವೆ. ಇನ್ನುಳಿದಂತೆ ಅದನ್ನು ಕಟ್ಟಲು ಬಳಸಿದ ಕಲ್ಲುಗಳ ಕುರುಹುಗಳು ಕಂಡುಬರುತ್ತವೆ.

**ಪ್ರಾಚೀನ ಬಾವಿಗಳು**

ನೀರು ಭೂಮಿಯ ಮೇಲಿನ ಜೀವಿಗಳಿಗೆ ಅತ್ಯಂತ ಅಗತ್ಯ ವಸ್ತು. ನೀರಿಲ್ಲದೆ ಪ್ರಪಂಚದ ಯಾವ ಜೀವಿಜಂತುಗಳು ಬದುಕುಳಿಯಲು ಸಾಧ್ಯವಿಲ್ಲ. ಹಾಗಾಗಿ ನೀರನ್ನು ಪಂಚಭೂತಗಳಲ್ಲಿ ಒಂದೆಂದು ಹೇಳಲಾಗುತ್ತದೆ. ಮಾನವನು ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಅವನು ಹೆಚ್ಚಾಗಿ ನೀರಿನ ಆಸರೆಗಳಲ್ಲಿ ಬಾಳಿ ಬದುಕಿದ್ದಾನೆ. ಇದಕ್ಕೆ ಆ ಭಾಗದಲ್ಲಿ ದೊರೆತಿರುವ

ಮಾನವ ನೆಲೆಯ ಕುರುಹುಗಳೇ ಸಾಕ್ಷಿಯಾಗಿವೆ. ನೂತನ ಶಿಲಾಯುಗದ ಮಾನವನು ಮಳೆಯ ನೀರಿನ ಉಪಯೋಗವನ್ನು ಮಾಡಲು ಮೊದಲಿಗೆ ಅರಿತನು. ಭೂಮಿಯ ಮೇಲೆ ಉಂಟಾದ ತಗ್ಗುಗಳಲ್ಲಿ ಮಳೆಗಾಲದಲ್ಲಿ ನೀರು ನಿಲ್ಲುವುದನ್ನು ಕಂಡ ಮಾನವ ಮಳೆ ಇಲ್ಲದೆ ಇರುವ ಸಮಯದಲ್ಲಿ ಅದನ್ನು ಉಪಯೋಗಿಸಲು ಪ್ರಾರಂಭಿಸಿದನು. ಹೀಗೆ ನೀರಿನ ತಂತ್ರವನ್ನು ಅರಿತ ಇವನು ತಾಮ್ರಯುಗ ಮತ್ತು ಬೃಹತ್ ಶಿಲಾಯುಗದಲ್ಲಿ ಪ್ರಾಕೃತಿಕವಾಗಿ ಬೆಟ್ಟಗುಡ್ಡಗಳಿಂದ ಬರುವ ಮಳೆಯ ನೀರಿಗೆ ಕೆಳಭಾಗದಲ್ಲಿ ಅಡ್ಡಗಟ್ಟಿ ನೀರನ್ನು ಸಂಗ್ರಹಿಸಿ ನಿತ್ಯ ಬಳಕೆಗೆ ಹಾಗೂ ವ್ಯವಸಾಯಕ್ಕೆ ಬಳಸಿರುವ ಹಲವಾರು ಉದಾಹರಣೆಗಳು ದಕ್ಷಿಣ ಭಾರತದಲ್ಲಿ ಉತ್ಖನನಗೊಂಡ ಬೃಹತ್ ಶಿಲಾಯುಗದ ನೆಲೆಗಳಲ್ಲಿ ಪತ್ತೆಯಾಗಿವೆ.[೩೬]

ಚರಿತ್ರೆಯ ಆರಂಭದಿಂದ ಸಮಾಜದ ಏಳಿಗೆಗೆ ಬೆನ್ನೆಲುಬಾದ ಬೇಸಾಯಕ್ಕೆ ನೀರಾವರಿಯು ಅನಿವಾರ್ಯ ಎಂದು ತಿಳಿದಿದ್ದರಿಂದ ಅದರ ವಿಕಾಸಕ್ಕೆ ಸಕಲ ಪ್ರಯತ್ನಗಳನ್ನು ಕೈಗೊಂಡಿರುವುದು ತಿಳಿದುಬರುತ್ತದೆ. ಆಗಿನ ಕಾಲದ ರಾಜರು, ಸಾಮಂತರು, ಅಧಿಕಾರಿಗಳು ಮತ್ತು ಶ್ರೀಮಂತರು, ಮಹಿಳೆಯರು ಹಾಗೂ ಪ್ರಜೆಗಳು ಸಹ ಕೆರೆ, ಬಾವಿ, ಕಾಲುವೆಗಳ ನಿರ್ಮಾಣಕ್ಕೆ ಮುಂದಾಗುತ್ತಿದ್ದರು. ಪ್ರಾಚೀನ ಶಾಸನಗಳು ಮತ್ತು ಗ್ರಂಥಗಳು ನಿರಾವರಿಗೆ ಪ್ರಾಮುಖ್ಯತೆ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ. ಕ್ರಿ.ಶ.೩೫೮ರ ಕದಂಬ ಮಯೂರವರ್ಮನ ಚಂದ್ರವಳ್ಳಿ ಶಾಸನವು ಅವನು ನಿರ್ಮಿಸಿದ ಸಾವಿರ ಅಡಿಗಳ ಅಗಲ ಮತ್ತು ಆಳದ ಹುಲಿಗೊಂದಿ ಕೆರೆಯ ಬಗ್ಗೆ ತಿಳಿಸುತ್ತದೆ. ಇದು ಬಹುಶಃ ಕನ್ನಡ ನಾಡಿನ ಶಾಸನನಾಧಾರಿತ ಪ್ರಾಚೀನ ಕೆರೆ ಎಂದರೆ ತಪ್ಪಾಗಲಾರದು.[೩೭]

ನದಿ ಮತ್ತು ಕೆರೆಯ ನೀರು ಎಟುಕದ ಭೂಮಿಯಲ್ಲಿ ಕೃಷಿ ಅಭಿವೃದ್ಧಿಗಾಗಿ ಬಾವಿಗಳನ್ನು ತೋಡುತ್ತಿದ್ದರು. ಈ ಬಾವಿಗಳಿಗೆ ಸಾಮಾಜಿಕ ಮತ್ತು ಧಾರ್ಮಿಕವಾಗಿ ತಮ್ಮದೇ ಆದ ಸ್ಥಾನವಿದೆ. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಸಾರ್ವಜನಿಕ ಹಿತಕ್ಕಾಗಿ ಬಾವಿ ಅಗೆಸಿದವನು ವರುಣ ಲೋಕದಲ್ಲಿ ಸ್ಥಾನ ಪಡೆಯುತ್ತಾನೆಂದು ತಿಳಿಸಿದೆ. ಪುರಾತನ ಕಾಲದಲ್ಲಿ ಬಾವಿಗಳನ್ನು ಕೃಷಿಗೆ ಮಾತ್ರವಲ್ಲದೆ ಧಾರ್ಮಿಕ ಜೀವನದ ವಿವಿಧ ಕಾರ್ಯಗಳಿಗಾಗಿ ನಿರ್ಮಿಸಲಾಗುತ್ತಿತ್ತು. ನೀರು ಸಿಗುವ ಜಾಗವನ್ನು ಜಲಸಂಶೋಧಕರು ತಮ್ಮದೆ ಆದ ವಿಧಾನಗಳಿಂದ ಗುರುತಿಸುತ್ತಿದ್ದರು. 'ಲೋಕೋಪಕಾರ' ಕೃತಿಯ ಜಲಸಂಶೋಧನೆಯ ಕುರಿತು ಒಂದು ಅಧ್ಯಾಯವನ್ನೇ ಹೊಂದಿದೆ. ವಾಸಸ್ಥಳದಲ್ಲಿರುವ ಬಾವಿಗಳು ಕುಡಿಯಲು ನಿತ್ಯಕರ್ಮ ಮತ್ತು ಕೈತೋಟಗಳಿಗೆ ನೀರುಣಿಸುತ್ತಿದ್ದರೆ, ದೇವಾಲಯಗಳ ಬಾವಿಗಳು ಧಾರ್ಮಿಕ ಕಾರ್ಯಗಳಿಗೆ ಉಪಯೋಗವಾಗುತ್ತಿದ್ದವು.

ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ರಚಿಸಿದ (ಕ್ರಿ.ಶ.೧೪೪೧) ಹಂಪೆಯ ಶಾಸನದಲ್ಲಿ ಕಂಡುಬರುವ ಒಂದು ಪದ್ಯದಲ್ಲಿ ಲಕ್ಷ್ಮೀಧರನು ಮಗುವಾಗಿದ್ದಾಗ ಅವನ ತಾಯಿ ಹಾಲೆರೆಯುತ್ತಾ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯಧಾತನಾಗು, ಸತ್ಪುರುಷನನ್ನು ರಕ್ಷಿಸು ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಹಾಕಿಸಿದಳಂತೆ.[೩೮] ಇದು ಆ ಕಾಲದಲ್ಲಿ ಕೆರೆಯನ್ನು ಕಟ್ಟಿಸುವುದು ಮತ್ತು ಬಾವಿಗಳನ್ನು ತೋಡಿಸುವುದು ಅತೀ ಮುಖ್ಯವಾದ ಕೆಲಸವಾಗಿತ್ತೆಂದು ಸ್ಪಷ್ಟಪಡಿಸುತ್ತದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಕಂಡುಬಂದಿರುವ ಕೆರೆಗಳು ಮತ್ತು ಬಾವಿಗಳು ಸಾರ್ವಜನಿಕ ಮತ್ತು ಧಾರ್ಮಿಕ ಕಾರ್ಯಗಳಿಗೆ ಬಳಸುವಂತಹವುಗಳಾಗಿವೆ.

**ಬಾವಿಗಳು**

**ಚಿಕ್ಕಕಡಬೂರು :** ಚಿಕ್ಕಕಡಬೂರು ಗ್ರಾಮದ ಪಶ್ಚಿಮ ದಿಕ್ಕಿಗೆ ಆದಿ ಬಸವೇಶ್ವರ ದೇವಾಲಯವಿದೆ. ಈ ದೇವಾಲಯದ ಪಕ್ಕದಲ್ಲಿ ಪಾಳೆಗಾರರ ಕಾಲದ ಬಾವಿಯಿದೆ. ಬಾವಿಯ ನಿರ್ಮಾಣ ಶೈಲಿಯನ್ನಾಧರಿಸಿ ಇದರ ಕಾಲವನ್ನು ಕ್ರಿ.ಶ. ೧೬-೧೭ನೇ ಶತಮಾನದ್ದೆಂದು ಹೇಳಬಹುದು. ಬಾವಿಯನ್ನು ಆಯತಾಕಾರವಾಗಿರುವ ಒಂದು ರೀತಿಯ ಕೆಂಪು ಶಿಲೆಯನ್ನು ಬಳಸಿ ಕಟ್ಟಲಾಗಿದೆ. ಬಾವಿಯು ಸುಮಾರು ೧೫ ಅಡಿ ಉದ್ದ, ೧೫ ಅಡಿ ಅಗಲ ಹೊಂದಿದ್ದು ಚೌಕಾಕಾರವಾಗಿದೆ. ಉತ್ತರ ದಿಕ್ಕಿನಿಂದ ಬಾವಿಯೊಳಕ್ಕೆ ಇಳಿಯಲು ೧೫ ಮೆಟ್ಟಿಲುಗಳಿವೆ. ಮೇಲಿನಿಂದ ಆರು ಮೆಟ್ಟಿಲುಗಳನ್ನು ಇಳಿದ ನಂತರ ಎಡಬಲದಲ್ಲಿ ಗರ್ಭಗೃಹವನ್ನು ಹೋಲುವ ಎರಡು ಸಣ್ಣ ಕೋಣೆಗಳಿವೆ. ಈ ಕೋಣೆಗಳಲ್ಲಿ ನಂದಿ ಮತ್ತು ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಕೋಣೆಗಳ ಲಲಾಟ ಬಿಂಬದಲ್ಲಿ ಗಣೇಶ ಮತ್ತು ಕೀರ್ತಿಮುಖದ ಉಬ್ಬುಶಿಲ್ಪಗಳಿವೆ. ಉಳಿದ ಆರು ಮೆಟ್ಟಿಲುಗಳನ್ನು ಇಳಿದ ನಂತರದಲ್ಲಿ ಬಾಳೆ ಹೂವಿನ ಮೊಗ್ಗಿನಾಕಾರದ ರಚನೆಯಿದೆ. ಬಾವಿಯ ವಾಸ್ತುವಿನಲ್ಲಿ ಕಾಣಬರುವ ವಿಶೇಷ ಭಾಗ ಇದಾಗಿದೆ. ಇದು ಪ್ರವೇಶ ದ್ವಾರದಂತೆ ಕಾಣುತ್ತದೆ. ಬಾಳೆ ಹೂವಿನ ಮೊಗ್ಗುವಿನಾಕಾರದ ರಚನೆಯುಳ್ಳ ಕಲ್ಲಿನ ತುಂಡಿನ ಮೇಲೆ ಕೀರ್ತಿಮುಖದ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಇದು ಸ್ಪಷ್ಟವಾದ ರಚನೆಯನ್ನು ಹೊಂದಿದ್ದು ನೀರಿರುವ ಕಡೆಗಿದೆ.

ಬಾವಿಯ ಎರಡು ಗೋಡೆಗಳು ಹಾಳಾಗಿದ್ದು, ಉಳಿದ ಎರಡು ಗೋಡೆಗಳು ಮಾತ್ರ ಉತ್ತಮ ರೀತಿಯಲ್ಲಿವೆ. ಈ ಗೋಡೆಗಳಲ್ಲಿ ತಾಳ, ಮದ್ದಲೆ, ನಗಾರಿ ಬಾರಿಸುವ ಪುರುಷರ ಹಾಗೂ ನೃತ್ಯನಿರತ ಸ್ತ್ರೀಯ ಉಬ್ಬು ಶಿಲ್ಪಗಳಿವೆ. ಬಾವಿಯ ಬಲಗಡೆ ಗೋಡೆಯಲ್ಲಿ ನೃತ್ಯನಿರತ ಸ್ತ್ರೀ, ಪದ್ಮದ ಉಬ್ಬುಶಿಲ್ಪಗಳಿವೆ. ಸವಾರಿನಿರತ ಕುದುರೆ, ಆನೆಯ ಮೇಲೆ ಮಾವುತನಿರುವ ಉಬ್ಬುಶಿಲ್ಪಗಳಲ್ಲದೆ. ಇನ್ನೂ ಮುಂತಾದ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಬಾವಿಯ ದಂಡೆಯ ಮೇಲೆ ಸಪ್ತಮಾತೃಕೆಯರ ಮೂರ್ತಶಿಲ್ಪಗಳಿವೆ. ಈ ಎಲ್ಲಾ ಅಂಶಗಳು ಆಗಿನ ಕಾಲದ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳ ಬಗ್ಗೆ ಚಿತ್ರಣವನ್ನು ನೀಡುತ್ತವೆ.

ಈ ಬಾವಿಯನ್ನು ಕುರಿತು ಅಲ್ಲಿನ ಸ್ಥಳೀಯರಲ್ಲಿ ಒಂದು ನಂಬಿಕೆ (ಐತಿಹ್ಯ) ಪ್ರಚಲಿತದಲ್ಲಿದೆ. ಅದರ ಪ್ರಕಾರ ಈ ಬಾವಿಯು ನೀರು ಔಷಧಿಗುಣವುಳ್ಳದು. ಈ ನೀರನ್ನು ರೋಗಗ್ರಸ್ತ ಪಶುಗಳಿಗೆ ಕುಡಿಸಿದರೆ ರೋಗವು ಗುಣಮುಖವಾಗುತ್ತದೆ ಎಂಬುವುದು ಇಲ್ಲಿನ ಜನರ ನಂಬಿಕೆ. ಬಹುಕಾಲದಿಂದಲೂ ಸುತ್ತಮುತ್ತಲಿನ ಗ್ರಾಮದ ರೋಗಗ್ರಸ್ತ ಪಶುಗಳಿಗೆ ಕುಡಿಸಲು ಈ ಬಾವಿಯ ನೀರನ್ನು ತೆಗೆದುಕೊಂಡು ಹೋಗುತ್ತಾರೆ ಎಂದು ಅಲ್ಲಿನ ಹಿರಿಯರು ಹೇಳುತ್ತಾರೆ.[೩೯]

**ಕಾಟಿಗಲ್ಲಿನ ಶಾಸನೋಕ್ತ ಬಾವಿ**

ಮಸ್ಕಿಯ ಪ್ರವಾಸ ಮಂದಿರದ ಒಳಗಿನ ೬ನೇ ಶಾಸನವು ಈ ಬಾವಿಯನ್ನು ಕುರಿತು ವರ್ಣಿಸಿದೆ. ಬರಿ ಬಾವಿಯನ್ನು ಕಟ್ಟಿದ್ದರ ಬಗ್ಗೆ ಉಲ್ಲೇಖವಿದ್ದರೆ ಇದಕ್ಕೆ ಇಷ್ಟು ಮಹತ್ವ ಬರುತ್ತಿರಲಿಲ್ಲವೇನೋ ಆದರೆ ಆ ಬಾವಿಯನ್ನು ಕಟ್ಟಿಸಿದ್ದು ಶಾಂತರಸ ಎಂಬ ವ್ಯಕ್ತಿ ಹೆಚ್ಚು ಸಮಾಜ ಸೇವಕನಂತಿದ್ದು, ಕಟ್ಟಿಸಿದ ಬಾವಿ ಒಂದು ಅದ್ಭುತ ಕಲಾರಚನೆಯಾಗಿ ನಿಂತಿದ್ದು ಅದಕ್ಕೆ ಹೆಚ್ಚು ಪಾವಿತ್ರತೆ ಇದೆ ಎಂದು ಬರೆದಿದೆ. ಮತ್ತು ಇದೆಲ್ಲವನ್ನು ಬರೆಯುವ ಚಿಕ್ಕ ಶಾಸನ ಸುಂದರವಾಗಿ ಕಾವ್ಯಾತ್ಮಕವಾಗಿ ಬರುತ್ತದೆ ಎಂಬುದೇ ಮುಖ್ಯ. ಶಾಸನದಲ್ಲಿ ಈ ಬಾವಿಯನ್ನು ಕುರಿತು ಈ ಕೆಳಗಿನಂತೆ ವರ್ಣಿಸಿದೆ. ಸುರನದಿಗೆ ಸಮ ಎಂದೆನಿಸುವ ಪುಷ್ಕರಿಣೆಯನ್ನು ಅಖಿಲ ಭೂ ಮಂಡಲದಲ್ಲಿ ಪ್ರಸಿದ್ಧವಾದ ಕಾಟಿಗಲ್ಲಿನಲ್ಲಿ ಪರರ ಸುಕದಲ್ಲಿ ಸುಖಃವನ್ನು ಕಾಣುವವನು ಆಶ್ರಯ ಬಯಸಿ ಬಂದವರಿಗೆ ಕಲ್ಪತರುವಿನಂತವನು ಆದ ಶಾಂತರಸನು ಅತಶಯನು ಕಟ್ಟಿಸಿದನು........

ಹೀಗೆ ಶಾಸನ ಪಠ್ಯ ತುಂಬಾ ಸುಂದರವಾಗಿದೆ. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಕಾಟಿಗಲ್ಲಿಗೆ ಹೋದಾಗೊಮ್ಮೆ ಈ ಬಾವಿಯನ್ನು ಹುಡುಕುವ ಪ್ರಯತ್ನ ಮಾಡಿದೆ. ಆದರೆ ನನಗೆ ಸ್ಪಷ್ಟವಾದ ಯಾವುದೇ ಕುರುಹುಗಳು ಸಿಗಲಿಲ್ಲ.[೪೦]

**ಹೂವಿನಬಾವಿ ಬಾವಿ**

ಈ ಊರಿನಿಂದ ಆಗ್ನೇಯಕ್ಕೆ ಸುಮಾರು ೧.೫ ಕಿ.ಮೀ. ದೂರದ ಬೆಟ್ಟಗಳ ಮದ್ಯದಲ್ಲಿರುವ ಗವಿಸಿದ್ಧೇಶ್ವರ ದೇವಾಲಯದ ಪಶ್ಚಿಮ ದಿಕ್ಕಿ ಈ ಬಾವಿ ಇದೆ. ಇದು ಆಂಗ್ಲ ವರ್ಣ ಮಾಲೆಯ ಟಿ (*T*) ಆಕಾರದಲ್ಲಿದೆ. ಇದು ಕಲ್ಯಾಣ ಚಾಲ್ಯುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರಬಹುದಾಗಿದೆ. ಸ್ಥಳೀಯವಾಗಿ ಸಿಗುವ ಕಪ್ಪು ಶಿಲೆಯಲ್ಲಿ ನಿರ್ಮಿಸಲಾಗಿದ್ದು ಚೌಕವಾಗಿದೆ. ಪೂರ್ವ ದಿಕ್ಕಿನಿಂದ ಬಾವಿಯೊಳಕ್ಕೆ ಇಳಿಯಲು ಎಂಟು ಮೆಟ್ಟಿಲುಗಳಿವೆ. ಪಶ್ಚಿಮ ದಿಕ್ಕಿನಲ್ಲಿ ಸಣ್ಣದಾದ ಗರ್ಭಗುಡಿಯನ್ನು ಹೋಲುವ ಸಣ್ಣ ಕೋಣೆಯಿದೆ. ಇದರ ಒಳಭಾಗದಲ್ಲಿ ಅಸ್ಪಷ್ಟವಾದಂತಹ ಬರಹ (ಶಿಲ್ಪ) ಇದೆ. ಇದರ ಮೇಲ್ಭಾಗದಲ್ಲಿ ಮತ್ತೊಂದು ಆಧುನಿಕವಾಗಿ ನಿರ್ಮಿಸಿದಂತಹ ಸಣ್ಣ ಗರ್ಭಗುಡಿಯೂ ಇದೆ. ಇದನ್ನು ಗಂಗಮ್ಮನ ಗುಡಿಯೆಂದು ಕರೆಯುತ್ತಾರೆ. ಪ್ರಸ್ತುತ ಬಾವಿಯ ಸುತ್ತಲೂ ತಡೆಗೋಡೆಯನ್ನು ನಿರ್ಮಿಸಿದ್ದಾರೆ.

ಈ ಬಾವಿಯ ಮೇಲಭಾಗದಲ್ಲಿ ಗಣಪತಿಯ ಭಗ್ನಶಿಲ್ಪ, ವಾಸ್ತು ಅವಶೇಷಗಳು, ಭಕ್ತನ ಶಿಲ್ಪ ಹಾಗೂ ಕೆಲವು ಭಗ್ನ ಶಿಲ್ಪಗಳಿವೆ. ಈ ಬಾವಿಯ ನೀರನ್ನು ಪ್ರಸ್ತುತ ಬಳಸಲು ಯೋಗ್ಯವಾಗಿದೆ. ಹಾಗೂ ಅಲ್ಲಿರುವ ಗವಿಸಿದ್ಧೇಶ್ವರ ದೇವಸ್ಥಾನದ ನಿತ್ಯ ಪೂಜ್ಯಾಕಾರ್ಯಗಳಿಗೆ ಈ ನೀರನ್ನೇ ಬಳಸಲಾಗುತ್ತದೆ.

ಈ ಮೇಲಿನ ಬಾವಿಗಳ ಜೊತೆಗೆ ಮಸ್ಕಿ ಮತ್ತು ಮಸ್ಕಿ ಪರಿಸರದಲ್ಲಿ ಅನೇಕ ಬಾವಿಗಳು ಕಂಡುಬರುತ್ತವೆ. ಅವುಗಳಲ್ಲಿ ಮಸ್ಕಿಯ ಸಂತೆ ಬಜಾರ ಮುಂದಿನ ಬಾವಿ, ನಂಜಲದಿನ್ನಿ ಸಮೀಪದ ದೊಡ್ಡ ಬೆಟ್ಟದಲ್ಲಿನ ಬಾವಿ ಪ್ರಮುಖವಾಗಿವೆ.

## ಕೊನೆ ಟಿಪ್ಪಣಿ

೧. ಅನಂತರಂಗಚಾರ್, ಎನ್, ೧೯೮೪ ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ, ಪು.೩೦೮

೨. ದೇವರಕೊಂಡಾರೆಡ್ಡಿ (ಕನ್ನಡ ಅನುವಾದ) ಭಾರತೀಯ ವಾಸ್ತು ವಿದ್ಯೆ, ಪು.೧

೩. ಅದೆ, ಪು.೫

೪. ಅದೇ, ಪು.೬

೫. ಅದೇ, ಪು.೭

೬. ವಾಸುದೇವನ್ ಸಿ ಎಸ್, ೨೦೧೨, ಕರ್ನಾಟಕ ದೇವಾಲಯಗಳ ಕೋಶ, ರಾಯಚೂರು ಜಿಲ್ಲೆ, ಪು.೧೧೬

೭. ಅದೇ, ಪು.೧೧೮

೮. ಹೊನ್ನೂರಸ್ವಾಮಿ, ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಇವರು ನೀಡಿದ ಮಾಹಿತಿ

೯. ಚನ್ನಬಸವ ಹಿರೇಮಠ, ೨೦೧೭, ಘನಶ್ರೀ, ಪು.೧೨

೧೦. ಅದೇ, ಪು.೧೨

೧೧. ಅದೇ, ಪು.೧೩

೧೨. ಯಮನೂರಪ್ಪ, ೨೦೧೭, ಮಸ್ಕಿ ಒಂದು ಸಾಂಸ್ಕೃತಿಕ ಅಧ್ಯಯನ, ಪು.೧೮

೧೩. ಚನ್ನಬಸವ ಹಿರೇಮಠ, ೨೦೧೨, ಪೂರ್ವೋಕ್ತ, ಪು.೧೨

೧೪. ಅದೇ, ಪು.೧೨

೧೫. ಚನ್ನಬಸವ ಹಿರೇಮಠ, ೨೦೦೮, ಸತ್ಯದ ಹಾದಿ, ಪು.೯೮-೧೦೦

೧೬. ಯಮನೂರಪ್ಪ, ೨೦೧೭ ಪೂರ್ವೋಕ್ತ, ಪು.೩೪

೧೭. ಅದೇ, ಪು.೩೪

೧೮. ಚನ್ನಬಸಪ್ಪ ಮಲ್ಕಂದಿನ್ನಿ, ೨೦೧೭, ಸುದ್ದಿಮೂಲ ಪತ್ರಿಕೆ, (ದೀಪಾವಳಿ ವಿಶೇಷಾಂಕ), ಪು.೪೮

೧೯. ಅದೇ, ಪು.೪೭

೨೦. ಚನ್ನಬಸವ ಹಿರೇಮಠ, ೨೦೧೭, ವಿನಾಶದ ಅಂಚಿನಲ್ಲಿ ಐತಿಹಾಸಿಕ ಸೂಳಿದಿಬ್ಬ, ಪ್ರಜಾವಾಣಿ, ಪು.೦೪

೨೧. ಜ್ಞಾನನಂದ.ಜಿ, ೨೦೦೧, ಶಿಲ್ಪಾದರ್ಶನ, ಸಂ.೧, ಪು.೦೩

೨೨. ರಾಮಚಂದ್ರರಾವ್, ಸಾ. ಕೃ, ೧೯೯೪, ಸಂದಾಯ ಶಿಲ್ಪ ಕಲೆ ಶಿಲ್ಪಕಲಾ ಪ್ರಪಂಚ, ತಿಪ್ಪೇಸ್ವಾಮಿ ಸಿ.ಆರ್, (ಪ್ರ. ಸಂ.) ಪು.೩೫

೨೩. ಮರಿಶಾಮಾಚಾರ್.ಎನ್, ೧೯೯೪, ಶಿಲ್ಪ ಮತ್ತು ವಿಶ್ವಕರ್ಮ, ಶಿಲ್ಪಕಲಾ ಪ್ರಪಂಚ, ತಿಪ್ಪೇಸ್ವಾಮಿ ಸಿ.ಆರ್. (ಪ್ರ. ಸಂ.), ಪು.೧೯

೨೪. ತಿಪ್ಪೇರುದ್ರಸ್ವಾಮಿ, ಎಚ್, ೨೦೦೭, ಕರ್ನಾಟಕ ಸಮೀಕ್ಷೆ, ಪು.೫೨೩

೨೫. ಜ್ಞಾನಾನಂದ ಜಿ, ೨೦೦೧, ಪೂರ್ವೋಕ್ತ, ಪು.೩

೨೬. ಅದೇ, ಪು.೪

೨೭. ದೇವರಕೊಂಡರೆಡ್ಡಿ, ೧೯೯೪, ಗಂಗರ ಶಿಲ್ಪಕಲೆ, ಶಿಲ್ಪಕಲಾ ಪ್ರಪಂಚ, ತಿಪ್ಪೇಸ್ವಾಮಿ ಸಿ.ಅರ್, (ಪ್ರ.ಸಂ.) ಪು.೧೭೧

೨೮. ವಿನೋದಾ ಪಾಟಿಲ್, ೨೦೦೩, ಶಿಲ್ಪಗಳಲ್ಲಿ ಶಿವಭಕ್ತರು, ಪು.೧

೨೯. ಮಂಜುನಾಥ ಎಂ, ಜಿ, ಇತಿಹಾಸ ದರ್ಶನ, ೧೫, ಪು.೭೨

೩೦. ವಸು ಎಂ.ವಿ, ೨೦೦೯, ಕರ್ನಾಟಕ ಚರಿತ್ರೆ, ವಿವಿಧ ಆಯಾಮಗಳು, ಪು.೯೪

೩೧. ಜೋಶಿ ಎಸ್, ಕೆ, ೨೦೦೮, ಕರ್ನಾಟಕ ಕೋಟೆ-ಕೊತ್ತಲುಗಳು, ಪು.೦೧

೩೨. ಅಂಬಳಿಕೆ ಹಿರಿಯಣ್ಣ, (ಪ್ರ,ಸಂ), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪು.೨೮೧

೩೩. ಅದೇ

೩೪. ವಸು ಎಂ ವಿ, ೨೦೦೯, ಪೂರ್ವೋಕ್ತ, ಪು.೯೪

೩೫. ಅಂಬಳಿಕೆ ಹಿರಿಯಣ್ಣ, (ಪ್ರ.ಸಂ.), ಪೂರ್ವೋಕ್ತ, ಪು.೨೮೧

೩೬. ವಸು ಎಂ ವಿ, ೨೦೦೯, ಪೂರ್ವೋಕ್ತ, ಪು.೮೨

೩೭. ಅದೇ, ಪು.೮೩

೩೮. ತಿಪ್ಪೇರುದ್ರಸ್ವಾಮಿ.ಎಚ್, ೨೦೦೭, ಪೂರ್ವೋಕ್ತ, ಪು.೨೭೩

೩೯. ಅಮರೇಶ, ೨೦೧೧, ಬಳಗನೂರು ಹೋಬಳಿ ಪರಿಸರದ ಸಾಂಸ್ಕೃತಿಕ ಅಧ್ಯಯನ, ಎಂ.ಫಿಲ್. ಅಪ್ರಕಟಿತ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೮೩

೪೦. ಗುಂಡುರಾವ್ ದೇಸಾಯಿ, (ಪ್ರ.ಸಂ), ೨೦೧೨, ಶ್ರೀನಿವಾಸ ವೈಭವ, (ಸ್ಮರಣ ಸಂಚಿಕೆ) ಪು.೯

## ಅಧ್ಯಾಯ – ೪

## ಶಾಸನಗಳು ಮತ್ತು ಸ್ಮಾರಕ ಶಿಲ್ಪಗಳು

### ೧ ಶಾಸನಗಳು

ಬಹುಕಾಲ ಉಳಿಯುವ ಶಿಲೆ, ಕಲ್ಲು ತಾಮ್ರ, ಬೆಳ್ಳಿ, ಮುಂತಾದ ಲೋಹಗಳ ಮೇಲೆ ಬರೆಯಲ್ಪಟ್ಟ, ಬರಹಗಳೆ ಶಾಸನಗಳೆಂದು ಕರೆಯುತ್ತಾರೆ.[೧] ಶಾಸನ ಎಂಬ ಸಂಸ್ಕೃತ ಪದಕ್ಕೆ ಆಜ್ಞೆ ರಾಜಾಜ್ಞೆ) ಎಂಬುದು ಮೂಲರ್ಥವಿದೆ, 'ಶಾಸ್' ಎಂಬ ಧಾತುವಿಗೆ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಂಬ ಅರ್ಥಗಳಿವೆ. ಶಾಸನ ಎಂಬುವುದಕ್ಕೆ ಈಗಲೂ 'ಕಾನೂನು' ಎಂಬ ಅರ್ಥ ಚಲಿತದಲಿರುವುದನ್ನು ಗಮನಿಸಬಹುದು.[೨] ಪ್ರಾಚೀನ ಭಾರತದ ಆಡಳಿತ ಪದ್ಧತಿಯ ಬಗ್ಗೆ ತಿಳಿಸುವ ಂಥಗಳಾದ ಶುಕ್ರನೀತಿ ಸಾರ, ಕೌಟಿಲ್ಯನ ಅರ್ಥಶಾಸ್ತ್ರ ಮುಂತಾದ ಗ್ರಂಥಗಳು 'ಶಾಸನ' ಎಂಬ ದವನ್ನು ರಾಜಾಜ್ಞೆ ಎಂಬ ಅರ್ಥದಲ್ಲಿ ಪ್ರಯೋಗ ಮಾಡಿದೆ.[೩] ಶಾಸನ ಎಂಬುದು ಮೂಲಭೂತವಾಗಿ ಾನಕ್ಕೆ ಸಂಬಂಧಪಟ್ಟ ರಾಜಾಜ್ಞೆಯಾಗಿತ್ತು. ಶಾಸನಕ್ಕೆ ಸಮಾನಾರ್ಥದಲ್ಲಿ ಬಳಕೆಯಾಗುತ್ತಿರುವ ಇಂಗ್ಲಿಷ್ ಬ್ದ ಎಂದರೇ *Inscription*, ಮುಂದೇ ಅದನ್ನು *Inscribe* ಎಂದರೆ ಕೆತ್ತುವುದು ಎಂದು ರ್ಥವಾಗಿದೆ.[೪] ಈ ವ್ಯಾಪಕ ಅರ್ಥದಲ್ಲಿ ಡಿ.ಸಿ ಸರ್ಕಾರ್‌ರವರು 'ಶಾಸನವೆಂದರೆ ಯಾವುದಾದರೊಂದು ದಾರ್ಥದ ಮೇಲೆ ಕೊರೆದ ಯಾವುದೇ ಬರಹವು ಅಕ್ಷರ ಎಂದು ಅರ್ಥವಾಗುತ್ತದೆ ಎಂದಿದ್ದಾರೆ.[೫] ಾಸನಗಳನ್ನು ಕೇವಲ ಸಂಕುಚಿತ ಅರ್ಥದಲ್ಲಿ ಬಳಕೆ ಮಾಡದೆ ಅದನ್ನು ವಿಶಾಲ ಅರ್ಥದಲ್ಲಿ ಬಳಕೆ ಾಡಿದ್ದಾರೆ. ಶಾಸನವು ಇತಿಹಾಸದ ಆಧಾರಕ್ಕೆ ಮೂಕ ಸಾಕ್ಷಿಯಾಗಿದೆ. ಕೇವಲ ಸಾಹಿತ್ಯ ನಿರ್ಮಾಣ ಾತ್ರ ಶಾಸನಗಳ ಉದ್ದೇಶವಾಗಿದೆ, ದಾನಶಾಸನ, ಪ್ರಶಸ್ತಿಶಾಸನ, ವೀರಗಲ್ಲು, ಮಹಾಸತಿಗಲ್ಲು, ಾಜಾಜ್ಞಗಳು ಅಥವಾ ಆಡಳಿತ ವ್ಯವಸ್ಥೆಯ ಹೊರಡಿಸಿರುವ ಆಜ್ಞೆಗಳು, ಮುಂತಾದ ವಿಶಾಲಾರ್ಥದಲ್ಲಿ ಾಸನಗಳು ತನ್ನ ಕೊಡುಗೆಯನ್ನು ನೀಡುತ್ತಾ ಬಂದಿವೆ.[೬] ಶಾಸನ ಒಂದು ಐತಿಹಾಸಿಕ ಮತ್ತು ಾರಂಪರಿಕ ಮಾಹಿತಿಯನ್ನು ನೀಡುವ ಪ್ರಮುಖ ಆಧಾರವೆಂದೇ ಹೇಳಬಹುದು.

### ಾಸನಗಳ ಉದ್ದೇಶ

ಶಾಸನಗಳನ್ನು ಹಾಕಿಸುವ ಉದ್ದೇಶ ದಾನ–ದತ್ತಿಗಳನ್ನು ತಿಳಿಸುವ, ರಾಜನ ಪ್ರಶಸ್ತಿಯನ್ನು ರ್ಣಿಸುವುದು ಆಗಿದ್ದರೂ, ಅಂದಿನ ಸಂಸ್ಕೃತಿಯನ್ನು ತಿಳಿದುಕೊಳ್ಳವುದು ಇದರ ಮುಖ್ಯ ಉದ್ದೇಶ. ಾಸನಗಳಲ್ಲಿ ಕಾಲ ನಿರ್ದೇಶನಗಳಲ್ಲದಿದ್ದರೂ ಲಿಪಿ ದೃಷ್ಠಿಯಿಂದ ಕಾಲ ನಿರ್ದೇಶನ ಮಾಡುವುದು ದರ ಇನ್ನೊಂದು ವಿಶೇಷತೆ. ಈ ಶಾಸನಗಳು ಸಮಕಾಲೀನ ದಾಖಲೆಗಳಾಗಿದ್ದರಿಂದ ಕೆಲವೊಮ್ಮೆ ಾಹಿತ್ಯಿಕ ಕೃತಿಗಳಲ್ಲಿ ಸಿಗದಂತಹ ಕೆಲವೊಂದು ಘಟನಾವಳಿಗಳು ಶಾಸನಗಳಿಂದ ದೊರೆಯುತ್ತವೆ.

ೀದಿಗಳಲ್ಲಿ ಉದ್ಯಾನವನಗಳಲ್ಲಿ, ನಾಲ್ಕು ದಾರಿಗಳು ಕೂಡುವ ಸ್ಥಳದಲ್ಲಿ ಬಹುಕಾಲ ಉಳಿಯುವಂತೆ ಾಸನಗಳನ್ನು ನೆಟ್ಟಿರುವುದನ್ನು ಕಾಣುತ್ತೇವೆ. ಶಾಸನ ಅಧ್ಯಯನದಲ್ಲಿ ಗದ್ಯವೇ ಪ್ರಧಾನವಾದರೂ ಾಷಾದೃಷ್ಟಿಯಿಂದ, ಲಿಪಿದೃಷ್ಟಿಯಿಂದ ನೋಡಿದಲ್ಲಿ ಇದರ ಚಾರಿತ್ರಿಕ ಬದಲಾವಣೆಯನ್ನು ಗುರುತಿಸಲು ಾಧ್ಯವಾಗುತ್ತದೆ. ಮಸ್ಕಿ ಪರಿಸರದಲ್ಲಿ ದೊರೆತ ೨೦ ಶಾಸನಗಳು ವಿವಿಧ ಕಡೆಗಳಲ್ಲಿ ಪ್ರಕಟಗೊಂಡಿವೆ. ುತ್ತು ೪ ಅಪ್ರಕಟಿತಗೊಂಡಿವೆ. ಅದರಲ್ಲಿ ಅತೀ ಮುಖ್ಯವೆನಿಸುವ ಹನ್ನೊಂದು (೧೧) ಶಾಸನಗಳನ್ನು ಾತ್ರ ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಕ್ರಿ.ಪೂ.ದ ಶಾಸನ (ಅಶೋಕ ಶಾಸನ) ಇಲ್ಲಿ ೊರೆತಿರುವುದರಿಂದ ಮಸ್ಕಿ ಪ್ರಾಚಿನ ಕಾಲದಿಂದಲೂ ಜನನಿಬಿಡ ಪ್ರದೇಶವಾಗಿತ್ತು ಎಂದು ಿಳಿಯಬಹುದಾಗಿದೆ. ಇದರಿಂದಾಗಿ ಮಸ್ಕಿ ಪರಿಸರದಲ್ಲಿ ದೊರೆತಿರುವ ಶಾಸನಗಳ ಪಾಠದ ಾರಾಂಶವನ್ನು ವಿವರಿಸಲಾಗುವುದು.

**ಾನ ಶಾಸನಗಳು**

ನಮ್ಮ ನಾಡು ದಾನಗಳ ತವರೂರು. ಇಲ್ಲಿಯ ಜನರು ಹಸಿದವರಿಗೆ ಅನ್ನ ನೀಡುವುದು, ಾಯಾರಿದವರಿಗೆ ನೀರು ಕೊಡುವುದು, ಒಂದು ಪುಣ್ಯದ ಕೆಲಸವೆಂದು ತಿಳಿದಿದ್ದರು, ಅಂತಹ ೆಲಸಗಳಿಂದ ಪುಣ್ಯ ಲಭಿಸುತ್ತದೆ. ಹಾಗೂ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ನಮ್ಮ ೂರ್ವಜರಲ್ಲಿ ಇತ್ತು. ಕಾಲಾನಂತರ ಇಂತಹ ದಾನಗಳು ಅನ್ಯರಿಂದ ಅಪಹರಿಸಲ್ಪಡುತ್ತಿದ್ದರಿಂದ ಇದನ್ನು ಗಮನಿಸಿದ ರಾಜರು ಕೊಟ್ಟಂತಹ ದಾನಗಳನ್ನು ಶಾಸನಗಳಲ್ಲಿ ದಾಖಲಿಸಲಾರಂಭಿಸಿದರು. ನಂತರ ಾನ ನೀಡಿದ ಜನರು ತಮ್ಮ ಹೆಸರು ಉಳಿಯಲಿ ಎಂಬ ಕಾರಣಗಳಿಂದ ತಾವುಗಳು ದಾನಶಾಸನಗಳನ್ನು ಾಕಿಸಲು ಪ್ರಾರಂಭಿಸಿದರು. ಇದರ ಫಲವಾಗಿ ದಾನಶಾಸನಗಳು ಹೆಚ್ಚು ಹುಟ್ಟಿದವು. ಇಂತಹ ಾನಶಾಸನಗಳು ಮಸ್ಕಿಯಲ್ಲಿರುವುದನ್ನು ಕಾಣಬಹುದಾಗಿದೆ.

**ಮಸ್ಕಿ ಪರಿಸರದ ಶಾಸನಗಳ ವಿವರ (ಪ್ರಕಟಿತ ಶಾಸನಗಳು)**

| | |
|---|---|
| ಶಾಸನ | : ಮಸ್ಕಿ ಶಾಸನ |
| ಸ್ಥಳ | : ಮಸ್ಕಿ |
| ಶಾಸನ ನಿವೇಶನ | : ಊರಿನಿಂದ ಪಶ್ಚಿಮಕ್ಕೆ ಸು.೨ ಕಿ.ಮೀ. ಅಂತರದಲ್ಲಿ ಗುಡ್ಡಕ್ಕೆ ಹೊಂದಿಕೊಂಡಂತೆ. |
| ಹೊರಡಿಸಿದವರು | : ಅಶೋಕ, ಮೌರ್ಯರ ದೊರೆ |
| ಕಾಲ | : ಕ್ರಿ.ಪೂ. ಸು. ೨೭೨-೨೩೨ |
| ಭಾಷೆ | : ಪ್ರಾಕೃತ |
| ಲಿಪಿ | : ಬ್ರಾಹ್ಮಿ |

ಶೋಧಕ : ಸಿ.ಬೀಡ(ಬಿಡನ್)

ಕಾಲ, ಶಾಸನ ಶೋಧನೆ : ಜನೆವರಿ ೧೯೧೫

ಓದಿದವರು : ಜೇಮ್ಸ್ ಪ್ರಿನ್ಸೆಪ್

ಶಾಸನದ ಪಾಠ : ಶಾಸನದಲ್ಲಿ ಒಟ್ಟು (೮) ಎಂಟು ಸಾಲುಗಳಿವೆ.

ಸಂರಕ್ಷಣೆ : ಕೇಂದ್ರ ಪುರಾತತ್ವ ಇಲಾಖೆ

ಕೆಲವು ಅಕ್ಷರಗಳು ಅಳಿದು ಹೋಗಿವೆ. ಸೀತಾರಾಮ ಜಾಗಿದಾರ ತಮ್ಮ ಲೇಖನದಲ್ಲಿ ತಿಳಿಸಿರುವಂತೆ[೭]

೧. ದೇವಾನಂ ಪಿಯಾಸ ಅಶೋಕಸ -------

೨. ------- ನಿ ವಸಾನಿ ಅಂ ಸುಮಿ ಬುಧ ಶಕೆ -----ತಿರೆ---

೩. ------- ಮಿ ಸಂಘಂ ಉಪಗತೇ------ ಪುರೇ---- ಪುರೇ ಒಂಟು

೪. -----ಸಿಯೇ ಅಮಿಸಾ ದೇವಾಹುಸು ತೇ ದಾನಿಮಿಸಿ ಭೂತಾ ಇಯ ಅಠೇಬುದ

೫. ಕೇನಪಿ ಧರ್ಮಯುತ್ತೇನ ಸಕೇ ಅಧಿಗತವೇ ನ ಹೇವಂ-------

೬. ಲಕೇಚ್ ಇಮೇ ಅಧಿಗಭಯಾ ತಿ-------- ----

೭. ವಿಯಾ ಹೇವಂ ಚೇ ಕಲಂ ತಾಂ ಭದಕ್ಕೇ ಸೇ-------

೮. ಸಿತಿ ಚಾ ದಿಯಘಿಯಂ ಹೇ ಮ ---------

ಶಾಸನ ಪಾಠದ ಅರ್ಥ

ಹಿರಿಯ ವಿದ್ವಾಂಸರಾದ ಎಚ್. ಎಸ್. ರಿತ್ತಿ ಅವರು ಮಾಡಿರುವ ಭಾವಾನುವಾದವನ್ನು ಈ ರೀತಿಯಾಗಿ ನೋಡಬಹುದಾಗಿದೆ.

ಈಗ ಎರಡೂವರೆ ವರ್ಷಗಳಿಂದ ನಾನು ಬುದ್ಧನ ಅನುಯಾಯಿಯಾಗಿದ್ದೇನೆ. ಈ ಗೊಂದು ವರ್ಷದಿಂದ ಸಂಘವನ್ನು ಸೇರಿ ಹೆಚ್ಚು ಶ್ರಮಿಸುತ್ತಿದ್ದೇನೆ. ಜಂಟು ದ್ವೀಪದಲ್ಲಿ ಹಿಂದೆ ಸಮ್ಮಿಲತರಾಗಿರದದಿದ್ದ ದೇವತೆಗಳು ಇದೀಗ ಜನರೊಂದಿಗೆ ಸಮ್ಮಿಲಿತರಾಗಿದ್ದಾರೆ. ಇದನ್ನು ಧರ್ಮಯುತವಾದ ಬಡವನೂ ಸಾಧಿಸಬಹುದು. ಬಲ್ಲಿದನೇ ಇದನ್ನು ಸಾಧಿಸಬಲ್ಲ ಎಂದೇನಲ್ಲ---.

**ಶಾಸನ ನಿವೇಶನದ ಸ್ವರೂಪ :-**

ಈ ಶಾಸನವು ಮಸ್ಕಿಯಿಂದ ಮುದಗಲ್ಲ ಕಡೆಯ ರಸ್ತೆಯಲ್ಲಿ ಸುಮಾರು ೨ ಕಿ.ಮೀ ಅಂತರದಲ್ಲಿ ಪಶ್ಚಿಮ ದಿಕ್ಕಿನಲ್ಲಿ ದೊಡ್ಡ ಬಂಡೆಯ ಮೇಲೆ ಬರೆಯಲಾಗಿದೆ. ಶಾಸನದ ಬಂಡೆಯೂ ಗುಡ್ಡವೊಂದರಲ್ಲಿದ್ದ ನೆಲ ಹಂತದಿಂದ ತುಸು ಎತ್ತರದಲ್ಲಿದೆ. ಶಾಸನದ ಬಂಡೆಗೆ ಒಂದು ಹೆಬ್ಬಂಡೆಯು ತುಸು ದೂರದಿಂದಲೇ ಮೇಲಿನಿಂದ ಬಾಗಿ ಆತುಕೊಂಡಿದೆ. ಆ ಹೆಬ್ಬಂಡೆಯ ಕೆಳಗೆ, ಶಾಸನದ

ಮುಂದೆ ಸುಮಾರು ಜಾಗವಿದೆ. ಶಾಸನ ಬಂಡೆಗೆ ತಂತಿಯ ಜಾಲರಿಯನ್ನು ಕಟ್ಟಿ ಯಾರು ಅದನ್ನು ಮುಟ್ಟವುದನ್ನು ತಡೆಯಲಾಗಿದೆ. ಇದರ ಮುಂದೇ ಆಲದ ಮರವೊಂದಿದ್ದು ವಾತವರಣ ತಂಪಾಗಿರುವಂತೆ ಮಾಡಿದೆ.ದೊರೆತ ಅಶೋಕನ ಅನೇಕ ಶಾಸನಗಳಲ್ಲಿ 'ಮಸ್ಕಿ ಶಾಸನವು' ಒಂದಾಗಿದೆ. ಮಸ್ಕಿ ಶಾಸನ ಅಶೋಕನ ಶಾಸನ ಎಂದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಅಲ್ಲದೆ ಅಶೋಕನ ಶಾಸನಗಳಲ್ಲಿಯ ಅತ್ಯಂತ ಮುಖ್ಯವಾದುದು ಎಂದೆನಿಸಿಕೊಳ್ಳುತ್ತದೆ. ಭಾರತದ ಇತಿಹಾಸ ರಚನೆಗೆ ಅತ್ಯಂತ ಮಹತ್ವದ ಆಧಾರವೊಂದನ್ನು ಒದಗಿಸಿಕೊಡುವುದರಿಂದ ಇದು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ೧೯ನೇ ಶತಮಾನದಲ್ಲಿ ಭಾರತದ ಇತಿಹಾಸ ರಚನೆ, ಅಧ್ಯಯನ, ಸಂಶೋಧನೆ ಮೊದಲಾದವುಗಳಲ್ಲಿ ಪಾಶ್ಚಾತ್ಯರು ವಿಶೇಷವಾಗಿ ತೊಡಗಿಕೊಂಡಿದ್ದರು. ಭಾರತದ ಇತಿಹಾಸದಲ್ಲಿ ಕ್ರಿಪೂ. ಕಾಲದಲ್ಲಿ ಆಗಿ ಹೋದ ಸಾಮ್ರಾಜ್ಯಗಳಲ್ಲಿ ಮೌರ್ಯ ಸಾಮ್ರಾಜ್ಯವು ಒಂದು ಚಂದ್ರಗುಪ್ತ ಮೊದಲಾದವರು ಮೌರ್ಯ ದೊರೆಗಳು ಎಂಬ ಅಂಶಗಳು ಇತಿಹಾಸಕಾರರಿಗೆ ತಿಳಿದಿತ್ತು. ಆದರೆ ಅಶೋಕನು ಮೌರ್ಯ ದೊರೆ ಎಂದು ಪರಿಗಣಿಸುವ ಯಾವುದೇ ಅವಕಾಶಗಳು ಇರಲಿಲ್ಲ. ಕಾವ್ಯ, ಪುರಾಣಗಳು, ಬೌದ್ಧಧರ್ಮದ ಕೃತಿಗಳಲ್ಲಿ ದೊರೆಯುತ್ತಿದ್ದ ಅಶೋಕನು ಐತಿಹಾಸಿಕ ವ್ಯಕ್ತಿಯಾಗಿ ಕಾಣುವುದಕ್ಕಿಂತ ಬರಿ ಪೌರಾಣಿಕ ವ್ಯಕ್ತಿ ಆಗಿ ಕಾಣುತ್ತಿದ್ದ. ಕಾರಣವೆಂದರೆ ಧಾರ್ಮಿಕ ಕೃತಿ ಮೊದಲಾದವುಗಳಲ್ಲಿ ಅಶೋಕನ ವ್ಯಕ್ತಿತ್ವ, ಆತನ ಸಾಧನೆ ಮೊದಲಾದವುಗಳ ಬಗೆ ಸಾಕಷ್ಟು ಮಾಹಿತಿ ದೊರೆಯುತ್ತಿತ್ತು. ಆದರೆ ಅದಕ್ಕೆ ಪೂರಕವಾಗಿ ಬೇರೆ ಆಧಾರಗಳು ಇರಲಿಲ್ಲ. ಹೀಗಾಗಿ ಅಶೋಕ ಎಂಬೊಬ್ಬ ವ್ಯಕ್ತಿಯ ಐತಿಹಾಸಿಕತೆ ಒಂದು ಪ್ರಶ್ನೆಯಾಗಿಯೆ ಉಳಿದಿತ್ತು.

ಮತ್ತೊಂದೆಡೆ ದೇವನಾಂಪ್ರಿಯ ಎಂಬ ಹೆಸರು ಇತಿಹಾಸಕಾರರಿಗೆ ಮತ್ತೆ ಮತ್ತೆ ಎದುರುಗೊಳ್ಳುತ್ತಿತ್ತು. ಅನೇಕ ಲೋಕ ಕಲ್ಯಾಣ ಕಾರ್ಯಗಳನ್ನು ಮಾಡಿದ್ದಿರಬಹುದಾದ ಒಬ್ಬ ವ್ಯಕ್ತಿಯ ಹೆಸರು ಅದಾಗಿತ್ತು. ಆ ಹೆಸರಿನ ಜೊತೆಗೆ ಈ ಬಗೆಯ ಅನೇಕ ಕಾರ್ಯಗಳು ಆಗಿದ್ದರ ದಾಖಲೆಗಳಾಗಿದ್ದವು ಆದರೆ ಯಾರು ಈ ದೇವನಾಂಪ್ರಿಯ? ಎಂಬುವುದು ಇದೊಂದು ಯಕ್ಷ ಪ್ರಶ್ನೆಯಾಗುಳಿದಿತ್ತು. ಇದರ ಬಗೆಗೆ ಅಂದಿನ ಅನೇಕ ವಿದ್ವಾಂಸರು ಸಾಕಷ್ಟು ಬಗೆಯ ಅಳವಡಿಸಿಕೊಂಡು ಒಂದು ವಿಶಾಲವಾದ ಸಾಮ್ರಾಜ್ಯವನ್ನು ದಕ್ಷವಾಗಿ ಆಳಬಹುದು(?) ಎಂಬ ನಿರ್ದೇಶನ ದೊರೆಯಿತು. (ಅಶೋಕನ ಯುದ್ಧ ವಿರೋಧಿ ನೀತಿಯೇ ಮೌರ್ಯ ಸಾಮ್ರಾಜ್ಯ ಅವನ ನಂತರ ಬಹುಬೇಗ ಪತನ ಹೊಂದಲು ಒಂದು ಮುಖ್ಯ ಕಾರಣ ಎಂಬುದರ ಕಡೆಗೆ ಗಮನ ಹರಿಸಬೇಕು) ವಿಶ್ವದ ಮಹಾನ್ ಸಾಮ್ರಾಟರ ಸಾಲಿನಲ್ಲಿ ಮುತ್ತಿನ ಮಣಿಯೊಂದು ತನ್ನ ಮೇಲೆ ಮುಚ್ಚಿಕೊಂಡಿದ್ದ ಬೂದಿಯನ್ನು ಕಳಚಿಕೊಂಡು ಪ್ರಕಾಶಿಸತೊಡಗಿತ್ತು. ಹೀಗೆ ಮಸ್ಕಿ ಶಾಸನ ಭಾರತದ ಇತಿಹಾಸಕ್ಕೆ ಅಷ್ಟ ಮಟ್ಟಿಗೆ ವಿಶ್ವ ಇತಿಹಾಸಕ್ಕೆ ಹಲವು ಬಗೆಯಲ್ಲಿ ಕಾಣಿಕೆಗಳನ್ನು ತಂದುಕೊಟ್ಟಿತು. ಈ ಕಾರಣದಿಂದಲೇ ಇದು ವಿಶ್ವ ಇತಿಹಾಸಜ್ಞರ ದೃಷ್ಟಿಯನ್ನು ತನ್ನತ್ತ ಸೆಳೆದುಕೊಳ್ಳುವುದು. ಭಾರತದ

ಸಂದರ್ಭದಲ್ಲಿಯಂತೂ ಇದೊಂದು ಅತ್ಯಂತ ಮಹತ್ವದ ಶಾಸನ. ಖ್ಯಾತ ಶಾಸನತಜ್ಞರಾದ ಬೆಂಗಳೂರಿನಿಂದ ಕೆ.ಆರ್.ಗಣೇಶ ಅವರು ೨೦೦೩ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಆಯೋಜಿಸಿದ್ದ ಶಾಸನ ಕಮ್ಮಟದಲ್ಲಿ ಭಾಗವಹಿಸಿ ಮಾತನಾಡುತ್ತಾ, ಒಂದು ಶಾಸನವು ದೇಶದ ಇತಿಹಾಸ ರಚನೆಗೆ ಎಂತಹಾ ಮಹತ್ವದ ಕಾಣಿಕೆಯನ್ನು ನೀಡಿದೆ ಎಂಬುವುದನ್ನು ಮುಖ್ಯವಾಗಿಟ್ಟುಕೊಂಡು ನೋಡಿದಾಗ ಮಸ್ಕಿ ಶಾಸನ ಸಂಶೋಧನೆಯು ಭಾರತದ ಶಾಸನ ಸಂಶೋಧನೆಯಲ್ಲಿ ಒಂದು ಮಹತ್ವದ ಮೈಲಗಲ್ಲು ಎಂದು ಮಸ್ಕಿ ಶಾಸನವನ್ನು ಬಣ್ಣಿಸಿದ್ದಾರೆ. ಅನೇಕ ಜನ ವಿದ್ವಾಂಸರು ಮಸ್ಕಿ ಶಾಸನವು ಇತಿಹಾಸಕ್ಕೆ ಕೊಟ್ಟ ಕೊಡುಗೆ ಮಹತ್ವದಾದುದೆಂದು ಮನಸಾರೆ ಬಣ್ಣಿಸಿದ್ದಾರೆ. ಮೇಲೆ ಚರ್ಚಿಸಿದಂತೆ ಮಸ್ಕಿ ಶಾಸನವು ಅಶೋಕನ ಹೆಸರನ್ನು ಅವನ ಬಿರುದು ದೇವನಾಂಪ್ರಿಯದೊಂದಿಗೆ ಉಲ್ಲೇಖಿಸುತ್ತದೆ. ಇದುವೆ ಅದರ ಮಹತ್ವಕ್ಕೆ ಕಾರಣವಾಗಿದೆ. ಅಶೋಕನ ಇನ್ನುಳಿದ ಶಾಸನಗಳಲ್ಲಿ ಈ ರೀತಿಯ ಉಲ್ಲೇಖ ದೊರೆಯದು. ಉದಾಹರಣಗೆ ಬ್ರಹ್ಮಗಿರಿ ಶಾಸನವು ಈ ರೀತಿ ಆರಂಭವಾಗುತ್ತದೆ. "ದೇವನಾಂ ಪಿಯೇ ಆಹಾ" ಅಂದರೆ ದೇವರಿಗೆ ಪ್ರಿಯನಾದವನೆಂದು ಹೇಳುತ್ತಾನೆ------'ಎಂದು. ಬಹುತೇಕ ಶಾಸನಗಳು ಇದೇ ರೀತಿಯಲ್ಲಿದ್ದು ಅಶೋಕನ ಹೆಸರನ್ನು ಉಲ್ಲೇಖಿಸುವುದಿಲ್ಲ. ಆದರೆ ಮಸ್ಕಿ ಶಾಸನದ ಆರಂಭ ಹೀಗೆ 'ದೇವನ ಪಿಯಸ ಅಶೋಕಸ ------'ಎಂದು. ಅಂದರೆ 'ದೇವನಾಂ ಪ್ರಿಯದ ಅಸೋಕನ ಹೀಗೆ ಹೇಳುತ್ತಾನೆ ಎಂದರ್ಥವಾಗುತ್ತದೆ. ನಂತರ ದೊರೆತ ಮಧ್ಯಪ್ರದೇಶದ ಗುರ್ಜರ್ರಾ ಶಾಸನವು ಮಸ್ಕಿ ಶಾಸನದಂತೆ ಅಶೋಕನ ಹೆಸರನ್ನು ಒಳಗೊಂಡಿದೆ. ಅಲ್ಲದೆ ಅವನ ಎಲ್ಲಾ ಬಿರುದುಗಳನ್ನು ಇದು ಒಳಗೊಂಡಿದೆ.

ಮಸ್ಕಿ ಶಾಸನದ ಶೋಧನೆ ಒಂದು ಆಕಸ್ಮಿಕ. ೧೯೧೫ರಲ್ಲಿ ಸಿ. ಬಿಡನ್ ಎಂಬ ಎಂಜಿನಿಯರೊಬ್ಬರು ಇದನ್ನು ಆಕಸ್ಮಿಕವಾಗಿ ಕಂಡನು. ಆತನಿಗೆ ಇಲ್ಲಿ ಶಾಸನ ಇರಬಹುದು ಅಥವಾ ಇತರೆ ಯಾವುದೇ ಬಗೆಯ ಊಹೆಯೂ ಇರಲಿಲ್ಲ. ಮೇಲಾಗಿ ಶಾಸನ ಅಥವಾ ಇತಿಹಾಸ ಮೊದಲಾದ ಶಿಸ್ತುಗಳ ಓದು ಅಥವಾ ತರಬೇತಿಯು ಆತನಿಗಿರಲಿಲ್ಲ. ಆತನೊಬ್ಬ ಎಂಜಿನಿಯರು. ಆತನು ಆಕಸ್ಮಕವಾಗಿ ಶಾಸನವನ್ನು ಕಂಡನು. ಅಶೋಕನ ಮಸ್ಕಿ ಶಾಸನವನ್ನು ಗೌಣ ಶಿಲಾಶಾಸನ ಅಥವಾ ಲಘು ಪ್ರಸ್ತರ ಶಾಸನ ಗುಂಪಿನಲ್ಲಿ ಪರಿಗಣಿಸುತ್ತಾರೆ.[೮]

ಸಂಖ್ಯೆ : ೦೨

ಸ್ಥಳ : ಪ್ರವಾಸಿ ಮಂದಿರ ಆವರಣದಲ್ಲಿ ಕಲ್ಲಿನ ಮೇಲೆ

ಕಾಲಮಾನ : ೯-೧-೧೦೩೬

ಪ್ರಮಾಣ : ------

ಪ್ರಕಟಣೆ : *A.R.No.B 248. of 1953- 54; I.K 4 No.101*

ಶಾಸನ ಪಾಠದ ಸಾರಾಂಶ : ಜಗದೇಕಮಲ್ಲನು ಪೊಟ್ಟಳ ಕೆರೆಯ ನೆಲವಿಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಇವನ ಮಹಾಸಾಮಾನ್ಯ ಚಿಕ್ಕರೇಚಯ್ಯನ ಕೋರಿಕೆಯಂತೆ ರಾಜಧಾನಿ ಪಿರಿಯ ಮೋಸಂಗಿಯ ಬಳಿ ಚಕ್ರಿ ಭಟ್ಟೋಪಾಧ್ಯಯನಿಗೆ ಸರ್ವನಮಸ್ಯವಾಗಿ ದಾನ ಬಿಡಲಾಗಿದೆ. ಚಕ್ರಿ ಭಟ್ಟೋಪಾಧ್ಯಾನ ತಂದೆ ದಾಮೋದರ ಭಟ್ಟೋಪಾಧ್ಯಾಯನೆಂದು, ತಾತನು ಚಾಳುಕ್ಯ ರಾಜ್ಯ ಮೂಲಸ್ತಂಭ ಹೆಗ್ಗಡೆ ಮಲಿಮಯ್ಯನೆಂದು ಶಾಸನದಿಂದ ತಿಳಿದುಬರುತ್ತದೆ. ದಾನವನ್ನು ಪಡಿಹಾರ ಕಾಳಿದಾಸನ ಅಣತೆಯಂತೆ ನೀಡಲಾಯಿತ್ತೆಂದು ತಿಳಿಸುತ್ತದೆ.[೯]

ಸಂಖ್ಯೆ : ೦೩

ಸ್ಥಳ : ಪ್ರವಾಸಿ ಮಂದಿರ ಆವರಣದ ಎರಡನೇ ಶಾಸನ

ಕಾಲಮಾನ : ಕ್ರಿ.ಶ. ೧೫/ ೧/ ೧೦೩೨

ಪ್ರಕಟಣೆ : *A.R.No.B 246 of 1953-54; I.K.4 No 99*

ಶಾಸನ ಪಾಠದ ಸಾರಾಂಶ : ಜಗದೇಕಮಲ್ಲನು ಸೂರ್ಯಗ್ರಹಣ ನಿಮಿತ್ತವಾಗಿ ಪಿರಿಯ ಮೋಸಂಗಿಯಲ್ಲಿ ಏಕಜಡೆಯ ದೇಗುಲಕ್ಕೆ ಕರಿಯ ಕಾಟಂಗಲ್ಲಿನ ಮೂಲ ಹೊಲದಲ್ಲಿ ೧೦ ಮತ್ತರು ಕರಿಯ ನೆಲವನ್ನು ದಾನ ನೀಡಿದ ಉಲ್ಲೇಖವಿದೆ.[೧೦]

ಸಂಖ್ಯೆ : ೦೪

ಸ್ಥಳ : ಪ್ರವಾಸಿ ಮಂದಿರದಲ್ಲಿನ ಮೂರನೆಯ ಶಾಸನ

ಕಾಲಮಾನ : ಕ್ರಿ.ಶ. ೧೦-೧೧-೧೦೧೦

ಪ್ರಕಟಣೆ : *H.A.S.Vol.14.No2; A.R.No.B 244 of 1953-54; I.K4 No-97*

ಶಾಸನ ಪಾಠದ ಸಾರಾಂಶ : ಚಾಲುಕ್ಯ ಅರಸ ಇಮ್ಮಡಿ ಜಯಸಿಂಹನ ಕಾಲದಲ್ಲಿ ರಾಜಧಾನಿ ಓರಿಯ ಮೊಸಂಗಿಯಲ್ಲಿದ್ದ ಅಹವಮಲ್ಲನ ಚಟ್ಟನಾದ ಕರಿಯಾಯ್ಚಯ್ಯ ಎಂಬುವವನಿಗೆ ನೂರು ಮತ್ತರು ಭೂಮಿಯನ್ನು ಜಯಸಿಂಹನು ದಾನ ನೀಡುತ್ತಾನೆ. ಜಯಸಿಂಹನಿಗೆ ಕುಮಾರ ಗಜಕೇಸರಿ, ಕೀರ್ತಿವಿದ್ಯಾಧರ, ಗಂಡರಗಂಡ, ಸತ್ಯರತ್ನಾಕರ ಮುಂತಾದ ವಿಶೇಷಣಗಳಿದ್ದವು. ಪಿರಿಯ ಮೊಸಂಗಿಯ ಮಾಣಿ ಕೇಶವ ಎಂಬುವವನು ತನ್ನ ದಶವಂದರಲ್ಲಿ ೧೦ ಮತ್ತರು ಹೊಲವನ್ನು ದಾನ ನೀಡಿದ. ಈ ಶಾಸನವನ್ನು "ಕಾಟ್ಟಜ" ಎಂಬುವವನು ಬರೆದ.[೧೧]

ಸಂಖ್ಯೆ : ೦೫

ಸ್ಥಳ : ಪ್ರವಾಸ ಮಂದಿರದಲ್ಲಿನ ಐದನೇ ಶಾಸನ

ಕಾಲಮಾನ : ಕ್ರಿಶ. ೧೮/ ೮/ ೧೦೧೮

ಪ್ರಕಟಣೆ : *A.R.No.B 245 of 1953-54, I.K4,No 98*

ಶಾಸನ ಪಾಠದ ಸಾರಾಂಶ : ಪಿರಿಯ ಮೊಸಂಗಿಯ ಪರದಾಸಿ ಉಪಸೆಟ್ಟಿಯ ಮಗ ಪೋತಿಸೆಟ್ಟಿಯು ಮೂಲಸ್ಥಾನ ದೇವಾಲಯದ ತಪೋಧನರಿಗೆ, ಬ್ರಾಹ್ಮಣರ ಛತ್ರಕ್ಕೆಂದು ಮೂವತ್ತೈದು ಮತ್ತರು ಭೂಮಿಯನ್ನು ಕೊಂಡುಪಂಪಯ್ಯ, ಮೊಸಂಗಿಯ ಊರಿನ ಒಡೆಯ ಬೆಣ್ಣಯ್ಯ ಮತ್ತು ಪಂಪಯ್ಯ ತಮ್ಮ ಕಿರಿಯ ಬೆಟ್ಟಯ್ಯ ಈ ಮೂವರಿಗೆ ದಾನ ಬಿಟ್ಟ ವಿವರ ಈ ಶಾಸನದಲ್ಲಿದೆ.

ಸಂಖ್ಯೆ : ೦೬

ಸ್ಥಳ : ಪ್ರವಾಸಿ ಮಂದಿರದಲ್ಲಿನ ಆರನೆಯ ಶಾಸನ

ಕಾಲಮಾನ : ಉಲ್ಲೇಖವಾಗಿಲ್ಲ

ಶಾಸನ ಪಾಠದ ಸಾರಾಂಶ : ಈ ಶಾಸನದಲ್ಲಿ ಒಂದು ಬಾವಿಯನ್ನು ಕಾಟಿಗಲ್ಲಿನಲ್ಲಿ ಕಟ್ಟಿಸಿದ್ದರ ಉಲ್ಲೇಖವಿದೆ. ಈ ಬಾವಿಯನ್ನು ಶಾಂತರಸ ಎಂಬ ವ್ಯಕ್ತಿ ನಿರ್ಮಿಸಿದ್ದು ಇದು ಅದ್ಭುತ ಕಲಾ ರಚನೆಯಾಗಿ ನಿಂತಿದ್ದು, ಅದಕ್ಕೆ ಹೆಚ್ಚು ಪ್ರಮುಖ್ಯತೆ ಇದೆ ಎಂದು ಬರೆದಿದ್ದು ಮತ್ತು ಇದೆಲ್ಲವನ್ನು ಬರೆಯುವ ಚಿಕ್ಕ ಶಾಸನ ತನ್ನ ವಸ್ತುವಿನಿಂದಾಗಿ ಮಹತ್ವವನ್ನು ಪಡೆದುಕೊಂಡಿದೆ. ಇಲ್ಲಿ ಒಂದೆರಡು ಸಾಲುಗಳನ್ನು ಕೊಡಲಾಗಿದೆ. 'ಸುರನದಿಗೆಣೆಯೆನಿಸುವ, ಪುಕ್ಕರಣೆಯನ ಕಿಳೋರ್ಬಗೆಸೆವ ಕಾಟಂಗಲ್ಲೊಳ್ ಪರಹಿತ ವಿನೋದನಾಶ್ರಿತ ಸುರತರು ಸ್ತಾನರಸನತಿಸಯಂ ಕಟ್ಟಿಸಿದಂ, ಸುರನದಿ ಕಾಟಂಗಲ್ಲಿಂಗಿರದವತರಿಸಿರುಪಾದಕಿಳ ತೀರ್ತ್ತಂಗಳು ಬಂದಿರದೆ ನೆಲಸಿತಾವೆನೆ ಸಾನ್ತರಸಂ ಕಟ್ಟಿಸಿದ ಬಾವಿ ಕಣ್ಣೆಸದಿರ್ಕುಂ, ದರೆಯಾಳಗೀ ದರ್ಕ್ಮಮನುದ್ದರಿಸುವರಾರೆಂದು ನೋರ್ಪ್ಪ ನೋಟಕ ಜನಕಚ್ಚರಿಯನ ಕಟ್ಟಿಸಿದಂ ಸಾನ್ತರಸಂ ಬಾವಿಯನಪೂರ್ವ್ವ ರಚನೋಕ್ತಿಗಳೊಂ'. (ಸುರನದಿಗೆ ಸಮ ಎಂದೆನಿಸುವ ಪುಷ್ಕರಣಿಯನ್ನು ಅಖಿಲ ಭೂಮಂಡಲದಲ್ಲಿ ಪ್ರಸಿದ್ಧವಾದ ಕಾಟಿಗಲ್ಲಿನಲ್ಲಿ ಪರರ ಸುಖದಲ್ಲಿ ಸುಖವನ್ನು ಕಾಣುವವನು ಆಶ್ರಯ ಬಯಸಿ ಬಂದವರಿಗೆ ಕಲ್ಪತರುವಿನಂತವನು ಆದ ಸಾಂತರಸನು ಅತಿಶಯನು ಕಟ್ಟಿಸಿದನು. ಸುರನದಿಯು ಕಾಟಿಗಲ್ಲಿಗೆ ತಡಮಾಡದೆ ಅವತರಿಸಿರುವುದು, ಎಲ್ಲಾ ತೀರ್ಥಗಳು ಬಂದು ನೆಲೆನಿಂತವು ಎನ್ನಲು ಸಾಂತರಸನು ಕಟ್ಟಿಸಿದ ಬಾವಿಯು ಕಣ್ಣಿಗೆ ಹೊಡೆಯುತ್ತದೆ. ಧರಿಯಲ್ಲಿ ಈ ಧರ್ಮವನ್ನು ಉದ್ಧರಿಸುವವರು ಯಾರು ಎಂದು ನೋಡುವ ಜನರಿಗೆ ಆಶ್ಚರಿಯಾಗುವಂತೆ ಕಟ್ಟಿಸಿದನು ಸಾಂತರಸನು ಬಾವಿಯನ್ನು ಅಪರೂಪವಾದ ರಚನೆಯಿಂದ) ಹೀಗೆ ಶಾಸನ ಪಠ್ಯ ಸುಂದರವಾಗಿದೆ. ಬಾವಿಯ ರಚನೆ, ಹಿರಿತನ ಸೌಂದರ್ಯ, ಅದರ

ಮಹತ್ವ, ಪಾವಿತ್ರ್ಯ ಮತ್ತು ಕಟ್ಟಿಸಿದ ವ್ಯಕ್ತಿಯ ಗುಣ. ಹಿರಿತನ ಅದರೊಂದಿಗೆ ಆ ಬಾವಿಯನ್ನು ಹೊಂದಿದ ಕಾಟಿಗಲ್ಲಿನ ಮಹತ್ವ ಈ ಎಲ್ಲವನ್ನು ಈ ಚಿಕ್ಕ ಶಾಸನವು ಸುಂದರವಾಗಿ ಕಟ್ಟಿಕೊಟ್ಟಿದೆ.[೧೨]

ಸಂಖ್ಯೆ : ೦೭

ಸ್ಥಳ : ಪ್ರವಾಸಿ ಮಂದಿರದಲ್ಲಿನ ೭ನೇ ಶಾಸನ

ಕಾಲಮಾನ : ಕ್ರಿ.ಶ ೫/೧೦/೧೫೩೭

ಶಾಸನ ಪಾಠದ ಸಾರಾಂಶ : ವಿಜಯನಗರದ ಅರಸ ಅಚ್ಯುತರಾಯನು ಆಳುತ್ತಿರಲು ಗುಜ್ಜಲ ಇಮ್ಮಡಿ ಮೇದಿನಿರಾಯನು ತನ್ನ ಕೈ ಕೆಳಗಿನ ಮೊಸಗಿಯ ಮೂಲಸ್ಥಾನ ದೇವರಾದ ಮಲ್ಲಿಕಾರ್ಜುನನಿಗೆ ಭೂ ದಾನ ಕೊಟ್ಟ ವಿಷಯವನ್ನು ತಿಳಿಸುತದೆ. ಯೆರೆಯಹೆಲನ ಗ್ರಾಮದಲ್ಲಿ ಇಕ್ಕುಳ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಶಾಸನದ ಭಾಷೆ ಅಶುದ್ಧವಾಗಿದೆ. ಮೊಸಗೆಯನ್ನು ಗುಜ್ಜಲ ಮೇದಿನಿರಾಯನಿಗೆ ಅಮರನಾಯಕತನಕ್ಕೆ ವಿಜಯನಗರದ ಅರಸರು ಕೊಟ್ಟಿದ್ದು ಎಂದು ತಿಳಿಸುತ್ತದೆ.[೧೩]

ಸಂಖ್ಯೆ : ೦೮

ಸ್ಥಳ : ಪ್ರವಾಸಿ ಮಂದಿರದ ಹತ್ತನೆಯ ಶಾಸನ

ಕಾಲಮಾನ : ಕ್ರಿ.ಶ ೫/೧೦/೧೫೩೭

ರಾಜವಂಶ : ವಿಜಯನಗರ

ಪ್ರಕಟಣೆ : *APGAS.Vol 9,No,10;I.K 4 No.112*

ಶಾಸನ ಪಾಠದ ಸಾರಾಂಶ : ಶಾಸನೋಕ್ತ ಕಾಲವು ಹೇಮಳಂಬಿ, ಕಾರ್ತಿಕ, ಶು.೧ ಎಂದಿದ್ದು ಇದು ಕ್ರಿ.ಶ. ೫-೧೦-೧೫೩೭ಕ್ಕೆ ಸರಿ ಹೊಂದುತ್ತದೆ. ವಿಜಯನಗರ ಸಾಮ್ರಾಜ್ಯವನ್ನು ಅಚ್ಯುತರಾಯನು ಆಳುತ್ತಿದ್ದಾಗ ಗುಜ್ಜಲ ಇಮ್ಮಡಿ ಮೇದಿನಿರಾಯನು ತಮ್ಮ ಆಳ್ವಿಕೆಯ ಮೊಸಗೆಗೆ ಸೇರಿದ ಹಲವು ಗ್ರಾಮಗಳನ್ನು ಹಂಪಿಯಲ್ಲಿದ್ದ ರುದ್ರಪಾದ ಮಠಪತಿ ಒಡೆಯರಿಗೆ ದಾನವಾಗಿ ಕೊಟ್ಟ ವಿವರವಿದೆ. ಮೊಸಗೆಯ ಸೀಮೆಗೆ ಸೇರಿದ ಅಂಬಟಿಗುಡ್ಡದಲ್ಲಿ ೪೬, ಗೋನಹಾಳದಲ್ಲಿ ೮೧, ಸಿದುದಾವುದರಲ್ಲಿ ೮೧, ಪರುವಾಪುರದಲ್ಲಿ ೮೧ ಇಷ್ಟನ್ನು ದಾನವಾಗಿ ಕೊಡುತ್ತಾನೆ. ಶಾಸನದ ಕೊನೆಯಲ್ಲಿ "ವಿರುಪಾಕ್ಷದೇವರಿಗೆ" ಪುಣ್ಯವಾಗಲಿ ಎಂದು ಕೊಟ್ಟ ಭೂದಾನದ ಶಾಸನವೆಂದು ಹೇಳಿದೆ.[೧೪]

ಸಂಖ್ಯೆ : ೦೯

ಸ್ಥಳ : ಈಗ ಹೈದ್ರಬಾದ್ ರಾಜ್ಯ ಪುರಾತತ್ವ ವಸ್ತುಸಂಗ್ರಾಲಯಲ್ಲಿರುವ ಶಾಸನ

ಕಾಲಮಾನ : ಕ್ರಿಶ ೨೪/೧೨/೧೦೨೭

ರಾಜವಂಶ : ಕಲ್ಯಾಣ ಚಾಲುಕ್ಯ (ಜಗದೇಕಮಲ್ಲ)

ಪ್ರಕಟಣೆ : *H.A.S.No 14.NO.3J I.K 4.No.109*

ಶಾಸನ ಸಾಠದ ಸಾರಾಂಶ : ಚಾಲುಕ್ಯ ಅರಸ ಜಗದೇಕಮಲ್ಲನ ಕಾಲದಲ್ಲಿ ಅವನ ಮಗಳು ಸಹಜ ವೆಡಂಗಿಯಾದ ಸೋಮಲದೇವಿಯು ಪುಲಿಪೊದರಿ ನೆಲೆವಿಡಿನಲ್ಲಿದ್ದಾಗ ತಂಬಿವಟ್ಟ ಬೆಸವೋಜ ಎಂಬುವವನ ಬಿನ್ನಪದಂತೆ ಬೆಸವೋಜನು ಕಟ್ಟಿದ ಬಸದಿಯ ಬೋಗಕ್ಕೆ ಐವತ್ತು ಮತ್ತರು ಭೂಮಿ ಮತ್ತು ಅಕಡಿ ಮತ್ತರು ೫೦ ನ್ನು ಕೊಡಿಸುತ್ತಾಳೆ. ಇದಲ್ಲದೆ ದೀಪಕ್ಕೆ ಒಂದು ಗಾಣ, ಹೂವಿನ ತೋಟವೊಂದನ್ನು ದಾನ ನೀಡಲಾಗಿದೆ. ಬಸದಿಯನ್ನು ಸೋದೊರೆ ವಡಿಯರ ರೇವಣಯ್ಯ ಆಜ್ಞೆಯ ಮೇರೆಗೆ ಕಟ್ಟಿಸಿದಂತೆ ಹೇಳಲಾಗಿದೆ.[೧೫]

ಸಂಖ್ಯೆ : ೧೦

ಊರು : ಸುಂಕನೂರು

ಸ್ಥಳ : ಆಂಜನೇಯ ಗುಡಿಯ ಸಮೀಪದ ನಾರಾಯಣ ವಿಗ್ರಹದ ಪೀಠದಲ್ಲಿರುವ ಶಾಸನ

ಕಾಲಮಾನ : ಕ್ರಿ.ಶ. ೨೪/೧೨/೧೧೦೩

ರಾಜ : ಜಗದೇಕಮಲ್ಲ

ರಾಜವಂಶ : ಕಲ್ಯಾಣ ಚಾಲುಕ್ಯರು

ಪ್ರಕಟಣೆ : ಕ.ವಿ.ಶಾ.ಸಂ. ೨ ಪು. ೩೯೫

ಶಾಸನ ಪಾಠದ ಸಾರಾಂಶ : ಶಾಸನದಲ್ಲಿ ಕಾಲವು ಶಕವರ್ಷ ೯೪೬, ರುದಿರೋದ್ಗಾರಿ, ಉತ್ತರಾಯಣ ಸಂಕ್ರಾಂತಿ ಅಂದರೆ ಕ್ರಿ.ಶ ೨೪/೧೨/೧೦೨೩ ರ ಮಂಗಳವಾರಕ್ಕೆ ಸರಿಹೊಂದುತ್ತದೆ. ಪಿರಿಯಮೊಸಂಗಿಯ ನಾಡಪ್ಪಯ ದೇವರಿಗೆ ಕಡಂಬೂರ ಉತ್ತರಕ್ಕಿರುವ ಹೊಲದಲ್ಲಿ ಕರಿಯ ಭೂಮಿಯನ್ನು ಜಗದೇಕಮಲ್ಲನು ನೀಡಿದ ಉಲ್ಲೇಖವಿದೆ.[೧೬]

ಸಂಖ್ಯೆ : ೧೧

ಊರು : ಮಸ್ಕಿ

ಸ್ಥಳ : ಪ್ರವಾಸಿ ಮಂದಿರದ ಒಂಬತ್ತನೆಯ ಶಾಸನ

ಕಾಲ : ಕ್ರಿ.ಶ. ೨೭/೭/೧೪೪೭

ರಾಜವಂಶ : ವಿಜಯನಗರ ಅರಸರ

ಅರಸ : ಸದಾಶಿವರಾಯ

ಶಾಸನದ ಪ್ರಕಟಣೆ *: A.R.No.B 243 of 1953-54; APGAS.Vol 9.NO.12;I.K 4*

ಶಾಸನ ಪಾಠದ ಸಾರಾಂಶ : ಸದಾಶಿವರಾಯನು ಆಳುತ್ತಿರುವಾಗ ಅವನ ಕಾರ್ಯಕ್ಕೆ ಕರ್ತನಾದ ಅಳಿಯ ರಾಮರಾಜಯ್ಯದೇವ ಅರಸನು "ನಾಯಿಂದರ" ತಿಂಮ್ಮೋಜ, ಕೊಂಡೋಜ ಮತ್ತು ಭದ್ರೋಜರುಗಳ ಮನವಿಯ ಮೇರೆಗೆ ಮೊಸಗೆ ಸೀಮೆಗೆ ಸೇರುವ ಒಂದು ಗ್ರಾಮವನ್ನು ಆ ಕುಲದೇವರಿಗೆ ಅಂನು ಪಂನು ಮುಂತಾದ ತೆರಿಗೆಗಳನ್ನು ಬಿಟ್ಟ ವಿಷಯವಿದೆ.

**ಅಪ್ರಕಟಿತ ಶಾಸನಗಳು**

ಸಂಖ್ಯೆ : ೦೧

ಸ್ಥಳ : ಮಸ್ಕಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಹಿಂಭಾಗದ ಬಂಡೆಗಲ್ಲಿನಲ್ಲಿ

ರಾಜವಂಶ : ಚೋಳರು

ಕಾಲ : ಕ್ರಿ.ಶ ೧೧ನೇ ಶತಮಾನ

ಲಿಪಿ : ಸಂಸ್ಕೃತ

ಭಾಷೆ : ತಮಿಳು

ಶಾಸನದ ಪಾಠ :

೧. ರಾಜ ಶ್ರೀ ರಾ

೨. ಜನ್ಯ ಮಕುಟ ಶ್ರೇಣಿ

೩. ರತ್ನೇಘ ಶಾಸ

೪. ನಂ ಏತತ್ ರಾಚೇಂದ್ರ ಚೋಳ

೫. ಸ್ಯ ಪರಕೇಸ

೬. ರಿವರ್ಮನ

ಸನದಲ್ಲಿ ಕಂಡು ಬರುವ ಚಿತ್ರಗಳು :- ಎಡ ಬದಿಯಲ್ಲಿ ಎರಡು ಮೀನುಗಳು, ಧನಸ್ಸು, ಹುಲಿ, ಾಹ ಲಾಂಛನಗಳಿದ್ದು, ಇವುಗಳು ಕ್ರಮವಾಗಿ ಪಾಂಡ್ಯರು, ಚೋಳರು, ಕಲ್ಯಾಣ ಚಾಲುಕ್ಯ ಅರಸರ ಜಲಾಂಛನಗಳಾಗಿವೆ. ಬಲಬದಿಯಲ್ಲಿ ಏಳು ಸಾಲಿನ ತಮಿಳು ಗ್ರಂಥ ಲಿಪಿಯ ಸಂಸ್ಕೃತ ಷೆಯಲ್ಲಿರುವ ಶಾಸನವಾಗಿದೆ.

ಸನ ಪಾಠದ ಸಾರಾಂಶ :- ಇದು ಉತ್ತರ ಕರ್ನಾಟಕದಲ್ಲಿಯೇ ಪ್ರಥಮವಾಗಿ ಶೋಧಗೊಂಡ ೀಳ ಅರಸರ ಶಾಸನವಾಗಿದೆ. ಇಲ್ಲಿಯವರೆಗೆ ಚರಿತ್ರೆಯಲ್ಲಿ ಕಲ್ಯಾಣ ಚಾಲುಕ್ಯರನ್ನು ತಂಜಾವೂರಿನ ೀಳ ಅರಸನಾದ ಒಂದನೇ ರಾಜೇಂದ್ರವರ್ಮನು ಮೊಸಗೆ ಯುದ್ಧದಲ್ಲಿ (ಕ್ರಿ.ಶ.೧೦೧೯-೧೦೨೧) ೀಲಿಸಿದನೆಂದು ತಿಳಿದುಬರುತ್ತಿತ್ತು. ಈ ಶಾಸನದಿಂದ ಅಧಿಕೃತವಾಗಿ ಕಲ್ಯಾಣ ಚಾಲುಕ್ಯರ ಅರಸ ಮ್ಮಡಿ ಜಯಸಿಂಹ ಈ ಯುದ್ಧದಲ್ಲಿ ಪರಾಭವಗೊಂಡಿದ್ದಾನೆ ಎಂಬುವುದೇ ಜಿಜ್ಞಾಸೆಯಾಗಿದೆ. ೇಂದರೆ ಈ ಶಾಸನದಲ್ಲಿ ಕಲ್ಯಾಣ ಚಾಲುಕ್ಯರನ್ನು ಸೋಲಿಸಿದ ಯಾವುದೇ ಸುಳಿವು ನೀಡುವುದಿಲ್ಲ. ಿತ್ರೆಯಲ್ಲಿ ದಾಖಲಾದಂತೆ ಈ ಮೇಲಿನ ಅರಸುಮನೆತನಗಳು ಮೊಸಗೆ (ಇಂದಿನ ಮಸ್ಕಿ) ಯುದ್ಧದಲ್ಲಿ ಯಸಿದ ನಂತರ ಒಪ್ಪಂದ ಮಾಡಿಕೊಂಡು ಕೊನೆಗೆ ಚೋಳ ಅರಸ ಒಂದನೇ ರಾಜೇಂದ್ರವರ್ಮನು ಸನ ಹಾಕಿಸುವುದರೊಂದಿಗೆ ತನಗೆ "ಪರಕೇಸರಿವರ್ಮನ" ಎಂಬ ಬಿರುದು ಪಡೆದುಕೊಂಡಿರುವುದು ಿದುಬರುತ್ತದೆ.[೧೭]

| | |
|---|---|
| ಸಂಖ್ಯೆ | : ೦೨ |
| ಊರು | : ಮಸ್ಕಿ |
| ಸ್ಥಳ | : ಮುದಗಲ್ಲ ರಸ್ತೆಯ(ಕಾಳಿಕಾ ಕಾಮಿಲ್)ಬಾಬು ಎಂಬುವವರ ಕಟ್ಟೆಗೆ ಅಂಗಡಿ ಬಲಬದಿಯಲ್ಲಿ. |
| ಕಾಲ | : ಕ್ರಿ.ಶ. ಸು ೧೧-೧೨ನೇ ಶತಮಾನ |
| ಪ್ರಮಾಣ | : ------- |

ಶಾಸನ ಪಾಠದ ಸಾರಾಂಶ :- ಇದು ೧೭ ಸಾಲಿನ ಶಾಸನವಾಗಿದ್ದು ಅವುಗಳು ಅಸ್ಪಷ್ಟವಾಗಿ ಣಬರುತ್ತವೆ. ಲಿಪಿಗಳು ಕನ್ನಡ ಭಾಷೆಯಲ್ಲಿವೆ.[೧೮]

ಸಂಖ್ಯೆ : ೧೨

ಊರು : ಮಸ್ಕಿ

ಸ್ಥಳ : ಸರಕಾರಿ ಪ್ರಥಮದರ್ಜೆ ಕಾಲೇಜಿನ ಮುಂದಿನ ಜಾಲಿ ಗಿಡದ ಪೊದೆಯಲ್ಲಿ

ಕಾಲ : ಸು.ಕ್ರಿಶ ೧೧-೧೨ನೇ ಶತಮಾನ

ಪ್ರಮಾಣ : -----------

ಶಾಸನ ಪಾಠದ ಸಾರಾಂಶ : ಈ ಶಾಸನವು ಕೆತ್ತಲ್ಪಟ್ಟಿರುವಂತಹ ಶಿಲೆಯ ಆಧಾರದ ಮೇಲೆ ು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿರಬಹುದು ಎಂದು ತರ್ಕಿಸಲಾಗಿದೆ. ಶಾಸನಕ್ಕೆ ಸುವಂತ ಕಲ್ಲು ನಾಲ್ಕು ಮುಖದಿಂದ ಚೌಕಾಕಾರದಲ್ಲಿದ್ದು ನಾಲ್ಕು ಮುಖದಲ್ಲಿ ಜೈನ ಧರ್ಮಕ್ಕೆ ಬಂಧಿಸಿದಂತಹ ತೀರ್ಥಂಕರನು ಪದ್ಮಾಸನದಲ್ಲಿ ಕುಳಿತಿರುವಂತೆ ಕೆತ್ತಲಾಗಿದ್ದು ಇವನ ತಲೆಯ ಮೇಲೆ ುಕೊಡೆಯನ್ನು ಕಾಣುತ್ತೇವೆ. ಇದರ ಒಂದು ಭಾಗದಲ್ಲಿ ತೀರ್ಥಂಕರ ಶಿಲ್ಪದ ಕೆಳಗಡೆ ಭಾಗದಲ್ಲಿ ಸ್ಪಷ್ಟವಾದಂತ ಶಾಸನವನ್ನು ಕಾಣುತ್ತೇವೆ. ಇದರ ಪಠ್ಯದ ಹೆಚ್ಚಿನ ಅಧ್ಯಯನದ ಅವಶ್ಯಕತೆಯಿದೆ. ೊತೆಗೆ ಈ ಶಾಸನವನ್ನು ಸಂರಕ್ಷಿಸುವ ಅವಶ್ಯಕತೆಯಿದೆ. ಕಾರಣ ಮಸ್ಕಿಯಲ್ಲಿ ಇದ್ದವು ಎನ್ನನಾದ ರಡು ಬಸದಿಗಳು ಪ್ರಸ್ತುತ ಕಾಣಿಸಿಗುವುದಿಲ್ಲ.

**೨ ಸ್ಮಾರಕ ಶಿಲ್ಪಗಳು**

**ೀರಗಲ್ಲುಗಳು**

ಕರ್ನಾಟಕದ ಶಾಸನಗಳಲ್ಲಿ ದೊರೆಯುವಂತಹ ಮೂಲ ಸಾಮ್ರಾಗ್ರಿಗಳನ್ನು ವಿಭಿನ್ನವಾದ ದೃಷ್ಟಿಯಿಂದ ್ಲೇಷಿದ ಯಶಸ್ಸು ಸಂಶೋಧಕ ಎಂ.ಚಿದಾನಂದಮೂರ್ತಿಯವರಿಗೆ ಸಲ್ಲುತ್ತದೆ. ಇವರ 'ಕನ್ನಡ ಸನಗಳ ಸಾಂಸ್ಕೃತಿಕ ಅಧ್ಯಯನ'ದಲ್ಲಿ ಉಲ್ಲೇಖಿಸಿರುವ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದು ಚಿತ್ಯವೆಂದೆನಿಸುತ್ತದೆ. ರಾಜರು ಕಾಲದಿಂದ ಕಾಲಕ್ಕೆ ಆಡಳಿತ ನಡೆಸಿರುವುದಕ್ಕೆ ಇತಿಹಾಸವೆಂಬ ಭಾವನೆ ಹಳ ಪ್ರಚಲಿತವಾಗಿದೆ. ಜನತೆ ಬಾಳಿ ಬದುಕಿದ ರೀತಿ ಅನುಸರಿಸಿದ ಧರ್ಮ ಬೆಳೆಸಿದ ಕಲೆ ಅವರ ವನ ಸಮಸ್ಯೆಗಳು ಅವರ ಜೀವನದ ಮೌಲ್ಯಗಳನ್ನು ಇತ್ಯಾದಿಗಳ ವಿವರಣೆಗೆ ಆ ದೇಶ ಮತ್ತು ನತೆಯ ಇತಿಹಾಸ.[೯] ಈ ರೀತಿಯ ಇತಿಹಾಸವನ್ನು ಒದಗಿಸುವಲ್ಲಿ ವೀರಗಲ್ಲುಗಳು ಬಹಳ ುಖ್ಯವಾದವು. ನಿಧನವಾದ ವ್ಯಕ್ತಿಯನ್ನು ಅಥವಾ ಸಂಸ್ಕಾರ ಮಾಡಿದ ನಿರ್ದಿಷ್ಟ ಸ್ಥಳದ ುರುತಿಗಾಗಿಯೋ, ಮಡಿದವರ ಸ್ಮರಣಾರ್ಥವಾಗಿಯೋ, ಕೆಲವಾರು ಸಂಕೇತಗಳನ್ನೋ, ುರುತುಗಳನ್ನೋ, ಒಂದು ನಿಗದಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ವು ಸಾಮನ್ಯವಾಗಿ ಆಯಾ ಪ್ರದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ ಪ್ರತಿಷ್ಠೆಗಳನ್ನು

ನುಸರಿಸಿಯೇ ಬೆಳೆದಿದೆ. ಪ್ರಪಂಚದಾದ್ಯಂತ ಇಂತಹ ಸ್ಥಳಗಳ ಮೇಲೆ ತಮ್ಮದೇ ಆದಂತಹ ಸ್ಮಾರಕಗಳನ್ನು ಕಟ್ಟಿರುವುದನ್ನು ಕಾಣಬಹುದು.[೨೦] ವೀರರು ತಮ್ಮ ಸ್ವಾರ್ಥಕ್ಕಾಗಿ ಮಡಿಯದೆ ಸಮಾಜದ ಒಳಿತಿಗಾಗಿ ಪ್ರಾಣತ್ಯಾಗ ಮಾಡಿದ್ದರಿಂದ ಇವರ ಸ್ಮರಣಾರ್ಥವಾಗಿ ಮಾಡಿರುವ ಸ್ಮಾರಕ ಶಿಲ್ಪಗಳೇ ವೀರಗಲ್ಲುಗಳು.[೨೧] ಅಂದರೆ ಇಚ್ಛಾ ಮರಣವನ್ನು ಆಹ್ವಾನಿಸಿದವರ ಗೌರವಾರ್ಥ ನೆಟ್ಟ ನಿಸಿಧಿಗಳ ಜೊತೆ ಜೊತೆಗೆ ರಣರಂಗದಲ್ಲಿ ಮಡಿದ ಯೋಧರ ವೀರಗಲ್ಲುಗಳೂ ಸೇರಿಕೊಳ್ಳತೊಡಗಿದವೆಂದರ್ಥ. ಯುದ್ಧವನ್ನು ತೀವ್ರವಾಗಿ ಪ್ರೀತಿಸಿ ಕೊನೆಯುಸಿರಿರುವವರೆಗೂ ಕಾದಾಡಿದ ಮಾನವಗಂಧ ಹಸ್ತಿಪಟ್ಟುಗನ, ಅರಿ ಸೈನ್ಯಕ್ಕೆ ಕಠೋರನಾದ ಬೋಯಿಗನ ಭಾಗಿಯೂರಿನಲ್ಲಿ ವೀರಮರಣ ಹೊಂದಿದ ಸಾವಿಯಬ್ಬೆಯ ವೀರಗಲ್ಲುಗಳು ಇದಕ್ಕೆ ನಿದರ್ಶನಗಳು.[೨೨] ಅವರು ಮಾಡಿದ ಹೋರಾಟ ಇಂದಿನ ತಮ್ಮ ದೃಷ್ಟಿಯಲ್ಲಿ ಏನಾದರೂ ಆಗಿರಲಿ, ಸಮಾಜದ ಒಳಿತಿಗಾಗಿ ಜೀವದ ಹಂಗನ್ನು ತೋರಿದ ಅವರ ಧೀಮಂತಿಕೆಯನ್ನು ನಿಷ್ಠೆ, ಸ್ವಾಮಿಭಕ್ತಿ, ಸ್ವಾಭಿಮಾನಗಳಿಂದ ಕೂಡಿದುದಾಗಿದೆ.

ಸಂಖ್ಯೆ : ೦೧
ಶಿಲ್ಪ : ಬಂದೂಕು ವೀರಗಲ್ಲು
ಊರು : ನಂಜಲದಿನ್ನಿ
ಸ್ಥಳ : ಹನುಮಾನಗೌಡರ ಮನೆಯ ಮುಂದೆ
ಪ್ರಮಾಣ : ೧೧೦ ಸೇ.ಮೀ * ೬೦ ಸೇ.ಮೀ
ಕಾಲಮಾನ : ಸು. ಕ್ರಿ.ಶ. ೧೭–೧೮ನೇ ಶತಮಾನ
ಅರಸುಮನೆತನ : ವಿಜಯನಗರೋತ್ತರ

ನಂಜಲದಿನ್ನಿ ಗ್ರಾಮದೊಳಗೆ ಇರುವ ಮುಖ್ಯ ದಾರಿಯಲ್ಲಿನ ಬಲಭಾಗದ ಹನುಮನಗೌಡರ ಮನೆಯ ಮುಂಭಾಗದಲ್ಲಿ ಈ ವೀರಗಲ್ಲು ಕಂಡುಬರುತ್ತದೆ. ಬಿಳಿ ಗ್ರಾನೈಟ್ ಕಲ್ಲಿನಿಂದ ನಿರ್ಮಿಸಿದ ಈ ವೀರಗಲ್ಲು ವಿಜಯನಗರೋತ್ತರ ಕಾಲ (ಮೆದಕಿನಾಳ ನಾಡಗೌಡ)ದಾಗಿದೆ ಎಂದು ಊಹಿಸಿದ್ದೇನೆ. ಇಲ್ಲಿ ರಾಜ ಪ್ರಮುಖನು ಕುದರೆಯ ಮೇಲೆ ಕುಳಿತಿದ್ದಾನೆ. ಅವನು ಪ್ರಮುಖ ಅಥವಾ ಮುಖಂಡ ಎಂದು ತಿಳಿಯಲು ಕಾರಣ ಅವನಿಗೆ ರಾಜಛತ್ರಿಯನ್ನು ಹಿಡಿದಿರುವುದು, ಈ ರಾಜನ ಒಂದು ಕೈನಲ್ಲಿ ಗುರಾಣಿ ಮತ್ತು ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಕಿವಿಯಲ್ಲಿ ಕರ್ಣಕುಂಡಲಗಳನ್ನು, ಕೊರಳಿನಲ್ಲಿ ವಿವಿಧ ಆಭರಣಗಳನ್ನು ಧರಿಸಿದ್ದು ತನ್ನ ಎಡಗಾಲನ್ನು ಕುದುರೆಗೆ ಹಾಕಿರುವ ರಿಕಾಪಿನ ಮೇಲೆ ಇಟ್ಟಿದ್ದಾನೆ.

ಇನ್ನು ಕುದುರೆಯ ಬೆನ್ನಿನ ಮೇಲೆ ಅಲಂಕಾರಿಕ ಜೀನನನ್ನು ಹಾಕಿದ್ದಾರೆ. ಕುದುರೆಯ ಬಾಯೊಳಗೆ ಕಬ್ಬಿಣದ ಕವಲುಗೋಲು ಇದ್ದು ಇದಕ್ಕೆ ಲಗಾಮ ತಗುಲಿಸಿದ್ದಾರೆ. ಕುದುರೆಯ

ಕಾಲುಗಳಿಗೆ ಆಭರಣ ತೊಡಿಸಿದ್ದಾರೆ. ಅದರ ಮುಂದಿನ ಎಡಕಾಲನ್ನು ಸ್ವಲ್ಪ ಮೇಲಕ್ಕೆ ಎತ್ತಿದ ರೀತಿಯಲ್ಲಿ ಕಂಡುಬರುತ್ತದೆ. ಕುದುರೆಯ ಹಿಂದಿನ ಸೈನಿಕನು ರಾಜ ಪ್ರಮುಖನಿಗೆ ರಾಜಛತ್ರಿಯನ್ನು ತನ್ನ ಎರಡು ಕೈಗಳಿಂದ ಹಿಡಿದಿದ್ದಾನೆ. ಇವನು ಕಿವಿಯಲ್ಲಿ ಕರ್ಣಕುಂಡಲ ಧರಿಸಿದ್ದಾನೆ. ಇವನ ಶಿರಮುಡಿಯನ್ನು ಕಟ್ಟಿದು ಅದು ಬಲಭಾಗಕ್ಕೆ ವಾಲಿದೆ. ಇನ್ನೂ ಕುದುರೆಯ ಮುಂದೆ ಮತ್ತೊಬ್ಬ ವೀರನನ್ನು ಕಾಣುತ್ತೇವೆ, ಇವನು ಸಹ ವಿವಿಧ ಆಭರಣಗಳನ್ನು ಧರಿಸಿದ್ದು ಶಿರಮುಡಿಯನ್ನು ಕಟ್ಟಿದ್ದು ಅದು ಎಡಭಾಗಕ್ಕೆ ವಾಲಿದಂತಿದೆ. ಕಿವಿಯಲ್ಲಿ ಕುಂಡಲಗಳನ್ನು, ಕೊರಳಿನಲ್ಲಿ ಆಭರಣಗಳನ್ನು ಧರಿಸಿದ್ದಾನೆ. ಇನ್ನು ಭುಜ ಮತ್ತು ಕೈಗಳಲ್ಲಿ ಸಹ ವಿವಿಧ ಆಭರಣಗಳಿವೆ. ತನ್ನ ಎಡಗೈನಲ್ಲಿ ಕಿರುಗತ್ತಿಯನ್ನು ಹಿಡಿದಿದ್ದು, ಬಲಗೈನಲ್ಲಿ "ಬಂದೂಕು" ಹಿಡಿದಿದ್ದಾನೆ. ವೀರನ ಸೊಂಟದಲ್ಲಿ ವಿವಿಧ ಪಟ್ಟಿಗಳನ್ನು ಮತ್ತು ವಸ್ತ್ರಗಳನ್ನು ಧರಿಸಿದ್ದಾನೆ ಅದರಲ್ಲಿ ಒಂದು ತುಂಡು ಬಟ್ಟೆ ಬಲಭಾಗಕ್ಕೆ ಬಂದಿದೆ. ಈ ರೀತಿಯ ಸೂಕ್ಷ್ಮ ಕೆತ್ತನೆಗಳಿಂದ ಇದೊಂದು ಅಪರೂಪದ ಬಂದೂಕು ವೀರಗಲ್ಲು ಎಂದು ಹೇಳಬಹುದಾಗಿದೆ.

ಸಂಖ್ಯೆ : ೦೨

ಶಿಲ್ಪ : ವೀರಗಲ್ಲು

ಊರು : ನಂಜಲದಿನ್ನಿ

ಸ್ಥಳ : ತಿಮ್ಮಣ್ಣ ತಲೆಖಾನ್ ಎಂಬುವರ ಮನೆಯ ಹಿಂಭಾಗದಲ್ಲಿ

ಕಾಲಮಾನ : ವಿಜಯನಗರೋತ್ತರ

ಈ ವೀರಗಲ್ಲಿನಲ್ಲಿ ವೀರನೊಬ್ಬನ ನಿಂತಿರುವ ಚಿತ್ರಣವಿದೆ. ವೀರನು ಶಿರಮುಡಿಯು ಎಡಭಾಗಕ್ಕೆ ವಾಲಿದೆ. ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದು, ಕೊರಳಿನಲ್ಲಿ ಸರವನ್ನು ಧರಿಸಿದ್ದಾನೆ ತನ್ನ ಎರಡು ಕೈಗಳಿಂದ "ಬಿಲ್ಲು"ನ್ನು ಹಿಡಿದಿದ್ದಾನೆ. ಇದು ವೀರನ ತಲೆಯ ಭಾಗದಿಂದ ಮೊಣಕಾಲಿನ ಭಾಗದವರೆಗಿದೆ. ಇನ್ನೂ ಸೊಂಟದಲ್ಲಿ ಪಟ್ಟಿಯನ್ನು ಧರಿಸಿದ್ದಾನೆ ಕಾಲಿನಲ್ಲಿ ಆಭರಣಗಳನ್ನು ಸಹ ಕಾಣುತ್ತೇವೆ.

ಸಂಖ್ಯೆ : ೦೩

ಶಿಲ್ಪ : ವೀರಗಲ್ಲು

ಊರು : ನಂಜಲದಿನ್ನಿ

ಸ್ಥಳ : ತಿಮ್ಮಣ್ಣ ತಲೆಖಾನ್ ಎಂಬುವರ ಮನೆಯ ಹಿಂಭಾಗದಲ್ಲಿ

ಕಾಲಮಾನ : ವಿಜಯನಗರೋತ್ತರ

ಈ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಇವನು ಕೊರಳಿನಲ್ಲಿ ವಿವಿಧ ಆಭರಣಗಳನ್ನು ಧರಿಸಿದ್ದಾನೆ. ಶಿರಮುಡಿಯನ್ನು ಎಡಭಾಗಕ್ಕೆ ಕಟ್ಟಿದ್ದಾನೆ. ಅದರ ಒಂದು ಭಾಗ ಬಲಭಾಗಕ್ಕೆ ಬಂದಿರುವುದನ್ನು ಕಾಣುತ್ತೇವೆ. ಸೊಂಟದಲ್ಲಿ ಸೊಂಟಪಟ್ಟಿ ಧರಿಸಿದ್ದಾನೆ. ತನ್ನ ಬಲಗಾಲನ್ನು ಕುದುರೆಗೆ ಹಾಕಲಾಗಿರುವ ರಿಕಾಪುನ ಮೇಲೆ ಇಟ್ಟಿದ್ದಾನೆ. ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದಿದ್ದಾನೆ ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಇನ್ನು ಕುದುರೆಯು ಹೆಚ್ಚು ಅಲಂಕಾರದಿಂದ ಕೂಡಿದೆ. ಇದರ ಹೊಟ್ಟೆಯ ಭಾಗ ಮುಚ್ಚಲು ಮತ್ತು ವೀರನು ಕುಳಿತುಕೊಳ್ಳಲು ಜೀನನ್ನು ಹಾಕಲಾಗಿದೆ. ಈ ಜೀನು ಅಲುಗಾಡದಂತಿರಲು ಒಂದು ಭಾಗದಿಂದ ಕುದುರೆಯ ಬಾಲದ ಕೆಳಗೆ ಹಾದುಬಂದ ಪಟ್ಟಿಯೊಂದಿದೆ. ಇದೇ ರೀತಿ ಕುದುರೆಯ ಕತ್ತಿನ ಕೆಳಗಿನಿಂದ ಮತ್ತೊಂದು ಪಟ್ಟಿಯನ್ನು ಕಟ್ಟಿದ್ದಾರೆ. ಕುದುರೆಯ ಬಾಯಿಯೊಳಗೆ ಕಬ್ಬಿಣದ ಕವಲುಗೋಲು ಇದೆ. ಇನ್ನು ಕುದುರೆಯ ಕತ್ತಿನ ಮೇಲ್ಭಾಗದ ಕೂದಲನ್ನು ಸಹ ಸುಂದರವಾಗಿ ನೆಟ್ಟಗೆ ನಿಮಿರುವಂತೆ ಕೆತ್ತಲಾಗಿದೆ. ಕುದುರೆಯ ಮುಂದಿನ ಎಡಗಾಲು ಸ್ವಲ್ಪ ಮೇಲಕ್ಕೆ ಎತ್ತಿದಂತೆ ಕೆತ್ತಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದೆಂದರೆ ಕುದುರೆ ಮೇಲೆ ಕುಳಿತ ವೀರನ ಹಿಂಭಾಗಲ್ಲಿ ಒಂದು ಹೂವಿನ ಕೆತ್ತನೆಯನ್ನು ಕಾಣುತ್ತೇವೆ. ನಂತರದಲ್ಲಿ ಕುದುರೆಯ ಹಿಂಭಾಗದಲ್ಲಿ ಒಬ್ಬ ಯೋಧ ಹಾಗೂ ಮುಂದುಗಡೆ ಮತ್ತೊಬ್ಬ ವೀರನ ಸಣ್ಣದಾದ ಶಿಲ್ಪಗಳನ್ನು ಕೆತ್ತಲಾಗಿದ್ದು ಇವು ಬಹುಶಃ ರಾಜಭಟರಾಗಿರಬಹುದು ಎಂದು ಹೇಳಬಹುದು.

| | |
|---|---|
| ಸಂಖ್ಯೆ | : ೪ |
| ಶಿಲ್ಪ | : ಬಂದೂಕು ವೀರಗಲ್ಲು |
| ಊರು | : ನಂಜಲದಿನ್ನಿ |
| ಸ್ಥಳ | : ತಿಮ್ಮಣ್ಣ ತಲೆಖಾನ್ ಎಂಬುವವರ ಮನೆಯ ಹಿಂಭಾಗದಲ್ಲಿ |
| ಕಾಲಮಾನ | : ವಿಜಯನಗರೋತ್ತರ |

ಈ ಒಂದು ವೀರಗಲ್ಲು ಹನುಮಾನಗೌಡರ ಮನೆಯ ಮುಂದಿನ ಬಂದೂಕು ವೀರಗಲ್ಲಿನ ಪ್ರತಿರೂಪದಂತೆ ಕಂಡುಬರುತ್ತದೆ. ಇಲ್ಲಿ ಅದಕ್ಕಿಂತಲೂ ಭಿನ್ನವಾದ ಅಂಶವೆಂದರೆ 'ರಾಜಛತ್ರಿ'ಯನ್ನು ಇಲ್ಲಿ ಕಾಣಲಾಗುವುದಿಲ್ಲ. ವೀರನು ಕುದುರೆಯ ಮೇಲೆ ಕುಳಿತಿದ್ದು ಒಂದು ಕೈಯಿಂದ ಕುದರೆಯ ಲಗಾಮು ಹಿಡಿದುಕೊಂಡಿರುವ ಹಾಗೆ ಮತ್ತೊಂದು ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಕುದುರೆಯ ಬೆನ್ನಿನ ಮೇಲೆ ಜೀನನು ಹೊಂದಿದ್ದು ಕೆಳಭಾಗದಲ್ಲಿನ ರಿಕಾಪುನಲ್ಲಿ ವೀರನ್ನು ತನ್ನ ಬಲಗಾಲನ್ನು ಇಟ್ಟಿದ್ದಾನೆ. ಜೀನಿನ ಒಂದು ಭಾಗ ಕುದುರೆಯ ಬಾಲದ ಹಿಂದಿನಿಂದ ಸುತ್ತುವರೆದು ಜೀನನ್ನು ಬಿಗಿಗೊಳಿಸಿದೆ. ಮತ್ತೊಂದು ಭಾಗ ಕತ್ತಿನ ಕೆಳಭಾಗದವರೆಗೆ ಸುತ್ತುವರೆದಿದೆ. ಕುದುರೆಯ

ಬಾಯಿಯೊಳಗೆ ಕಬ್ಬಿಣದ ಸರಳು ಇರುವುದನ್ನು ಕಾಣುತ್ತೇವೆ. ಈ ಕುದುರೆಯು ಬಲಭಾಗಕ್ಕೆ ಮುಖ ಮಾಡಿದೆ. ಕಾಲುಗಳಲ್ಲಿ ಕಡಗ ಧರಿಸಿದ್ದು ಇದರ ಬಾಲ ಮೊಣಕಾಲಿನವರೆಗೂ ಚಾಚಿರುವುದನ್ನು ವಿಶೇಷವಾಗಿ ಕಾಣುತ್ತೇವೆ. ಹಿಂದಿನ ಸೈನಿಕನು ತನ್ನ ಎಡಗೈನಲ್ಲಿ ಕಿರುಗತ್ತಿಯನ್ನು, ಬಲಗೈನಲ್ಲಿ ಅಸ್ಪಷ್ಟವಾದ ಬಂದೂಕನ್ನು ಹೋಲುವಂತ ಆಯುಧವಿದೆ. ಈ ವೀರನ್ನು ವೀರಮುಡಿಯನ್ನು ಕಟ್ಟಿದು ಅದು ಎಡಭಾಗಕ್ಕೆ ವಾಲಿದೆ ಕಿವಿಯಲ್ಲಿ ಕರ್ಣಕುಂಡಲ, ಕೊರಳಿನಲ್ಲಿ ಹಾರ ಮತ್ತು ಕಾಲಿನಲ್ಲಿ ಕಡಗವನ್ನು ಧರಿಸಿದ್ದಾನೆ. ಇನ್ನು ಮುಂದಿನ ಸೈನಿಕನ್ನು ಹಿಂದಿನ ಸೈನಿಕನ ಶೈಲಿಯನ್ನೇ ಹೋಲುತ್ತದೆ ಇವನು ಧರಿಸುವಂತಹ ಬಟ್ಟೆಯ ಅಲಂಕಾರ ಸುಂದರವಾಗಿದೆ. ಅದು ದೇಹದ ಹಿಂಭಾಗ ಮತ್ತು ಮುಂಭಾಗದಲ್ಲಿ ಬಂದಿರುವುದನ್ನು ಕಾಣಬಹುದು.

ಸಂಖ್ಯೆ : ೫
ಶಿಲ್ಪ : ವೀರಗಲ್ಲು
ಊರು : ನಂಜಲದಿನ್ನಿ
ಸ್ಥಳ : ತಿಮ್ಮಣ್ಣ ತಲೆಖಾನ ಎಂಬುವವರ ಮನೆಯ ಹಿಂಭಾಗದಲ್ಲಿ
ಕಾಲ : ವಿಜಯನಗರೋತ್ತರ

ಈ ವೀರಗಲ್ಲು ಮಾಸಿ ಹೋದ ಸ್ಥಿತಿಯಲ್ಲಿದ್ದು ಸೂಕ್ಷ್ಮ ಕೆತ್ತನೆಗಳನ್ನು ಗುರುತಿಸಲಾಗುವುದಿಲ್ಲ. ಆದರೂ ಸಹ ಇಲ್ಲಿ ವೀರನು "ಬಿಲ್ಲನು" ತನ್ನರೆಡು ಕೈಗಳಿಂದ ಹಿಡಿದಿರುವಂತೆ ಕೆತ್ತಲಾಗಿದೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಬಲಗೈನಲ್ಲಿ ಬಾಣ ಹೂಡಲು ಸಿದ್ಧನಾದಂತಿದೆ. ಶಿರದಲ್ಲಿ ಶಿರಮುಡಿ, ಕಿವಿಯಲ್ಲಿ ಕರ್ಣಕುಂಡಲಗಳು, ಕೊರಳಿನಲ್ಲಿ ಮತ್ತು ಸೊಂಟದಲ್ಲಿ ಆಭರಣಗಳಿದ್ದು, ವೀರಗಚ್ಚೆಯ ಪೋಷಾಕು ಇವನಿಗೆ ಇವೆ.

ಸಂಖ್ಯೆ : ೦೬
ಶಿಲ್ಪ : ವೀರಗಲ್ಲು
ಊರು : ನಂಜಲದಿನ್ನಿ
ಸ್ಥಳ : ದೇವಪುತ್ರಪ್ಪ ಬಪ್ಪೂರವರ ಮನೆಯ ಮುಂದಿನ ಕಟ್ಟೆಯಲ್ಲಿ
ಕಾಲ : ವಿಜಯನಗರೋತ್ತರ

ಈ ವೀರಗಲ್ಲುನಲ್ಲಿ ವೀರನ್ನು ತನ್ನ ಎಡಗೈನಲ್ಲಿ ಖಡ್ಗವನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಬಲಗೈಯನ್ನು ಸೊಂಟಕ್ಕೆ ತಂದು ನಿಂತಿದ್ದಾನೆ. ವೀರನು ಶಿರದಲ್ಲಿ ಶಿರಮುಡಿ, ಕರ್ಣಕುಂಡಲಗಳು ಕೊರಳಿನಲ್ಲಿ ಆಭರಣಗಳಿದ್ದು, ವೀರನು ವೀರಗಚ್ಚೆಯ ಪೋಷಾಕು ಧರಿಸಿದ್ದಾನೆ.

ಸಂಖ್ಯೆ : ೦೭

ಶಿಲ್ಪ : ವೀರಗಲ್ಲು

ಊರು : ಮಸ್ಕಿ

ಸ್ಥಳ : ನೀರ್ ಅಗಸಿಯ ಮುಂದಿನ ಕಟ್ಟೆಯ ಮೇಲೆ

ಕಾಲಮಾನ : ವಿಜಯನಗರೋತ್ತರ

ಈ ವೀರಗಲ್ಲುನಲ್ಲಿ ವೀರನನ್ನು ವಿಶಿಷ್ಟವಾಗಿ ಕೆತ್ತಲಾಗಿದೆ. ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದು ಕೊರಳಿನಲ್ಲಿ ತಾಯತವನ್ನು ಹೋಲುವ ಸರವನ್ನು ಧರಿಸಿದ್ದಾನೆ. ಕಣ್ಣುಗಳು ದೊಡ್ಡದಾಗಿದ್ದು ತೆರದ ರೀತಿಯಲ್ಲಿದ್ದು, ಮೀಸೆಗಳು ವೀರತನದಿಂದ ಕೂಡಿದ್ದು ಉಗ್ರರೂಪವನ್ನು ಪ್ರತಿನಿಧಿಸುವಂತಿವೆ. ಇನ್ನೂ ತೊಳಿನಲ್ಲಿ ತೊಳಬಂಧಿ, ಕೈಯಲ್ಲಿ ಕಡಗವನ್ನು ಧರಿಸಿದ್ದಾನೆ. ಎಡಗೈನಲ್ಲಿ ಉದ್ದನೆಯ ಖಡ್ಗವನ್ನು ಹಿಡಿದಿದ್ದು, ಬಲಗೈನಲ್ಲಿ ಕೀರುಗತ್ತಿನ್ನು ಹಿಡಿದಿದ್ದಾನೆ, ಸೊಂಟದಲ್ಲಿ ಪಟ್ಟಿಯನ್ನು ಕಾಣುತ್ತೇವೆ. ಇನ್ನು ವೀರವಸ್ತ್ರವನ್ನು ಧರಿಸಿದಂತೆ ಕಾಣುತ್ತಿದ್ದು ಅದು ತೋಡೆಯ ಭಾಗಕ್ಕೆ ಸೀಮಿತಗೊಂಡಿದೆ. ಎರಡು ಪಾದಗಳ ನಡುವೆ ಆ ವಸ್ತ್ರದ ಒಂದು ಭಾಗ ಬಂದಿರುವುದನ್ನು ಕಾಣುತ್ತೇವೆ. ಕಾಲಿನಲ್ಲಿ ಕಡಗವನ್ನು ಧರಿಸಿದ್ದಾನೆ. ಎರಡು ಪದಗಳು ಬಲ ಭಾಗಕ್ಕೆ ಮುಖ ಮಾಡಿವೆ. ಈ ವೀರನ ಮುಂದೆ ವೈರಿಯನ್ನು ಬಿಂಬಿಸುವಂತಹ ಸಣ್ಣದಾದ ಸೈನಿಕನ ಶಿಲ್ಪವನ್ನು ಕಾಣುತ್ತೇವೆ.

ಸಂಖ್ಯೆ : ೦೮

ಶಿಲ್ಪ : ವೀರಗಲ್ಲು

ಊರು : ಮಸ್ಕಿ

ಸ್ಥಳ : ನೀರ್ ಅಗಸಿಯ ಮುಂದಿನ ಕಟ್ಟೆಯ ಮೇಲೆ

ಕಾಲಮಾನ : ವಿಜಯನಗರ

ಈ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಕುದುರೆಯು ಅಲಂಕಾರಗೊಂಡಿದೆ. ಇದರ ಮುಂದೆ ಶತ್ರುವಿನ ಶಿಲ್ಪವಿದ್ದು, ಅವನನ್ನು ಕುದುರೆಯು ತನ್ನ ಮುಂದಿನ ಎಡಗಾಲಿನಿಂದ ತುಳಿಯುತ್ತಿರುವಂತೆ ಕೆತ್ತಲಾಗಿದೆ. ಇವನ ಮುಂದೆ ಮತ್ತೋರ್ವ ವೀರನ ಶಿಲ್ಪವಿದ್ದು ಇವನ ಒಂದು ಕೈಯಲ್ಲಿ ಖಡ್ಗವನ್ನು ಮತ್ತೊಂದು ಕೈಯಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಸೊಂಟದಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಈ ವೀರರ ಮೇಲೆ ಎರಡು ಚಕ್ರಗಳು ಮತ್ತು ಅವುಗಳ ಮೇಲೆ ಸೂರ್ಯ ಚಂದ್ರರನ್ನು ಕಾಣುತ್ತೇವೆ.

ಸಂಖ್ಯೆ : ೦೯

ಶಿಲ್ಪ : ವೀರಗಲ್ಲು

ಊರು : ಮಸ್ಕಿ

ಸ್ಥಳ : ನೀರ್ ಅಗಸಿಯ ಮುಂದಿನ ಕಟ್ಟೆಯ ಮೇಲೆ

ಕಾಲಮಾನ : ವಿಜಯನಗರ

ಈ ವೀರಗಲ್ಲು ನನಗೆ ಒಂದು ಅನುಮಾನವನ್ನು ಉಂಟುಮಾಡುತ್ತದೆ. ಕಾರಣವೆಂದರೆ ಇಲ್ಲಿ ವೀರ ಪುರುಷ ಆಗಿರುವ ಬದಲು ಸ್ತ್ರಿ ಆಗಿರಬಹುದು ಎಂದು ತರ್ಕಿಸಿದ್ದಾನೆ. ಇದಕ್ಕೆ ಪುಷ್ಠಿ ಎಂಬಂತೆ ಇದಕ್ಕೆ ರೀತಿಯ ವಿವರಣೆಗಳನ್ನು ನೀಡುವ ಎರಡು ವೀರಗಲ್ಲುಗಳನ್ನು ಕರ್ನಾಟಕದಲ್ಲಿ ಎರಡು ಸ್ಥಳಗಳಲ್ಲಿ ಕಾಣುತ್ತೇವೆ. ಅವುಗಳೆಂದರೆ ೧. ಶ್ರವಣಬೆಳಗೊಳದ ಚಿಕ್ಕ ಬೆಟ್ಟದ ಮೇಲಿರುವ ಬಾಹುಬಲಿ ಬಸದಿಯ ಬಳಿಯ ವೀರಗಲ್ಲು.[೨೩] ಮತ್ತು ೨. ಲಕ್ಷಮ್ಮಗಾವುಂಡಿಯ ತುರುಗಾಳಗದ ವೀರಗಲ್ಲನ್ನು ನೋಡಬಹುದಾಗಿದೆ.[೨೪] ಇಲ್ಲಿ ಕುದುರೆಯ ಮೇಲೆ ಕುಳಿತ ವ್ಯಕ್ತಿ ಬಹುಶಃ ಸ್ತ್ರಿಯದಾಗಿರಬಹುದೆ? ಈಕೆಯು ತಲೆಯಲ್ಲಿ ವೀರಮುಡಿ ಹೊಂದಿದ್ದು ಕೊರಳಿನಲ್ಲಿ ವಿವಿಧ ಆಭರಣಗಳಿವೆ. ತೋಳಿನಲ್ಲಿ ತೋಳಬಂದಿಯನ್ನು ಧರಿಸಿದ್ದು ಎಡಗೈಯಿಂದ ಕುದುರೆಯ ಲಗಾಮು ಹಿಡಿದಿರುವಂತೆ ಬಲಗೈನಲ್ಲಿ ಖಡ್ಗವನ್ನು ಹಿಡಿದಿರುವಾಗೆ ಕೆತ್ತಲಾಗಿದೆ. ಕುದುರೆಯು ಅಲಂಕಾರಗೊಂಡಿದ್ದು ರೋಷವನ್ನು ಪ್ರತಿನಿಧಿಸುವಂತಿದೆ. ಅದರ ಮುಂದಿನ ಎಡಗಾಲು ಸ್ವಲ್ಪ ಮೇಲಕ್ಕೆ ಎತ್ತಿದ್ದು ವೈರಿಯನ್ನು ತುಳಿಯುತ್ತಿರುವಂತೆ ಕೆತ್ತಲಾಗಿದೆ. ಇದರ ಮುಂದೆ ಮತ್ತೋರ್ವ ವೀರನ ಶಿಲ್ಪವಿದ್ದು ಇವನು ವೀರಮುಡಿಯನ್ನು ಕಟ್ಟಿದ್ದು ಕೊರಳಿನಲ್ಲಿ ವಿವಿಧ ಆಭರಣಗಳಿವೆ. ಎಡಗೈನಲ್ಲಿ ಖಡ್ಗವನ್ನು ಬಲಗೈನಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಸೊಂಟದಲ್ಲಿ ಸೊಂಟಪಟ್ಟಿ ಧರಿಸಿದ್ದು ವೀರಗಚ್ಚೆ ಧರಿಸಿದ್ದಾನೆ. ಅದರ ಒಂದು ಭಾಗ ಎರಡು ಕಾಲಿನ ನಡುವೆ ಪಾದದವರೆಗೆ ಇಳಿಬಿದ್ದಿದೆ. ಕಾಲಿನಲ್ಲಿ ಕಾಲ್ಗಡಗ ಧರಿಸಿದ್ದು ಎರಡು ಪಾದಗಳು ಬಲಕ್ಕೆ ವಾಲಿವೆ. ಇವನ ಮುಂದೆ ಮತ್ತೋರ್ವ ವೀರನ ಶಿಲ್ಪವನ್ನು ಕಾಣುತ್ತೇವೆ. ಈ ಶಿಲ್ಪ ಮೊದಲಿನ ಶಿಲ್ಪಕ್ಕಿಂತಲೂ ಸಣ್ಣ ಗಾತ್ರದಲ್ಲಿದೆ. ಆದ್ದರಿಂದ ಇದು ವೈರಿ ಶಿಲ್ಪ ಎಂದು ಹೇಳಬಹುದಾಗಿದೆ. ಕೊರಳಲ್ಲಿ ವಿವಿಧ ಆಭರಣ ಧರಿಸಿದ್ದಾನೆ. ಎಡಗೈ ಕೆಳಮುಖವಾಗಿದೆ, ಬಲಗೈಯನ್ನು ಮೇಲಕ್ಕೆ ಎತ್ತಿದ್ದಾನೆ ಮತ್ತು ಆ ಕೈಯಲ್ಲಿ ಏನು ಅಸ್ಪಷ್ಟವಾದ ಆಯುಧವನ್ನು ಹಿಡಿದಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ಸಂಖ್ಯೆ : ೧೦

ಶಿಲ್ಪ : ವೀರಗಲ್ಲು

ಊರು : ಮಸ್ಕಿ

ಸ್ಥಳ : ನೀರ್ ಅಗಸಿಯ ಕಟ್ಟೆಯ ಮೇಲಿನ ೪ನೇ ವೀರಗಲ್ಲು

ಕಾಲ : ವಿಜಯನಗರ

ಈ ವೀರಗನಲ್ಲಿರುವ ವೀರನು ಕುದುರೆಯ ಮೇಲೆ ಕುಳಿತಿದ್ದಾನೆ. ಎಡಗೈನಲ್ಲಿ ಕುದುರೆ ಲಗಾಮ ಹಿಡಿದಿದ್ದು ಅದನ್ನು ಮೇಲಕ್ಕೆ ಎತ್ತಿದ್ದಾನೆ. ಬಹುಶಃ ಇದು ಜಯದ ಸಂಕೇತವಾಗಿರಬಹುದುದಾಗಿದೆ. ಇನ್ನೂ ಎಡಗೈನಲ್ಲಿ ಅಸ್ಪಷ್ಟವಾದ ಆಯುಧವಿದೆ. ಕುದುರೆಯು ಅಲಂಕಾರದಿಂದ ಕೂಡಿದೆ ಅದರ ಬಾಲ ಪಾದದವರೆಗೂ ಇಳಿಬಿದ್ದಿರುವುದನ್ನು ಕಾಣುತ್ತೇವೆ. ಇದರ ಹಿಂಭಾಗದಲ್ಲಿ ಸೈನಿಕನ ಶಿಲ್ಪವಿದೆ. ಅವನು ತನ್ನ ಎಡಗೈನಲ್ಲಿ ರಾಜಛತ್ರಿಯನ್ನು ಹಿಡಿದು ಬಲಗೈಯನ್ನು ಪಾದಾಭಿಮುಖವಾಗಿ ಇಳಿಬಿಟ್ಟಿದ್ದು ಅದರ ಕಿರುಗತ್ತಿಯನ್ನು ಹಿಡಿದು ನಿಂತಿದ್ದಾನೆ.

ಸಂಖ್ಯೆ : ೧೧

ಶಿಲ್ಪ : ವೀರಗಲ್ಲು

ಊರು : ಮಸ್ಕಿ

ಸ್ಥಳ : ನೀರ್ ಅಗಸಿಯ ಕಟ್ಟೆಯ ಕೆಳಗಿನ ವೀರಗಲ್ಲು

ಕಾಲಮಾನ : ವಿಜಯನಗರ

ಈ ವೀರಗಲ್ಲಿನಲ್ಲಿ ವೀರನನ್ನು ಅತ್ಯಂತ ಸುಂದರವಾಗಿ ಕೆತ್ತಲಾಗಿದೆ. ವೀರನು ವೀರ ಶಿರಮುಡಿಯನ್ನು ಕಟ್ಟಿದ್ದಾನೆ. ಅದು ಎಡಭಾಗಕ್ಕೆ ವಾಲಿದೆ ಅದಕ್ಕೆ ಬೇರೆ ಆಭರಣ ಸಿಕ್ಕಿಸಿದಂತಿದೆ. ಕಿವಿಯಲ್ಲಿ ಕರ್ಣಕುಂಡಲಗಳಿಗೆ ಕೊರಳಿನಲ್ಲಿ ಹಾರ ಸರಗಳಿವೆ. ಸೊಂಟದಲ್ಲಿ ಸೊಂಟಪಟ್ಟಿ ಧರಿಸಿದ್ದು ಅದರಲ್ಲಿ ಕಿರುಗತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ಕಾಲಿನಲ್ಲಿ ಕಡಗವನ್ನು ಧರಿಸಿದ್ದು ಎರಡು ಪಾದಗಳು ಬಲಕ್ಕೆ ಮುಖ ಮಾಡಿವೆ. ವೀರನ ಎಡಗೈನಲ್ಲಿ ಉದ್ದನೆಯ ಕೋಲನ್ನು ಹಿಡಿದಿದ್ದಾನೆ. ಬಲಗೈನಲ್ಲಿ ಖಡ್ಗ ಹಿಡಿದಿದ್ದಾನೆ. ಇದರ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ಸಂಖ್ಯೆ : ೧೨

ಸ್ಮಾರಕ : ವೀರಗಲ್ಲು

ಊರು : ಮಸ್ಕಿ

ಸ್ಥಳ : ಪ್ರವಾಸಿ ಮಂದಿರದ ಆವರಣದಲ್ಲಿ

ರಾಜ ವಂಶ : ಕಲ್ಯಾಣ ಚಾಲುಕ್ಯರು

ಈ ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು, ಇದರ ಕೆಳಗಿನ ಭಾಗ ನೆಲದಲ್ಲಿ ಅರ್ಧಭಾಗ ಹೂತುಹೋಗಿದೆ. ಮೇಲಿನ ಅರ್ಧ ಭಾಗ ಅಸ್ಪಷ್ಟವಾಗಿದೆ. ಇನ್ನೂ ಎರಡನೆಯ ಹಂತದಲ್ಲಿ ವೀರನನ್ನು ಇಬ್ಬರು ಸಖಿಯರು ಸ್ವರ್ಗಕ್ಕೆ ಕರೆದೊಯುತ್ತಿರುವಂತೆ ಕೆತ್ತಲ್ಪಟ್ಟಿದೆ. ಇನ್ನೂ ಮೂರನೇ ಹಂತದ ಅರ್ಧ ಭಾಗ ತೃಟಿತವಾಗಿರುವುದರಿಂದ ಸ್ಪಷ್ಟವಾಗಿ ಗುರುತಿಸಲಾಗುತ್ತಿಲ್ಲ. ಈ ವೀರಗಲ್ಲಿನ ಎಡ-ಬಲಭಾಗಗಳಲ್ಲಿ ಶಾಸನವನ್ನು ಕೆತ್ತಿರುವುದನ್ನು ಕಾಣುತ್ತೇವೆ.

ಸಂಖ್ಯೆ : ೧೩

ಸ್ಮಾರಕ : ಬಂದೂಕು ವೀರಗಲ್ಲು

ಊರು : ಮಸ್ಕಿ

ಸ್ಥಳ : ಪ್ರವಾಸಿ ಮಂದಿರದ ಆವರಣದೊಳಗೆ ಎಡಭಾಗದಲ್ಲಿ

ರಾಜವಂಶ : ವಿಜಯನಗರ ಕಾಲ

ಈ ಒಂದು ಸ್ಮಾರಕದಲ್ಲಿ ಎರಡು ಹಂತಗಳನ್ನು ಕಾಣುತ್ತೇವೆ. ಕೆಳಹಂತದಲ್ಲಿ ವೀರನೊಬ್ಬನು ತನ್ನ ಕೈಯಲ್ಲಿ ಬಂದೂಕನ್ನು ಬಲಮುಖವಾಗಿ ಕುದುರೆಯೊಂದಕ್ಕೆ ಗುರಿಯಿಟ್ಟಂತೆ ಕೆತ್ತಲಾಗಿದೆ. ವೀರನು ಶಿರಮುಡಿ ಕಟ್ಟಿದ್ದು ಅದು ಅಲಂಕಾರಗೊಂಡಿದೆ. ತೋಳಬಂದಿ, ಕೈಯಲ್ಲಿ ಕಡಗ ಸೊಂಟದಲ್ಲಿ ಸೊಂಟಪಟ್ಟಿ ಕಟ್ಟಿದ್ದು ಅದರಲ್ಲಿ ಕಿರುಗತ್ತಿಯನ್ನು ಇಟ್ಟುಕೊಂಡಿದ್ದಾನೆ. ಇದರ ಮೇಲೆ ಅಲಂಕೃತಗೊಂಡ ಅಶ್ವದ ಮೇಲೆ ವೀರನನ್ನು ಕೆತ್ತಲಾಗಿದೆ. ವೀರನ್ನು ತಲೆಯಲ್ಲಿ ಪೇಟವನ್ನು ಧರಿಸುವಂತೆ ಅಲಂಕಾರವಾಗಿದೆ. ಕಿವಿಯಲ್ಲಿ ಕುಂಡಗಳು, ಕೊರಳಿನಲ್ಲಿ ಹಾರ, ಸರಗಳನ್ನು ಧರಿಸಿದ್ದಾನೆ. ಸೊಂಟದಲ್ಲಿ ಕಿರುಗತ್ತಿ ಇಟ್ಟುಕೊಂಡಿದ್ದು, ಎಡಗೈಯಲ್ಲಿ ಕುದುರೆಯ ಲಗಾಮ, ಬಲಗೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಕುದುರೆಯ ಬೆನ್ನಿನ ಮೇಲಿನ ಜೀನು ಹೆಚ್ಚು ಸ್ಪಷ್ಟವಾಗಿ ಕೆತ್ತಲಾಗಿದೆ. ಇನ್ನು ಮೇಲ ಭಾಗದಲ್ಲಿ ಆಂಜನೇಯನ ಶಿಲ್ಪ ಕೆತ್ತಲಾಗಿದೆ. ಇದರ ಪಕ್ಕದಲ್ಲಿ ಮತ್ತೊಂದು ವೀರನ ಶಿಲ್ಪವಿದೆ. ಇವುಗಳ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ಸಂಖ್ಯೆ : ೧೪

ಸ್ಮಾರಕ : ವೀರಗಲ್ಲು

ಊರು : ಮಸ್ಕಿ

ಸ್ಥಳ : ಪ್ರವಾಸಿ ಮಂದಿರ ಆವರಣದೊಳಗೆ

ಕಾಲ : ಕ್ರಿ.ಶ. ೧೫-೧೬ನೇ ಶತಮಾನ

ಈ ವೀರಗಲ್ಲನ್ನು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಕೆತ್ತಲಾಗಿದೆ. ವೀರನ ವೇಷಭೂಷಣಗಳನ್ನು ಗಮನಿಸಿದರೆ ಇವನೊಬ್ಬ ಪ್ರಮುಖ ನಾಯಕನಾಗಿರುವಂತಿದೆ. ಜೊತೆಗೆ 'ರಾಜಛತ್ರಿ'ಯನ್ನು ಸಹ ಇವನಿಗೆ ಹಿಡಿಯಲಾಗಿದೆ. ಎದೆ, ತೋಳು, ಕೈ ಕಾಲುಗಳಲ್ಲಿ ಆಭರಣಗಳಿವೆ. ಕಿವಿಯಲ್ಲಿ ಕುಂಡಲಗಳಿವೆ. ಇವನು ಕುದುರೆಯ ಮೇಲೆ ಆಸೀನನಾಗಿದ್ದು ಅದು ಬಲಭಾಗಕ್ಕೆ ಮುಖಮಾಡಿದೆ. ತನ್ನ ಎಡಗೈನಲ್ಲಿ ಕುದುರೆಯ ಲಗಾಮು, ಬಲಗೈನಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಸೊಂಟದಲ್ಲಿ ಚಾಕು ಇರಿಸಿದ್ದಾನೆ. ಕುದುರೆಯ ಬೆನ್ನಿನ ಮೇಲೆ ಅಲಂಕೃತ ಜೀನನನ್ನು ಕಾಣುತ್ತೇವೆ. ಕುದುರೆಯ ಶಿರಭಾಗವು ವಿವಿಧ ಆಭರಣಗಳಿಂದ ಅಲಂಕಾರಗೊಂಡಿದೆ. ವೀರನ ಮೇಲ್ಭಾಗದಲ್ಲಿ ಮತ್ತೊರ್ವ ವ್ಯಕ್ತಿಯ ಶಿಲ್ಪವಿದ್ದು ಅವನು ಕೈ ಮುಗಿದು ನಿಂತಿದ್ದಾನೆ. ಇನ್ನೂ ಹಿಂಭಾಗದಲ್ಲಿ ರಾಜಭಟನು ರಾಜಛತ್ರಿ ಹಿಡಿದ ದೃಶ್ಯವಿದೆ. ಇವನ ಮೇಲ್ಭಾಗದಲ್ಲಿ ಸ್ತ್ರೀಯ ಶಿಲ್ಪವಿದ್ದು ಅವಳು ಮುಡಿಯನ್ನು ಕಟ್ಟಿದ್ದು ಒಂದು ಕೈ ಪಾದಾಭಿಮುಖವಾಗಿದೆ. ಮತ್ತೊಂದು ಅಭಯ ಸೂಚಕದಂತಿದೆ. ಪ್ರಾಯಶಃ ಇದು ವೀರನ ಮರಣದ ತರುವಾಯ ಅವನ ಹೆಂಡತಿ ಸಹಗಮನ ಅನುಸರಿಸಿದರ ಸೂಚಕವಾಗಿರಬಹುದಾಗಿದೆ. ಕೊನೆಯ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಚಿತ್ರಗಳಿವೆ.

ಸಂಖ್ಯೆ : ೧೫

ಸ್ಮಾರಕ : ಮಹಾಸತಿಗಲ್ಲು

ಊರು : ಮಸ್ಕಿ

ಸ್ಥಳ : ಪ್ರವಾಸಿ ಮಂದಿರದ ಆವರಣದೊಳಗೆ

ಕಾಲ : ಕ್ರಿ.ಶ. ೧೫-೧೬ನೇ ಶತಮಾನ

ಈ ವೀರಗಲ್ಲನ್ನು ಗಮನಿಸಿದರೆ ಇದರಲ್ಲಿ ವೀರ ಮತ್ತು ವೀರನ ಪತ್ನಿಯ ಎರಡು ಶಿಲ್ಪಗಳಿವೆ. ವೀರನನ್ನು ವೀರಾವೇಶದಿಂದ ಎಡಗೈನಲ್ಲಿ ಬಿಲ್ಲನ್ನು ಹಿಡಿದುಕೊಂಡಿದ್ದಾನೆ. ವೀರಗಚ್ಚೆಯ ಪೋಷಾಕು ಇವನಿಗೆ ಇದೆ. ಸತಿಯು ವೀರ ಎಡಭಾಗದಲ್ಲಿ ನಿಂತಿದ್ದು, ಬಲಗೈಯಲ್ಲಿ ಕನ್ನಡಿಯನ್ನು ಎಡಗೈನಲ್ಲಿ ಖಡ್ಗವನ್ನು ಹಿಡಿದಿದ್ದಾಳೆ ಅದರ ಮೇಲ್ಭಾಗದಲ್ಲಿ ನಿಂಬೆ ಹಣ್ಣು ಸಿಕ್ಕಿಸಿದಂತಿದೆ. ಇದರ ಮೇಲ್ಭಾಗದಲ್ಲಿ ೨ ಹಸುಗಳ ಚಿತ್ರಣವಿದೆ. ಇದರಿಂದ ತುರುಗಾಳಗದಲ್ಲಿ ವೀರನು ಮರಣ ಹೊಂದಿದ ಫಲವಾಗಿ ಆ ಸತಿಯು ಮಹಾಸತಿಯಾಗಿರುವಂತೆ ಕಾಣುತ್ತದೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಚಿತ್ರಣಗಳಿವೆ.

ಸಂಖ್ಯೆ : ೧೬

ಶಿಲ್ಪ : ವೀರಗಲ್ಲು

ಊರು : ಸಾನಬಾಳ

ಸ್ಥಳ : ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲ್ಲಿ

ಕಾಲ : ಕ್ರಿ.ಶ. ೧೭-೧೮ನೇ ಶತಮಾನ

ಈ ಒಂದು ವೀರಗಲ್ಲು ವಿಶಿಷ್ಟವಾದಂತಹ ವೀರಗಲ್ಲು ಎಂದು ಹೇಳಬಹುದಾಗಿದೆ. ಕಾರಣ ಇಲ್ಲಿ ವೀರನ ಅಲಂಕಾರ ಅತ್ಯಂತ ಭೀಕರತೆ/ಉಗ್ರ ರೂಪದಲ್ಲಿರುವಂತೆ ಕೆತ್ತಲಾಗಿದೆ. ವೀರನು ಶಿರಮುಡಿಯನ್ನು ಕಟ್ಟಿದ್ದು ಅದಕ್ಕೆ ಅಲಂಕಾರಿಕ ಆಭರಣವನ್ನು ತೊಡಿಸಿದಂತೆ ಕೆತ್ತಲಾಗಿದೆ. ಇದು ತಲೆಯ ಬಲಭಾಗಕ್ಕೆ ಮೂರು ಗೆರೆಗಳು ಬಂದಂತೆ ಕಾಣುತ್ತೇವೆ. ಕಣ್ಣಿನ ಹುಬ್ಬುಗಳು ದಪ್ಪವಾಗಿ ಕೆತ್ತಲಾಗಿದ್ದು ಅದು ಕಿವಿಯ ಭಾಗದವರೆಗೂ ಮುಂದುವರೆದಿದೆ. ಕಣ್ಣುಗಳು ತೆರೆದಂತೆ, ಮೀಸೆಗಳು ತಿರುವಿದಂತೆ ಕೆತ್ತಲಾಗಿದೆ, ಕಿವಿಯಲ್ಲಿ ಕುಂಡಗಳು, ಕೊರಳಲ್ಲಿ ತಾಯತಗಳನ್ನು ಧರಿಸಿದ್ದಾನೆ ಸೊಂಟದಲ್ಲಿ ಸೊಂಟಪಟ್ಟಿ ಧರಿಸಿದ್ದ ಅದರಲ್ಲಿ ಬಾಕು ಇಟ್ಟುಕೊಂಡಿದ್ದಾನೆ. ವೀರನ ಬಲ ಭುಜದ ಮೇಲೆ ಪಾರಿವಾಳ/ ಗಿಳಿಯು ಕುಳಿತಿರುವಂತೆ ಕೆತ್ತಲಾಗಿದೆ. ಇದರ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ಸಂಖ್ಯೆ : ೧೭

ಶಿಲ್ಪ : ವೀರಗಲ್ಲು

ಊರು : ಕಾಟಿಗಲ್ಲು

ಸ್ಥಳ : ಸಮುದಾಯ ಭವನದ ಮುಂದೆ

ರಾಜ ವಂಶ : ಕಲ್ಯಾಣ ಚಾಲುಕ್ಯ

ಈ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತಿದ್ದು ಶಿರಮುಡಿ ಕಟ್ಟಿದ್ದಾನೆ ಮತ್ತು ಕಣ್ಣುಗಳು ತೆರೆದ ರೀತಿಯಲ್ಲಿದ್ದು, ಮೀಸೆಯು ಉಗ್ರರೂಪವನ್ನು ಪ್ರತಿನಿಧಿಸುವಂತಿವೆ. ಕಿವಿಯಲ್ಲಿ ಕುಂಡಲಗಳನ್ನು, ಕೊರಳಿನಲ್ಲಿ ಹಾರ ಧರಿಸಿದ್ದಾನೆ. ಕುದುರೆಯು ಅಲಂಕಾರಗೊಂಡಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿಲ್ಪಗಳಿವೆ.

ಸಂಖ್ಯೆ : ೧೮

ಸ್ಮಾರಕ : ವೀರಗಲ್ಲು

ಊರು : ಕಾಟಿಗಲ್ಲು

ಸ್ಥಳ : ಸಮುದಾಯ ಭವನದ ಮುಂದಿನ ಆಲದ ಮರದ ಕೆಳಗೆ

ರಾಜ ವಂಶ : ಕಲ್ಯಾಣ ಚಾಲುಕ್ಯ

ಈ ವೀರಗಲ್ಲು ಎರಡು ಹಂತಗಳನ್ನು ಹೊಂದಿದೆ. ಕೆಳಹಂತದಲ್ಲಿ ವೀರನು ತನ್ನ ಎಡಗೈನಲ್ಲಿ ಗುರಾಣಿಯನ್ನು ಹಿಡಿದಿದ್ದಾನೆ. ಬಲಗೈನ್ನು ಮೇಲಕ್ಕೆ ಎತ್ತಿದ್ದು ಅದರಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಗುರಾಣಿಯು ವೈರಿಯೂ ಖಡ್ಗವನ್ನು ಚುಚ್ಚುತ್ತಿರುವುದನ್ನು ತಡೆ ಹಿಡಿಯಿಡಿಯುವಂತಿದೆ. ಇವನ ಪಾದದ ಕೆಳಗೆ ಮತ್ತೋರ್ವ ವೈರಿಯು ಹತನಾಗಿ ಬಿದ್ದಿರುವಂತೆ ಕಾಣುತ್ತೇವೆ. ಮುಂದಿನ ಎರಡನೇ ಹಂತದಲ್ಲಿ ವೀರನು ಇಬ್ಬರು ದೇವಕನ್ಯೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಕೆತ್ತಲಾಗಿದೆ. ಇದರ ಮೇಲ್ಭಾಗದಲ್ಲಿ ಶಿವಲಿಂಗವನ್ನು ಖಂಡರಿಸಲಾಗಿದೆ.

ಸಂಖ್ಯೆ : ೧೯

ಸ್ಮಾರಕ : ಬಂದೂಕು ವೀರಗಲ್ಲು

ಊರು : ಕಾಟಿಗಲ್ಲು

ಸ್ಥಳ : ಸಮುದಾಯ ಭವನದ ಮುಂದೆ

ಕಾಲಮಾನ : ಕ್ರಿ.ಶ. ೧೪-೧೫ನೇ ಶತಮಾನ

ಈ ವೀರಗಲ್ಲನ್ನು ಗಮನಿಸಿದ್ದರೆ ಇವನೊಬ್ಬ ಶಿವಭಕ್ತನಂತೆ ಕಾಣುತ್ತದೆ. ಇವನು ತಲೆಯಲ್ಲಿ ಪೇಟವನ್ನು ಧರಿಸಿದಂತಿದೆ. ಕೊರಳಲ್ಲಿ ಹಾರವನ್ನು ಧರಿಸಿದ್ದು, ತೋಳು ಮತ್ತು ಕೈಯಲ್ಲಿ ಆಭರಣಗಳಿವೆ. ಸೊಂಟದಲ್ಲಿನ ಸೊಂಟಪಟ್ಟಿಯೂ ಅಲಂಕೃತಕೊಂಡಿದೆ. ವೀರನು ಕೊರಳಿನಲ್ಲಿ ದೊಡ್ಡದಾದ ಹಾರವನ್ನು ಧರಿಸಿದ್ದು ಅದು ಪಾದದ ಭಾಗದವರೆಗೆ ಚಾಚಿದೆ. ಇನ್ನೂ ವೀರನ್ನು ಎಡಗೈಯಲ್ಲಿ ಖಡ್ಗವನ್ನು ಹಿಡಿದು, ಬಲಗೈನಲ್ಲಿ ಬಂದೂಕ ಹಿಡಿದು ಜೊತೆಗೆ ಕೊರಳಿನ ಹಾರವನ್ನು ಒಂದು ಭಾಗವನ್ನು ಹಿಡಿದಿದ್ದಾನೆ. ಇದು ವಿಜಯಶಾಲಿಯಾಗಿರುವುದನ್ನು ಪ್ರತಿನಿಧಿಸುವಂತಿದೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಚಿತ್ರಗಳನ್ನು ಕಾಣುತ್ತೇವೆ.

ಸಂಖ್ಯೆ : ೨೦

ಸ್ಮಾರಕ : ವೀರಮಾಸ್ತಿಕಲ್ಲು

ಸ್ಥಳ : ಕಾಟಿಗಲ್ಲಿನ ಸಮುದಾಯ ಭವನದ ಮುಂದೆ

ಕಾಲ : ಕ್ರಿ.ಶ. ೧೭-೧೮ನೇ ಶತಮಾನ

ಈ ವೀರಗಲ್ಲಿನಲ್ಲಿ ವೀರನನ್ನು ಹೆಚ್ಚು ಅಲಂಕಾರಗೊಳಿಸಿರುವುದರಿಂದ ಅವನೊರ್ವ ರಾಜಪ್ರಮುಖನೆಂದು ಹೇಳಬಹುದು. ಈ ವೀರನು ಶಿರದಲ್ಲಿ ಶಿರಮುಡಿ ಕಟ್ಟಿದ್ದು ಕಿವಿಯಲ್ಲಿ ಕುಂಡಲಗಳಿವೆ. ಕೊರಳಿನಲ್ಲಿ ತಾಯತ ಮತ್ತು ಸರಗಳಿವೆ. ತೋಳಬಂದಿ ಮತ್ತು ಭುಜಬಂದಿಗಳನ್ನು, ಕೈಯಲ್ಲಿ ಆಭರಣಗಳನ್ನು ಧರಿಸಿದ್ದಾನೆ. ಎಡಗೈನಲ್ಲಿ ಸೊಂಟದ ಭಾಗವನ್ನು ಹಿಡಿದಂತೆ ಕೆತ್ತಲಾಗಿದೆ. ಬಲಗೈನಲ್ಲಿ ಉದ್ದನೆಯ ಕೋಲನ್ನೂ ಕಾಣುತ್ತೇವೆ. ವೀರ ಪೋಷಕು ಧರಿಸಿದ್ದು ಕಾಲಿನಲ್ಲಿ ಕಾಲಗಡಗ ಹಾಕಿದ್ದಾನೆ. ವೀರನ ಮುಂದೆ ಹೂವಿನ ಚಿತ್ರವಿದೆ. ಹಿಂದೆ ಸತಿಯ ಶಿಲ್ಪವಿದ್ದು ವೀರಮುಡಿ ಕಟ್ಟಿದ್ದಾಳೆ ಕಿವಿಯಲ್ಲಿ ಕುಂಡಗಳಿವೆ. ಆಕೆಯು ಸೀರೆಯನ್ನು ಧರಿಸಿದಂತಿದೆ. ಎಡಗೈನಲ್ಲಿ ಪುಷ್ಪವನ್ನು ಹಿಡಿದಿದ್ದಾಳೆ. ಬಲಗೈನಲ್ಲಿ ತಂಬಿಗೆಯಾಕಾರದ ಉಪಕರಣ ಹಿಡಿದಿದ್ದಾಳೆ. ಇದರಿಂದ ಆಕೆ ಸತಿ ಪದ್ಧತಿ ಆಚರಿಸಿ ಮಹಾಸತಿಯಾದಂತೆ ಕಾಣುತ್ತದೆ.

ಸಂಖ್ಯೆ : ೨೧

ಸ್ಮಾರಕ : ವೀರ ಮಾಸ್ತಿಕಲ್ಲು

ಸ್ಥಳ : ಕಾಟಿಗಲ್ಲಿನ ಸಮುದಾಯ ಭವನದ ಮುಂದೇ

ಕಾಲ : ವಿಜಯನಗರೋತ್ತರ (ಕ್ರಿ.ಶ.೧೭-೧೮ನೇ ಶತಮಾನ)

ಇಲ್ಲಿ ಎರಡು ಶಿಲ್ಪಗಳಿದ್ದರೂ ಸಹ ಇವು ಒಂದಕ್ಕೊಂದು ಸಂಬಂಧವಿರುವಂತೆ ಕಾಣುತ್ತವೆ. ವೀರನ ಶಿಲ್ಪದಲ್ಲಿ ವೀರನು ವಿವಿಧ ಆಭರಣಗಳನ್ನು ಧರಿಸಿದ್ದು ಅದರಲ್ಲಿ ಮುಖ್ಯವಾಗಿ ಕೊರಳಲ್ಲಿನ ಒಂದು ಹಾರ ಪಾದದವರೆಗೆ ಇಳಿಬಿದ್ದಿದೆ. ವೀರನಿಗೆ ವೀರಮುಡಿ, ಕಿವಿಯಲ್ಲಿ ಕುಂಡಲಗಳು, ತೋಳು, ಕೈ, ಕಾಲುಗಳಲ್ಲಿ ವಿವಿಧ ಆಭರಣಗಳಿವೆ. ಎಡಗೈನಲ್ಲಿ ಕಿರುಗತ್ತಿ, ಬಲಗೈನಲ್ಲಿ ಬಂದೂಕು ಹಿಡಿದಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ಇನ್ನೂ ಪಕ್ಕದ ಸತಿಗಲ್ಲನ್ನು ಗಮನಿಸಿದಾಗ ಇಕೆಯು ಸಹ ಅಲಂಕೃತಗೊಂಡಿದ್ದು ಕಿವಿಯ ಕುಂಡಗಳು ಭುಜದವರೆಗೆ ಇಳಿ ಬಿದ್ದಿವೆ. ವೀರ ಪೋಷಕ ಧರಿಸಿದ್ದಾಳೆ ಎಡಗೈಯನ್ನು ಎದೆಯ ಭಾಗದವರೆಗೂ ತಂದಿದ್ದು ಅದು ಅಭಯ ಸೂಚಿಯಂತಿದೆ. ಬಲಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಂತೆ ಕಾಣುತ್ತದೆ ಅದ್ದರಿಂದ ಇದು ಸತಿ ಅಥವಾ ಮಹಾಸತಿಗಲ್ಲು ಎನ್ನಬಹುದಾಗಿದೆ.

ಸಂಖ್ಯೆ : ೨೨

ಸ್ಮಾರಕ : ಬಂದೂಕು ವೀರಗಲ್ಲು

ಊರು : ಕಾಟಿಗಲ್ಲು

ಸ್ಥಳ : ಸೋಮನಾಥ ದೇವಾಲಯದ ಮುಂದೆ

ಕಾಲ : ವಿಜಯನಗರೋತ್ತರ (ಕ್ರಿ.ಶ. ೧೬-೧೭ನೇ ಶತಮಾನ)

ಈ ವೀರಗಲ್ಲಿನಲ್ಲಿ ಇಬ್ಬರು ವೀರರು ಕೈಯಲ್ಲಿ ಬಂದೂಕುಗಳನ್ನು ಹಿಡಿದಿದ್ದಾರೆ ಶಿರದಲ್ಲಿ ಸಿರಿಮುಡಿಯಿದ್ದು, ಕೊರಳಲ್ಲಿ, ಕಿವಿಯಲ್ಲಿ, ಕೈಯಲ್ಲಿ ವಿವಿಧ ಆಭರಣಗಳಿವೆ. ಸೊಂಟದಲ್ಲಿ ಸೊಂಟಪಟ್ಟಿ ಮತ್ತು ಅದರಲ್ಲಿ ಚಾಕು ಸಿಕ್ಕಿಸಿಕೊಂಡಿದ್ದಾರೆ. ಇವರಿಬ್ಬರ ಎಡ ಬಲದ ಭಾಗದಲ್ಲಿ ಸ್ತ್ರೀಯ ಶಿಲ್ಪವಿದ್ದು ಅವಳು ಎರಡು ಕೈಗಳನ್ನು ಮುಗಿದು ನಿಂತಿದ್ದಾಳೆ.

ಸಂಖ್ಯೆ : ೨೩–೨೪

ಸ್ಮಾರಕ : ವೀರಗಲ್ಲುಗಳು

ಸ್ಥಳ : ಸೋಮನಾಥ ದೇವಾಲಯದ ಮುಂದೆ

ಕಾಲ : ಕ್ರಿ.ಶ. ೧೬–೧೭ನೇ ಶತಮಾನ

ಈ ಮೇಲಿನ ಎರಡು ವೀರಗಲ್ಲುಗಳು ಕೆತ್ತನೆಯ ದೃಷ್ಟಿ ಮತ್ತು ಪ್ರಮಾಣದಲ್ಲಿ ಒಂದೇ ರೀತಿಯಲ್ಲಿವೆ. ಇಲ್ಲಿನ ವೀರರರು ವಿವಿಧ ಆಭರಣಗಳನ್ನು ಧರಿಸಿದ್ದು, ಎಡಗೈನಲ್ಲಿ ಖಡ್ಗವನ್ನು ಮತ್ತು ಬಲಗೈನಲ್ಲಿ ಗುರಾಣಿಯನ್ನು ಹಿಡಿದಿದ್ದಾರೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಕಂಡರಿಸಿದ್ದಾರೆ.

ಸಂಖ್ಯೆ : ೨೫

ಸ್ಮಾರಕ : ವೀರಗಲ್ಲು

ಸ್ಥಳ : ಸೋಮನಾಥ ದೇವಾಲಯದ ಮುಂದೆ

ಕಾಲ : ಕ್ರಿ.ಶ. ೧೩–೧೪ನೇ ಶತಮಾನ

ಈ ವೀರಗಲ್ಲಿನಲ್ಲಿ ವೀರನು ರಾಜ ಪ್ರಮುಖನಂತೆ ಕಾಣುತ್ತಾನೆ. ಇವನಿಗೆ ರಾಜಛತ್ರಿಯನ್ನು ಹಿಡಿಯಲಾಗಿದ್ದು ಇದು ಸುಂದರ ಮತ್ತು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದೆ. ಕೆಳಭಾಗದಲ್ಲಿ ವೈರಿಯೊಂದಿಗೆ ಹೊರಾಡುತ್ತಿರುವ ದೃಶ್ಯವಿದೆ. ವೀರನ್ನು ವಿವಿಧ ಆಭರಣಗಳನ್ನು ಧರಿಸಿದ್ದಾನೆ. ಮತ್ತು ಅದರ ಮೇಲಿನ ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಗಳಿವೆ.

ಸಂಖ್ಯೆ : ೨೬

ಸ್ಮಾರಕ : ಹಂದಿಬೇಟೆ ವೀರಗಲ್ಲು

ಸ್ಥಳ : ಸೋಮನಾಥ ದೇವಾಲಯದ ಆವರಣದ ಎಡಭಾಗದಲ್ಲಿ

ಕಾಲ : ಕಲ್ಯಾಣ ಚಾಲುಕ್ಯ

ಇದು ಶಿಲೆಯ ಬಳಕೆಯ ದೃಷ್ಟಿಯಿಂದ ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಇದು ಈ ಭಾಗದಲ್ಲಿನ (ಪರಿಸರ) ಅಪರೂಪದ ವೀರಗಲ್ಲು ಎಂದು ಹೇಳಬಹುದು. ಇಲ್ಲಿ ವೀರನ್ನು ಕುದುರೆಯ

ಮೇಲೆ ಕುಳಿತಿದ್ದಾನೆ. ಇದರ ಬಹುಭಾಗ ತೃಟಿತವಾಗಿದೆ. ಇನ್ನು ಕುದುರೆಯು ರುಂಡಭಾಗವು ಸಹ ತೃಟಿತವಾಗಿದೆ. ಬೆನ್ನಿನ ಮೇಲೆ ಜೀನನ್ನು ಹೊಂದಿದ್ದು, ಅದರ ಒಂದು ಭಾಗ ಬಾಲದ ಕೆಳಗಿನಿಂದ ಬಂದಿದೆ. ಕೊರಳಿನಲ್ಲಿ ಘಂಟೆಯನ್ನು ಕಟ್ಟಿದಂತೆ ಕಾಣುತ್ತದೆ. ಇದರ ಮುಂದೆ ನಾಯಿಯೊಂದು ತನ್ನ ಮುಂದಿನ ಎರಡು ಕಾಲುಗಳನ್ನು ಹಂದಿಯ ಕುತ್ತಿಗೆ ಭಾಗಕ್ಕೆ ಇಟ್ಟು ಬಾಯಿಯಿಂದ ಕಚ್ಚುತ್ತಿರುವಂತೆ ಕೆತ್ತಲಾಗಿದೆ. ಆ ಹಂದಿ ತನ್ನ ಮುಖವನ್ನು ತಪ್ಪಿಸಿಕೊಳ್ಳಲು ಬಲಕ್ಕೆ ತಿರುಗಿದೆ. ಇಂತಹದೇ ಮತ್ತೊಂದು ದೃಶ್ಯ ಕುದುರೆಯ ಕೆಳಭಾಗದಲ್ಲಿದೆ. ಅದರಲ್ಲಿ ಹಂದಿ ಎಡಭಾಗದಲ್ಲಿದೆ. ನಾಯಿಯು ಬಲ ಭಾಗದಲ್ಲಿದ್ದು ತನ್ನ ಬಾಯಿಯನ್ನು ಹಂದಿಯ ಮುಖಕ್ಕೆ ಕಚ್ಚುತ್ತಿರುವಂತೆ ಕೆತ್ತಲಾಗಿದ್ದು ತನ್ನ ಬಾಲವನ್ನು ಮೇಲಕ್ಕೆ ಎತ್ತಿದೆ.

ಸಂಖ್ಯೆ : ೨೭
ಸ್ಮಾರಕ : ಹಂದಿಬೇಟೆ ವೀರಗಲ್ಲು
ಸ್ಥಳ : ಸೋಮನಾಥ ದೇವಾಲಯದ ಆವರಣದ ಎಡಭಾಗದಲ್ಲಿ
ಕಾಲ : ೧೨-೧೩ನೇ ಶತಮಾನ

ಈ ವೀರಗಲ್ಲಿನಲ್ಲಿ ವೀರನ ಬಹುಭಾಗ ತೃಟಿತವಾಗಿದೆ. ಇನ್ನು ಕುದುರೆಯೂ ಅಲಂಕಾರಗೊಂಡಿದ್ದು ವಿವಿಧ ಆಭರಣಗಳನ್ನು ಹಾಕಲ್ಪಟ್ಟಿದೆ. ಇದರ ಕಾಲುಗಳನ್ನು ಗಮನಿಸಿದರೆ ಇದು ಓಡುವ ಸ್ಥಿತಿಯಲ್ಲಿರುವಂತೆ ಭಾಸವಾಗುತ್ತದೆ. ಇದರ ಕೆಳಭಾಗದಲ್ಲಿ ನಾಯಿಯ ಶಿಲ್ಪವನ್ನು ಕಾಣುತ್ತೇವೆ. ಅದು ಮಾಸಿದ ರೀತಿಯಲ್ಲಿರವುದರಿಂದ ಸರಿಯಾಗಿ ಗುರುತಿಸಲಾಗುತ್ತಿಲ್ಲ.

ಸಂಖ್ಯೆ : ೨೮
ಸ್ಮಾರಕ : ವೀರಗಲ್ಲು
ಊರು : ಹುಲ್ಲೂರು
ಸ್ಥಳ : ದುರುಗಮ್ಮನ ಗುಡಿಯ ಮುಂದೆ
ಕಾಲ : ಕ್ರಿ.ಶ. ೧೫-೧೬ನೇ ಶತಮಾನ
ಪ್ರಮಾಣ : ೨ ಅಡಿ ಎತ್ತರ ೧ ಅಡಿ ಅಗಲ

ಈ ವೀರಗಲ್ಲು ಎರಡು ಅಡಿ ಎತ್ತರವಿದ್ದು. ವೀರಗಲ್ಲಿನಲ್ಲಿ ವೀರನು ಕೈಯಲ್ಲಿ ಖಡ್ಗ, ಬಂದೂಕು ಮತ್ತು ಗುರಾಣಿ ಹಿಡಿದಿರುವ ದೃಶ್ಯವಿದೆ. ಸೈನಿಕರ ಕಾಲುಗಳು ನೇರವಾಗಿಲ್ಲದೆ. ಕಣಕಾಲು ರೀತಿಯಲ್ಲಿವೆ. ವೀರನ ಪಕ್ಕದಲ್ಲಿ ಸೂರ್ಯ ಚಂದ್ರರ ಚಿತ್ರಣವಿದೆ.[೨೫]

ಸಂಖ್ಯೆ : ೨೯

ಸ್ಮಾರಕ : ವೀರಗಲ್ಲು

ಊರು : ಕ್ಯಾತನಹಟ್ಟಿ

ಸ್ಥಳ : ಹನಮಂತನ ಗುಡಿಯ ಮುಂಭಾಗ

ಕಾಲ : ಕ್ರಿ.ಶ. ೧೧-೧೨ನೇ ಶತಮಾನ

ಈ ವೀರಗಲ್ಲು ಐದು ಹಂತಗಳನ್ನು ಹೊಂದಿದೆ. ಇಲ್ಲಿನ ವೀರರ ಕೈಯಲ್ಲಿ ಖಡ್ಗ, ಗುರಾಣಿ, ಬಿಲ್ಲು, ಬಾಣ, ಹಿಡಿದು ತಲೆಗೆ ಪೇಟವನ್ನು ಸುತ್ತಿದ್ದಾನೆ. ಎರಡನೇ ಹಂತದಲ್ಲಿ ವೀರನು ಹೋರಾಡುತ್ತಿರುವಂತಹ ದೃಶ್ಯ, ಎರಡನೆ ಹಂತದಲ್ಲಿ ದೇವಕನ್ಯೆಯರು ಆ ವೀರನನ್ನು ಸ್ವರ್ಗಕ್ಕೆ ಕರೆದೊಯುತ್ತಿರುವ ಚಿತ್ರಣವಿದೆ. ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಚಿತ್ರಣವಿದೆ.[೨೯]

## ಇತರ ಶಾಸನ ಶಿಲ್ಪಗಳು

**ಲಿಂಗಮುದ್ರೆ ಕಲ್ಲು** : ಲಿಂಗಮುದ್ರೆ ಕಲ್ಲುಗಳು ದಾನ ಶಾಸನಗಳಲ್ಲಿ ಬರುವ ಒಂದು ಪ್ರಕಾರ. ಪ್ರಾಚೀನ ಕಾಲದಲ್ಲಿ ಶೈವ, ವೀರಶೈವ ದೇವಾಲಯಗಳಿಗೆ ಇಲ್ಲವೇ ಮಠಗಳಿಗೆ ದಾನ ನೀಡಿದ ಭೂಮಿಯ ಮೇರೆಗಳನ್ನು ಗುರುತಿಸಲು ಹಾಕಿದ ಕಲ್ಲುಗಳೇ ಲಿಂಗಮುದ್ರೆ ಕಲ್ಲುಗಳು. ಇವು ಎರಡು ಅಥವಾ ಮೂರು ಅಡಿಗಳಷ್ಟು ಎತ್ತರವಾಗಿರುತ್ತದೆ. ಶಾಸನದ ಮಧ್ಯಭಾಗ ಅಥವಾ ಮೇಲಿನ ಭಾಗದಲ್ಲಿ ಶಿವಲಿಂಗ ಅದರ ಪಕ್ಕದಲ್ಲಿ ಸೂರ್ಯ ಚಂದ್ರರನ್ನು ಕೆತ್ತಲಾಗಿರುತ್ತದೆ. ಬಹುತೇಕ ಲಿಂಗಮುದ್ರೆ ಕಲ್ಲುಗಳು ರೇಖೆಯಲ್ಲಿಯೇ ಚಿತ್ರಿತವಾಗಿರುತ್ತವೆ. ಲಿಂಗಮುದ್ರೆ ಕಲ್ಲುಗಳಲ್ಲಿ ದಿಕ್ಕುಗಳನ್ನು ಗಮನಿಸಲಾಗಿರುತ್ತದೆ.[೩೦] ಇಂತಹ ಲಿಂಗಮುದ್ರೆ ಕಲ್ಲುಗಳು ಪ್ರಸ್ತುತ ಅಧ್ಯಯನ ಪರಿಸರದ ಗ್ರಾಮಗಳಾದ ಸುಂಕನೂರು, ನಂಜಲದಿನ್ನಿ ಗ್ರಾಮಗಳಲ್ಲಿ ಕಂಡುಬರುತ್ತವೆ.

ಮುಖ್ಯವಾಗಿ ನಂಜಲದಿನ್ನಿಯಲ್ಲಿ ಎರಡು ಲಿಂಗಮುದ್ರೆ ಕಲ್ಲುಗಳು ಕಂಡುಬಂದಿವೆ. ಅದರಲ್ಲಿ ಒಂದು ಹಂಪನಾಳ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅಮರಯ್ಯಸ್ವಾಮಿ ಎಂಬುವವರ ಹೊಲದಲ್ಲಿ ಕಾಣಬಹುದಾಗಿದೆ. ಇನ್ನೊಂದು ಲಿಂಗಮುದ್ರೆ ಕಲ್ಲು ಪಾತ್‌ಪರವು ಎಂದು ಕರೆಲಾಗುವ ಸ್ಥಳದಲ್ಲಿ ಕಂಡುಬರುತ್ತದೆ. ಇದರಲ್ಲಿ ಒಬ್ಬ ವ್ಯಕ್ತಿ ತಪಸ್ಸಿನ ರೀತಿಯಲ್ಲಿ ಕುಳಿತಿದ್ದು, ಅದರ ಕೆಳಗಡೆ ನಂದಿಯ ಶಿಲ್ಪವಿದೆ. ಮೇಲಿನ ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

## ಕೊನೆ ಟಿಪ್ಪಣಿ

೧. ಶೇಷಶಾಸ್ತ್ರಿ. ಆರ್, ಶಾಸನ ಪರಿಚಯ, ೨೦೦೫, ಪು.೧

೨. ಸಿ.ಪಿ.ಕೆ ಶಾಸನಶಾಸ್ತ್ರ ಪ್ರವೇಶ, ೨೦೦೧, ಪು.೧

೩. ಚಿದಾನಂದಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೯೯, ಪು.೧೨

೪. ಇಂದುಮತಿ ಪಿ. ಪಾಟೀಲ, ಪ್ರಾಚಿನ ಭಾರತದ ಇತಿಹಾಸ, ೨೦೦೮, ಪು.೫೪

೫. ಸಿ.ಪಿ.ಕೆ, ಪೂರ್ವೋಕ್ತ, ೨೦೦೧, ಪು.೫

೬. ಶೇಷಶಾಸ್ತ್ರಿ, ಪೂರ್ವೋಕ್ತ, ಪು.೫

೭. ಸೀತರಾಮ ಜಾಗಿರದಾರ, 'ಹೈದ್ರಾಬಾದ ಕರ್ನಾಟಕದ ಶೈಕ್ಷಣಿಕ ಶಾಸನಗಳು', ೧೯೯೮, ಪು.೫

೮. ಬಸವರಾಜ ಕೋಡಗುಂಟಿ, ವೃತ್ತಿರಂಗಭೂಮಿಯ ನೋಡಗರು ಮತ್ತು ಇತರ ಲೇಖನಗಳು, ೨೦೦೭, ಪು.೬೨

೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ರಾಯಚೂರು ಜಿಲ್ಲೆ, ೨೦೦೩, ಪು,೧೬೨-೧೬೩

೧೦. ಅದೇ ಪು. ೧೬೩-೧೬೪

೧೧. ಅದೇ ಪು. ೧೬೫

೧೨. ಗುಂಡರಾವ್ ದೇಸಾಯಿ, ಶ್ರೀನಾವಾಸ ವೈಭವ (ಸ್ಮರಣ ಸಂಚಿಕೆ), ೨೦೧೨, ಪು.೯

೧೩. ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ೭, ಪೂರ್ವೋಕ್ತ, ೨೦೦೩, ಪು.೧೬೬-೧೭೦

೧೪. ಅದೇ, ಪು.೧೭೩

೧೫. ಅದೇ, ಪು.೧೭೮-೧೭೯

೧೬. ಅದೇ, ಪು.೨೬೫

೧೭. ಚನ್ನಬಸಪ್ಪ ಮಲ್ಕಂದಿನ್ನಿ, ಸುದ್ದಿಮೂಲ, (ದೀಪಾವಳಿ ವಿಶೇಷಾಂಕ), ಮಸ್ಕಿಯ ಪ್ರಾಚ್ಯಾವಶೇಷಗಳು, ೨೦೧೭ ಪು. ೪೭

೧೮. ಪೂರ್ವೋಕ್ತ, ಸಂಯುಕ್ತ ಕರ್ನಾಟಕ, ಡಿ-೨೬-೦೩-೨೦೧೫ ಪು.೦೪

೧೯. ಚಿದಾನಂದಮೂರ್ತಿ ಎಂ, ಪೋರ್ವೋಕ್ತ, ೧೯೬೯, ಪು.೧

೨೦. ಶೇಷಶಾಸ್ತ್ರಿ ಆರ್, ಕರ್ನಾಟಕದ ವೀರಗಲ್ಲುಗಳು, ೨೦೦೪, ಪು.೪೦೦

೨೧. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ೧೯೯೯, ಪು.೧೨

೨೨. ಷ ಶೆಟ್ಟರ್, ಸಾವನ್ನು ಸ್ವಾಗತಿಸಿ ಸಂ ೧, ೨೦೦೫, ಪು.೧೪

೨೩. ಶೇಷಶಾಸ್ತ್ರಿ, ಆರ್, ಕರ್ನಾಟಕದ ವೀರಗಲ್ಲುಗಳು ೨೦೦೪, ಪು.೪೦೦

೨೪. ಅದೇ, ಪು.೪೦

೨೫. ಅಮರೇಶ, ಬಳಗನೂರು ಹೋಬಳಿ ಪರಿಸರ : ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ., ೨೦೧೩, ಪು.೮೭

೨೬. ಅದೇ, ಪು.೮೭

೨೭. ಅದೇ, ಪು.೮

## ಅಧ್ಯಾಯ : ೫

## ಸಮಾರೋಪ

ಭಾರತೀಯ ಸಂಸ್ಕೃತಿಗೆ ಕರ್ನಾಟಕದ ಕೊಡುಗೆ ಅಪಾರವಾದುದು. ಇಲ್ಲಿನ ಪ್ರತಿ ಹಳ್ಳಿಯೂ ಭಾರತೀಯ ಸಂಸ್ಕೃತಿಗೆ ತಮ್ಮದೇಯಾದಂತಹ ಕಾಣಿಕೆಯನ್ನು ನೀಡಿವೆ ಎಂಬ ಮಾತು ಒಪ್ಪಿಕೊಂಡಿರುವಂತಹದ್ದು. ಇಂದು ಮರೆಯಾದ ಸಾಂಸ್ಕೃತಿಕ ಚರಿತ್ರೆಯನ್ನು ಮರುಜೋಡಣೆ ಮಾಡುವ ಕಾರ್ಯ ಸ್ಥಳೀಯ ಇತಿಹಾಸದಿಂದ ಆಗಬೇಕಾಗಿರುವುದು ಅನಿವಾರ್ಯವಾಗಿದೆ. ಇತಿಹಾಸವು ಪ್ರದೇಶ, ಪ್ರಾಂತ್ಯ, ರಾಜ್ಯ, ಸಂಸ್ಥೆ ಹಾಗೂ ಜನಾಂಗಗಳ ಕಥೆ ಎನ್ನುವುದನ್ನು ಮತ್ತೊಮ್ಮೆ ಪರಿಶೀಲಿಸುವುದು ಅಗತ್ಯ. ವಿವಿಧ ಪ್ರದೇಶದಲ್ಲಿರುವ ಜನರ ಜೀವನ ವಿಧಾನ, ಧರ್ಮ, ಸಂಸ್ಕೃತಿ, ಆಚರಣೆಗಳಲ್ಲಿ ಭಿನ್ನತೆಗಳಿವೆ. ಇವುಗಳನ್ನು ಒಟ್ಟುಗೂಡಿಸಿ ನಾಡಿನ ಇತಿಹಾಸವನ್ನು ನಿರ್ಮಿಸಬೇಕಾಗಿದೆ.

'ಮಸ್ಕಿ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ'ದಿಂದ ಅನೇಕ ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ. ಹಿಂದೆ ಈ ಪರಿಸರದಲ್ಲಿದ್ದಂತಹ ಅನೇಕ ಪ್ರಾಗಿತಿಹಾಸ ನೆಲೆಗಳು ನಾಶವಾಗಿದ್ದರಿಂದ ಅವುಗಳ ಮಾಹಿತಿ ಈಗ ಲಭ್ಯವಾಗಿಲ್ಲ. ಅದರೂ ಸಹ ನಂಜಲದಿನ್ನಿ ಗ್ರಾಮದಲ್ಲಿ ನವಶಿಲಾಯುಗದ ವಿವಿಧ ಬಗೆಯ ಮಡಿಕೆಯ ಚೂರುಗಳು, ಹುಲ್ಲೂರಿನಲ್ಲಿ ಬೃಹತ್ ಶಿಲಾಯುಗದ ಶಿಲಾಗೋರಿ, ಮಸ್ಕಿಯಲ್ಲಿ ತಾಮ್ರಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಅನೇಕ ಪರಿಕರಗಳು ಕಂಡುಬಂದಿವೆ. ಮೌರ್ಯರ ದೊರೆ ಅಶೋಕನಿಂದ ಪ್ರಾರಂಭವಾಗುವ ಇಲ್ಲಿನ ರಾಜಕೀಯ ಇತಿಹಾಸವು ಕ್ರಮೇಣವಾಗಿ ಸ್ಥಳೀಯ ಪಾಳೆಗಾರರು, ನಾಡಗೌಡ ಮನೆತನಗಳ ಆಳ್ವಿಕೆಯವರೆಗೂ ವಿಸ್ತರಿಸಿಕೊಂಡಿದೆ. ಕಲ್ಯಾಣ ಚಾಲುಕ್ಯ, ವಿಜಯನಗರ ಅರಸರ ಕಾಲದಲ್ಲಿ ಪ್ರಮುಖ ಆಡಳಿತ ಕೇಂದ್ರವಾಗಿದ್ದ ಈ ಪ್ರದೇಶವು ಮುಂದೆ "ಎಡದೊರೆ-೨೦೦೦" ನಾಡಿನ ರಾಜಧಾನಿಯಾಗಿ ಕಾರ್ಯನಿರ್ವಹಿಸಿತ್ತು ಎಂಬ ವಿಚಾರಗಳು ತಿಳಿದುಬಂದಿವೆ. ಇಲ್ಲಿನ ಪ್ರತಿಯೊಂದು ಗ್ರಾಮದ ಸ್ಥಳನಾಮ ಮತ್ತು ಐತಿಹ್ಯಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿವೆ. ಇವು ಇತಿಹಾಸ ರಚನೆಯಲ್ಲಿ ಸಹಾಯಕಗಳಾಗಿವೆ. ಉತ್ತಮ ಕಲೆ ಮತ್ತು ವಾಸ್ತುಶಿಲ್ಪವನ್ನು ಹೊಂದಿರುವ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳು ಇಲ್ಲಿವೆ. ಮಸ್ಕಿಯ ಕಲ್ಗುಡಿ ಚೌಡೇಶ್ವರಿ ದೇವಾಲಯವು ಮೂಲತಃ ಜೈನ ಬಸದಿಯಾಗಿರಬಹುದಾಗಿದೆ. ಇದನ್ನು ಸರಿಯಾದ ಅಧ್ಯಯನಗಳಿಂದ ಗುರುತಿಸಬೇಕಾಗಿದೆ. ಸಾನಬಾಳ ಗ್ರಾಮದ ರಾಮಲಿಂಗ(ಈಶ್ವರ)ದೇವಾಲಯ ಪ್ರಸ್ತುತ ಶಿಥಿಲಾವಸ್ಥೆಯಲ್ಲಿದೆ. ರಕ್ಷಣೆಯಿಲ್ಲದೆ ಇರುವುದರಿಂದ ಬಹುಬೇಗ ನಶಿಸುವ ಸ್ಥಿತಿಯಲ್ಲಿದೆ. ಮಸ್ಕಿಯ ಅಶೋಕನ

ಶಿಲಾಶಾಸನಕ್ಕೆ ಅಲ್ಪ ಪ್ರಮಾಣದ ರಕ್ಷಣೆ ಮಾತ್ರ ಮಾಡಿ ಬಹುತೇಕವಾಗಿ ಅಭಿವೃದ್ಧಿಯಿಂದ ಇನ್ನೂ ಬಹು ದೂರವಿದ್ದುದ್ದು ವಿಪರ್ಯಾಸವೇ ಸರಿ. ಮಸ್ಕಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿಂಭಾಗದಲ್ಲಿರುವ ಐತಿಹಾಸಿಕ "ಸೂಳೆದಿಬ್ಬ"ದಲ್ಲಿ ಉತ್ಖನನವನ್ನು ಮಾಡಿ ಸೂಕ್ತವಾದ ಇತಿಹಾಸವನ್ನು ಬೆಳಕಿಗೆ ತರಬೇಕಿದೆ. ಇಲ್ಲದಿದ್ದರೇ ಅದು ಸಹ ಮಾನವನ ದುರಾಸೆ ಮತ್ತು ಅನೈತಿಕ ಚಟುವಟಿಕೆಗಳಿಗೆ ನಾಶವಾಗುವ ಹಂತದಲ್ಲಿದೆ. ಇನ್ನುಳಿದಂತೆ ೧೯೫೩-೫೪ರಲ್ಲಿ ಬಿ.ಕೆ.ಥಾಪರ್‌ರವರು ಉತ್ಖನನ ಮಾಡಿದಂತಹ ಪ್ರದೇಶ ಪ್ರಸ್ತುತ ಜಾಲಿಯ (ಮುಳ್ಳು ಜಾತಿಗೆ ಸೇರಿದ ಮರ) ಮರಗಿಡಗಳು ಬೆಳೆದು ಸಂಪೂರ್ಣವಾಗಿ ನಶಿಸಿದೆ. ಮಸ್ಕಿಯ ಪ್ರವಾಸಿಮಂದಿರದೊಳಗೆ ತಂದು ಹಾಕಲಾಗಿರುವ ಬಹುತೇಕ ಶಾಸನಗಳು, ವೀರಗಲ್ಲುಗಳು, ವಿವಿಧ ಸ್ಮಾರಕದ ಭಾಗಗಳು ಸಂಪೂರ್ಣವಾಗಿ ಅಲಕ್ಷ್ಯಕ್ಕೆ ಒಳಗಾಗಿವೆ. ಹೀಗೆ ಆದರೆ ಮಸ್ಕಿಯ ಬಹುತೇಕ ಚಾರಿತ್ರಿಕ ದಾಖಲೆಗಳು ಕಣ್ಮರೆಯಾಗುವ ಕಾಲ ಬಹುದೂರವಿಲ್ಲ.

ಮಸ್ಕಿ ಪರಿಸರದಲ್ಲಿ ಶೈವ, ವೈಷ್ಣವ ಸಂಪ್ರಾದಾಯಗಳಿಗೆ ಸಂಬಂಧಿಸಿದ ಮೂರ್ತಿಶಿಲ್ಪಗಳು ಕಂಡುಬಂದಿವೆ. ಶೈವ ಸಂಪ್ರದಾಯಕ್ಕೆ ಸಂಬಂಧಿಸಿದ ಶಿವನ ಸಂಕೇತವಾಗಿ ಪೂಜಿಸಲ್ಪಡುವ ವಿವಿಧ ಬಗೆಯ ಬ್ರಹ್ಮಸೂತ್ರಗಳನ್ನೊಳಗೊಂಡ ಶಿವಲಿಂಗಗಳು, ನಂದಿ, ಗಣೇಶ, ವೀರಭದ್ರ, ವೈಷ್ಣವ ಧರ್ಮದ ವಿಷ್ಣುವಿನ ಚತುರ್ವಿಂಶ ಶಿಲ್ಪಗಳಲ್ಲಿ ಲಕ್ಷ್ಮೀನಾರಾಯಣ, ಹನುಮಂತ, ವಿಷ್ಣು, ಗರುಡ ಶಿಲ್ಪಗಳು, ಶಾಕ್ತ ಸಂಪ್ರದಾಯದ ಶಿಲ್ಪಗಳಲ್ಲಿ ಚೌಡೇಶ್ವರಿ, ಸಪ್ತಮಾತೃಕೆಗಳು ಶಿಲ್ಪಗಳು ಕಂಡುಬಂದಿವೆ. ಇವುಗಳಿಂದ ಈ ಪ್ರದೇಶದ ಜನರು ತಮ್ಮದೇಯಾದ ದೈವತ್ವವನ್ನು ಸ್ವೀಕರಿಸಿ ಪೂಜಿಸುತ್ತಿದ್ದರೆಂಬುದಂತೂ ಸ್ಪಷ್ಟ.

ಲೌಕಿಕ ವಾಸ್ತುಶಿಲ್ಪಗಳಲ್ಲಿ ಕೆರೆಬಾವಿಗಳು, ಕೋಟೆ ಅವಶೇಷಗಳು ಪ್ರಮುಖವಾಗಿ ಗೋಚರಿಸಿವೆ. ಚಿಕ್ಕ ಕಡಬೂರು, ಹೂವಿನಬಾವಿ, ಕಾಟಿಗಲ್ಲು ಗ್ರಾಮಗಳಲ್ಲಿನ ಬಾವಿಗಳು ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಅನೇಕ ಅಂಶಗಳನ್ನು ಅರಹುತ್ತವೆ. ಸಾನಬಾಳ ಮತ್ತು ನಂಜಲದಿನ್ನಿ ಗ್ರಾಮಗಳಲ್ಲಿ ಪಾಳೆಯಗಾರರ ಕಾಲದ ಕೋಟೆಯ ಅವಶೇಷಗಳು ಕಂಡುಬಂದಿವೆ. ಇದರಿಂದ ಈ ಪ್ರದೇಶ ರಾಜಕೀಯ ದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಮತ್ತು ಪಾಳೆಯಗಾರರ ಮತ್ತು ಇನ್ನಿತರ ಅರಸುಮನೆತನಗಳ ಆಳ್ವಿಕೆಯ ಕೇಂದ್ರಸ್ಥಾನವಾಗಿತ್ತೆಂದು ದೃಢವಾಗುತ್ತದೆ.

ಶಾಸನ ಶಿಲ್ಪಗಳಿಂದ ಈ ಪ್ರದೇಶವು ಮಹತ್ವವನ್ನು ಪಡೆಯುತ್ತದೆ. ಮೌರ್ಯರು, ಚೋಳರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ವಿಜಯನಗರ ಕಾಲದ ಶಾಸನಗಳು ಲಭ್ಯವಾಗಿವೆ. ಇವೆಲ್ಲವು ದಾನಶಾಸನಗಳಾಗಿದ್ದು, ಸರ್ವ ಧರ್ಮ ಸಮನ್ವಯತೆವನ್ನು ಸಾರುತ್ತವೆ.

ಸ್ಮಾರಕ ಶಾಸನಗಳಲ್ಲಿ ವೀರಗಲ್ಲುಗಳೇ ಮೊದಲ ಸ್ಥಾನದಲ್ಲಿ ನಿಲ್ಲುತ್ತವೆ. ವೀರಗಲ್ಲುಗಳು ವಿವಿಧ ಹಂತಗಳನ್ನು ಹೊದಿದೆ. ಕಲ್ಯಾಣ ಚಾಲುಕ್ಯರ ವೀರಗಲ್ಲುಗಳಲ್ಲಿ ಹೋರಾಟದ ಚಿತ್ರವನ್ನು ಮೂರು ನಾಲ್ಕು ಹಂತಗಳಲ್ಲಿ ಚಿತ್ರಿಸಿದರೆ, ವಿಜಯನಗರ ಮತ್ತು ವಿಜಯನಗರೋತ್ತರ ವೀರಗಲ್ಲುಗಳಲ್ಲಿ ಕುದುರೆ ಮೇಲೆ ಕುಳಿತ ವೀರನ ಹಾಗೂ ಧ್ವಜ ಹಿಡಿದಿರುವ ಸೈನಿಕನ ಚಿತ್ರಣವನ್ನು ವಿಶಿಷ್ಟವಾಗಿ ಚಿತ್ರಿಸಲಾಗಿದೆ. ಧ್ವಜಗಳು, ಬಂದೂಕುಗಳು, ಛತ್ರಿಗಳು ಆ ಪ್ರದೇಶದ ಮೇಲಿನ ಅಧಿಕಾರ ಮತ್ತು ಪ್ರಭುತ್ವವನ್ನು ಸೂಚಿಸುತ್ತವೆ. ಈ ರೀತಿಯ ವೀರಗಲ್ಲುಗಳು ಮಸ್ಕಿ, ನಂಜಲದಿನ್ನಿ, ಕಾಟಿಗಲ್ಲು, ಸಾನಬಾಳ ಗ್ರಾಮಗಳಲ್ಲಿ ಕಂಡುಬರುತ್ತವೆ. ಕಾಟಿಗಲ್ಲಿನ ಸೋಮೇಶ್ವರ ದೇವಸ್ಥಾನದ ಮುಂಭಾಗದಲ್ಲಿ ತೃಟಿತವಾಗಿ ಬಿದ್ದಿರುವಂತಹ ಎರಡು "ಹಂದಿಬೇಟೆ ವೀರಗಲ್ಲು"ಗಳು ವಿಶೇಷವಾಗಿವೆ. ನಂಜಲದಿನ್ನಿ ಗ್ರಾಮದಲ್ಲಿ ವಿಜಯನಗರೋತ್ತರ ಕಾಲದ ಬಂದೂಕ ವೀರಗಲ್ಲು ಇದೆ. ವಿಜಯನಗರ ಮತ್ತು ನಂತರದ ಪಾಳೆಯಗಾರರು ಪ್ರಥಮವಾಗಿ ಯುದ್ಧಗಳಲ್ಲಿ ಬಳಸಿದ ಸಿಡಿಮದ್ದಿನ ಬಳಕೆಯ ಪ್ರತೀಕವಿದು.

ಒಟ್ಟಾರೆಯಾಗಿ ಈ ಅಧ್ಯಯನ ಕುರಿತು ಹೇಳುವುದಾದರೆ, ಇಲ್ಲಿನ ಪುರಾತತ್ವೀಯ ಆಕರಗಳು, ದೇವಾಲಯಗಳು, ಶಾಸನಗಳು, ಸ್ಮಾರಕಶಿಲ್ಪಗಳು. ಹಾಗೂ ಇತರೆ ಸ್ಮಾರಕಾವಶೇಷಗಳು ಪ್ರಾದೇಶಿಕವಾಗಿ ಕನ್ನಡನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ಸಲ್ಲಿಸಿರುವುದು ದೃಢವಾಗುತ್ತದೆ. ಇಷ್ಟೆಲ್ಲಾ ಮಹತ್ವದ ವಿಷಯಗಳನ್ನು ಹೊರಗಿಡುವ ಈ ಅವಶೇಷಗಳು ವಿನಾಶದ ಅಂಚಿನಲ್ಲಿವೆ. ಮಾನವ ಸ್ವಾರ್ಥ, ಮೂಢನಂಬಿಕೆ ಮತ್ತು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಸಂಘಸಂಸ್ಥೆಗಳು ಮತ್ತು ಜನರು ಇವುಗಳ ಸಂರಕ್ಷಣೆಗೆ ಮುಂದಾಗಬೇಕಿದೆ.

ಈ ಪರಿಸರದ ಬಗ್ಗೆ ವ್ಯವಸ್ಥಿತವಾದಂತಹ ಅಧ್ಯಯನಗಳು ನಡೆದಿದ್ದರೆ, ಇನ್ನೂ ಹೆಚ್ಚಿನ ಅಂಶಗಳು ಬೆಳಕಿಗೆ ಬರುತ್ತಿದ್ದವೆಂಬುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಮಸ್ಕಿ ಪಟ್ಟಣದಲ್ಲಿ ಇದ್ದವೆನ್ನಲಾದ ಜೈನ ಬಸದಿಗಳು, ಕಾಟಿಗಲ್ಲಿನಲ್ಲಿ ಇತ್ತೆನ್ನಲಾದ ಬಾವಿಯ ನಿಖರವಾದ ಅವಶೇಷಗಳು ಸಿಗುವುದಿಲ್ಲ. ಇದರಿಂದ ಈ ಭಾಗದ ಅಧ್ಯಯನಕ್ಕೆ ಸ್ವಲ್ಪ ಹಿನ್ನಡೆ ಉಂಟಾಗಿರುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಇಂತಹ ಅನೇಕ ವಿಷಯಗಳನ್ನು ಒಳಗೊಂಡಿರುವ ಅದೆಷ್ಟೋ ಗ್ರಾಮಗಳು, ಪ್ರದೇಶಗಳು, ಮಸ್ಕಿ ಪರಿಸರ ಮತ್ತು ರಾಯಚೂರು ಜಿಲ್ಲೆಗಳಲ್ಲಿವೆ. ಇಂದು ಅವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಅವುಗಳ ಬಗ್ಗೆ ತುರ್ತಾಗಿ ಅಧ್ಯಯನಗಳು ನಡೆದಾಗ ಮಾತ್ರ ಈ ನಾಡಿನ ಇತಿಹಾಸದಲ್ಲಿ ಅವುಗಳ ಪಾತ್ರ ಮತ್ತು ಮಹತ್ವವೇನು ಎಂದು ತಿಳಿದುಬರುತ್ತದೆ.

## ಅಧ್ಯಯನ ಫಲಿತಗಳು

- ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದಂತೆ ಮಸ್ಕಿಯ ದುರ್ಗದ ಬೆಟ್ಟದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ *pot burial* ದೊರೆತಿದ್ದು, ಇದರಲ್ಲಿ ಆ ಕಾಲದ ಮಾನವನ (ಮಗು) ಮೂಳೆಗಳು, ವಸಡಿನ ಭಾಗ ಮತ್ತು ಮೇಲ್ಭಾಗದ ಹಲ್ಲುಗಳು ದೊರೆತಿವೆ.
- ನವಶಿಲಾಯುಗಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅಧ್ಯಯನದಲ್ಲಿ ನಂಜಲದಿನ್ನಿ ಗ್ರಾಮದ ಸುತ್ತಮುತ್ತಲೂ ಮೂರು ನೆಲೆಗಳನ್ನು ಶೋಧಿಸಲಾಗಿದೆ. ಈ ನೆಲೆಗಳಲ್ಲಿ ಪ್ರಾಚ್ಯಾವಶೇಷಗಳಾದ ಮಡಿಕೆಗಳು, ಬೂದಿಯ ದಿನ್ನೆಗಳನ್ನು ಪತ್ತೆ ಹಚ್ಚಿರುವುದು ಈ ಅಧ್ಯಯನದ ಫಲಿತವಾಗಿದೆ.
- ಸ್ಥಳೀಯ ನಾಡಗೌಡರ (ಮೆದಕಿನಾಳ ನಾಡಗೌಡ) ಆಳ್ವಿಕೆಗೆ ಸಬಂಧಿಸಿದಂತೆ ಒಟ್ಟು ೩೩ ಹಳ್ಳಿಗಳ ಪೈಕಿ ಇದುವರೆಗೆ ೨೯ ಹಳ್ಳಿಗಳನ್ನು ಮಾತ್ರ ಗುರುತಿಸಲಾಗಿತ್ತು. ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಇದಕ್ಕೆ ಸಂಬಂಧಿಸಿದಂತೆ ನಂಜಲದಿನ್ನಿ ಮತ್ತು ನಾಗರಬೆಂಚಿ ಎಂಬ ಎರಡು ಗ್ರಾಮಗಳನ್ನು ಗುರುತಿಸಿ, ಆಕರಗಳ ಸಮೇತವಾಗಿ ಇವು ಮೆದಕಿನಾಳ ನಾಡಗೌಡರ ಆಳ್ವಿಕೆಗೆ ಒಳಪಟ್ಟಿದ್ದವು ಎಂದು ಸಾಬಿತುಪಡಿಸಲಾಗಿದೆ.
- ಸಾನಬಾಳ ಗ್ರಾಮದಲ್ಲಿ ೧೯ನೇ ಶತಮಾನದ ತರುವಾಯ ನಿರ್ಮಾಣಗೊಂಡಿರಬಹುದಾದ ಹನುಮಂತ ಗುಡಿ ಇರುವಂತಹ ಪ್ರದೇಶದಲ್ಲಿ ಅದಕ್ಕೂ ಪೂರ್ವದಲ್ಲಿ ಅಂದರೇ ಕಲ್ಯಾಣ ಚಾಲುಕ್ಯ ಕಾಲಾವಧಿಯಲ್ಲಿ ನಿರ್ಮಿಸಿರಬಹುದಾದ ದೇವಾಲಯದ ಇಲ್ಲಿ ಇರಬಹುದು ಎಂಬುವುದನ್ನು ಅಲ್ಲಿ ದೊರೆತ ಕುರುಹುಗಳ ಮೂಲಕ ಸಾಬಿತುಪಡಿಸಲಾಗಿದೆ.
- ಕಾಟಿಗಲ್ಲು ಗ್ರಾಮದಲ್ಲಿ ಸ್ಥಳೀಯ ಪಾಳೇಯಗಾರರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿರ ಬಹುದಾದ ಸೋಮನಾಥ ದೇವಾಲಯವನ್ನು ಗುರುತಿಸಲಾಗಿದ್ದು, ಈ ದೇವಾಲಯದ ಆವರಣದಲ್ಲಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕೆತ್ತಲ್ಪಟಿರುವಂತಹ ಎರಡು 'ಹಂದಿಬೇಟೆ ವೀರಗಲ್ಲು' ಗಳನ್ನು ಗುರುತಿಸಾಗಿದೆ. ಜೊತೆಗೆ ಈ ಗ್ರಾಮದಲ್ಲಿ ಎರಡು ಬಂದೂಕು ವೀರಗಲ್ಲು, ಎರಡು ಮಾಸ್ತಿಕಲ್ಲುಗಳನ್ನು ಸಹ ಪತ್ತೆ ಹಚ್ಚಿರುವುದು. ಈ ಅಧ್ಯಯನದ ಫಲಿತ ಎಂದು ಹೇಳಬಹುದಾಗಿದೆ.

- ಮಸ್ಕಿಯ ಬೆಟ್ಟದ ಚೌಡೇಶ್ವರಿ ದೇವಸ್ಥಾನದ ನವರಂಗದ ಬಲ (ದಕ್ಷಿಣ) ಬದಿಯ ಹೊರಭಿತ್ತಿಯಲ್ಲಿ ಮತ್ತು ಕಲ್ಲುಗಿಡಿ ಚೌಡೇಶ್ವರಿ ದೇವಸ್ಥಾನದ ಗರ್ಭಗುಡಿ ಭಾಗದಲ್ಲಿ ಎರಡು ಅಪ್ರಕಟಿತ ಶಾಸನಗಳನ್ನು ಪತ್ತೆ ಹಚ್ಚಲಾಗಿತ್ತು. ಸದರಿ ಶಾಸನಗಳನ್ನು ಸ್ಥಳೀಯ ಉಪನ್ಯಾಸಕರಿಗೆ ತೋರಿಸಿದ್ದರಿಂದ ಅವರು ದಿನಾಂಕ ೨೭/೭/೨೦೧೮ ರಂದು ದಿನ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.
- ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ಲೌಕಿಕ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಸಾನಬಾಳ ಗ್ರಾಮದಲ್ಲಿ ಕೋಟೆ ದ್ವಾರ ಮತ್ತು ನಂಜಲದಿನ್ನಿ ಗ್ರಾಮದಲ್ಲಿ ಹುಡೇವು ಗುರುತಿಸಿ ದಾಖಲಿಸಲಾಗಿದೆ.
- ನಂಜಲದಿನ್ನಿ ಗ್ರಾಮದಲ್ಲಿ ಸ್ಮಾರಕ ಶಿಲ್ಪಗಳಿಗೆ ಸಂಬಂಧಿಸಿದಂತೆ ಎರಡು ಬಂದೂಕು ವೀರಗಲ್ಲುಗಳನ್ನು ಮತ್ತು ನಾಲ್ಕು ವೀರಗಲ್ಲುಗಳನ್ನು ಗುರುತಿಸಿ ಅವುಗಳನ್ನು ಸ್ಥಳೀಯರ ಸಹಕಾರದಿಂದ ಅಲ್ಪ ಪ್ರಮಾಣದಲ್ಲಿ ಸಂರಕ್ಷಿಸುವ ಪ್ರಯತ್ನ ಮಾಡಿರುವುದು. ಈ ಅಧ್ಯಯನದ ಬಹು ಮುಖ್ಯ ಫಲಿತ ಎಂದರೇ ತಪ್ಪಾಗಲಾರದು. ಜೊತೆಗೆ ಇದೇ ಗ್ರಾಮದಲ್ಲಿ ಎರಡು ಲಿಂಗಮುದ್ರೆ ಕಲ್ಲುಗಳನ್ನು ಸಹ ಗುರುತಿಸಲಾಗಿರುವುದು ವಿಶೇಷವಾಗಿದೆ.

# ಪರಾಮರ್ಶನ ಗ್ರಂಥಗಳು

## ಪ್ರಾಥಮಿಕ ಆಕರಗಳು

*Andhra Pradesh Government Archaeological Series* Vol.13

*Annural Reports of Indian Epigraphy*

*Epigraphia Indica*

*Incriptions of Karnataka* Vols 3 and 4

*Kannada University Epigraphical Series Vol.7 (Raichur distict)*

*Kannada University Epigraphical Series, Kannada Inscriptions of Andhra Pradesh Vol. 2*

*Hyderbad Archaeological Series No-18 (Ed) P.B.Desai*

*Kananda Inscriptions of Andhra Pradesh (Ed.Vasudevan C.S)*

*Mysore State Geztteer,1970, Raichur District.*

*The New Ashokhan Edict Maski, KrishnaSastri*

## ಆನುಷಂಗಿಕ ಆಕರಗಳು

ಅಂಬಳಿಕೆ ಹಿರಿಯಣ್ಣ (ಪ್ರ.ಸಂ)., ೨೦೦೯, 'ಕನ್ನಡ ವಿಷಯ ವಿಶ್ವಕೋಶ, ಸಂ.೪, ಇತಿಹಾಸ ಮತ್ತು ಪುರಾತತ್ವ', ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅಮರೇಶ ನುಗಡೋಣಿ., ೧೯೯೯, 'ರಾಯಚೂರು ಜಿಲ್ಲೆಯಲ್ಲಿ ಹೈದ್ರಾಬಾದ್ ಕರ್ನಾಟಕದ ವಿಮೋಚನಾ ಚಳುವಳಿ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಮರೇಶ ಯತಗಲ್., ೨೦೦೮, 'ಇತಿಹಾಸ ಇಂಚರ', ಆದಿತಿ ಪ್ರಕಾಶನ, ಲಿಂಗಸುಗೂರು.

ಅಮರೇಶ ಯತಗಲ್., (ಸಂ), ೨೦೧೦, 'ದೋ-ಅಬ್ ರಾಯಚೂರು ಇತಿಹಾಸ', ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು.

ಅಪರ್ಣ ಕೂ.ಸ., ೧೯೯೯, 'ದೇವಾಲಯದ ವಾಸ್ತುಶಿಲ್ಪ ಪರಿಚಯ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೃಷ್ಣರಾವ್ ಎಂ.ವ್ಹಿ ಮತ್ತು ಕೇಶವಭಟ್ಟ ಎಂ., ೧೯೭೦, 'ಕರ್ನಾಟಕ ಇತಿಹಾಸ ದರ್ಶನ', ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ(ನಿ), ಬೆಂಗಳೂರು.

ಚನ್ನಬಸಪ್ಪ ಕೋ., ೧೯೭೭, 'ಅಶೋಕನ ಶಿಲಾಶಾಸನಗಳು', ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಚನ್ನಬಸಪ್ಪ ಬಿ, ೨೦೦೫, 'ಬಳಗಾನೂರು ಅಪ್ರಕಟಿತ ಶಾಸನಗಳು', ಇತಿಹಾಸ ದರ್ಶನ ಸಂ.೨೦, ಕರ್ನಾಟಕ ಇತಿಹಾಸ ಅಕಾಡೆಮಿ(ರಿ), ಬೆಂಗಳೂರು.

ಚನ್ನಬಸಪ್ಪ ಬಿ. ಮಲ್ಕಂದಿನ್ನಿ., ೨೦೧೦, 'ರಾಯಚೂರು ಜಿಲ್ಲೆಯ ಚರಿತ್ರೆ ಶಾಸನಗಳ ಹಿನ್ನೆಲೆಯಲ್ಲಿ', ಅಕ್ಷರ ಮಂಟಪ, ಆರ್.ಪಿ ಲೇಔಟ್, ಬೆಂಗಳೂರು.

ಚನ್ನಬಸಪ್ಪ ಹಿರೇಮಠ., ೧೯೯೯, 'ರಾಯಚೂರು-ಕೊಪ್ಪಳ ಜಿಲ್ಲೆ ಶಾಸನಗಳು', ಚೇತನ್ ಪ್ರಕಾಶನ, ಮಸ್ಕಿ.

ಚನ್ನಬಸವ ಹಿರೇಮಠ., ೨೦೦೦, 'ಮಾನ್ವಿ ತಾಲ್ಲೂಕಿನ ಶಾಸನಗಳು', ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು.

ಚನ್ನಬಸವ ಹಿರೇಮಠ., ೨೦೦೦, 'ಎಡೆದೊರೆ ನಾಡು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚನ್ನಬಸವ ಹಿರೇಮಠ., ೨೦೦೮, 'ಸತ್ಯದ ಹಾದಿ' ಭಂಢಾರ ಪ್ರಕಾಶನ, ಮಸ್ಕಿ.

ಚಿತ್ರಗಾರ ಎಚ್.ಎನ್., ೨೦೧೦, 'ರಾಯಚೂರು ಜಿಲ್ಲೆಯ ಪ್ರಾಚೀನ ದೇವಾಲಯಗಳು', ನಿರಂಜನ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ, ರಾಯಚೂರು.

ಚಿದಾನಂದಮೂರ್ತಿ ಎಂ., ೧೯೬೬, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ತಿಪ್ಪೇರುದ್ರಸ್ವಾಮಿ ಎಚ್., ೧೯೯೪, 'ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ', ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

ದೇವರಕೊಂಡಾರೆಡ್ಡಿ., ೧೯೯೯, 'ದಿದ್ದಿಗೆಯ ಕಾಮಕೋಟಿ ಭಳಾರಿ ಶಾಸನ', ಇತಿಹಾಸದರ್ಶನ ಸಂ.೧೪, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು.

ದೇವೇಂದ್ರಪ್ಪ ಜಾಜಿ., ೨೦೦೪, 'ಆಂಧ್ರ-ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು', ವಿಕಾಸ್ ಪ್ರಕಾಶ, ಹೊಸಪೇಟೆ.

ಧೃವನಾರಾಯಣ., ೨೦೧೫, 'ರಾಯಚೂರು ಇತಿಹಾಸ', ಎಸ್.ಎಲ್.ಎನ್ ಪಬ್ಲಿಕೇಷನ್, ಬೆಂಗಳೂರು.

ನಾಗಯ್ಯ ಜೆ.ಎಂ., 'ಆರನೇಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ', ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪಾಡಿಗಾರ್ ಎಸ್.ವಿ., ೧೯೮೭, 'ಪುರಾತತ್ವ ಪರಿಚಯ', ರಾಮಾಶ್ರಮ ಪಬ್ಲಿಕೇಷನ್ಸ್, ಧಾರವಾಡ.

ಪ್ರಭಾಕರ್ ಎಂ.ಎಸ್., ೨೦೧೧, 'ದೇವಾಲಯ ವಾಸ್ತು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೃತ್ಯುಂಜಯ ಹೊರಕೇರಿ ಮತ್ತು ಬಸಲಿಂಗ ಸೊಪ್ಪಿನಮಠ., ೨೦೦೫, 'ರಾಯಚೂರು ಜಿಲ್ಲಾದರ್ಶನ' ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ಲಕ್ಷ್ಮಣ ತೆಲಗಾವಿ., ೨೦೦೪, 'ಮೌರ್ಯ ಮತ್ತು ಶಾತವಾಹನಯುಗ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವನ್.ಸಿ.ಎಸ್., ೨೦೧೦, 'ಕರ್ನಾಟಕ ದೇವಾಲಯಕೋಶ ರಾಯಚೂರು ಜಿಲ್ಲೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಾಶ್ವತ ಮುಕ್ಕುಂದಿಮಠ., ೨೦೦೮, 'ಕೃಷ್ಣ ತುಂಗೆ ನೆಲದಸಿರಿ', ಸಿಮುಖ ಪ್ರಕಾಶನ, ಬೆಂಗಳೂರು.

ಶಿವತಾರಕ್ ಕೆ.ಬಿ., 'ಕರ್ನಾಟಕ ಪುರಾತತ್ವ ನೆಲೆಗಳು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀನಿವಾಸ ಬಿ.ವಿ., ೧೯೫೭, 'ರಾಯಚೂರು ಇತಿಹಾಸ', ಶ್ರೀನಿವಾಸ ಮುದ್ರಣಾಲಯ, ರಾಯಚೂರು.

ಶೇಷಶಾಸ್ತ್ರಿ.ಆರ್., ೨೦೦೪, 'ಕರ್ನಾಟಕದ ವೀರಗಲ್ಲುಗಳು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸೋಮಶೇಖರ್. ಎಸ್.ವೈ., ೨೦೦೯, 'ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ಪಿಎಚ್‌ಡಿ ಸಂಶೋಧನ ಪ್ರಬಂಧಗಳು

ಅಮರೇಶ ಆಲ್ಕೋಡ, ೨೦೧೫, ರಾಯಚೂರು ದೋ-ಅಬ್ ಪ್ರದೇಶ: ಅಧಿಕಾರ ಮತ್ತು ಹೋರಾಟ, ಅಪ್ರಕಟಿತ ಪಿಎಚ್‌ಡಿ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಂಜುನಾಥ ಜೋಗಿನಕಟ್ಟೆ, ೨೦೧೧, ಮಸ್ಕಿ ಕನ್ನಡ: ಒಂದು ಭಾಷಿಕ ಅಧ್ಯಯನ, ಪಿಎಚ್‌ಡಿ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸುಜಾತ ಮಲ್ಲನಗೌಡ, ೨೦೦೦, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು ಒಂದು ಅಧ್ಯಯನ, ಅಪ್ರಕಟಿತ ಪಿಎಚ್‌ಡಿ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿದ್ಧರಾಮ.ಜಿ. ನಾಯಕ, ೨೦೧೪, ಉತ್ತರ ಕರ್ನಾಟಕದ ವೀರಗಲ್ಲುಗಳ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪಿಎಚ್‌ಡಿ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ಎಂ.ಫಿಲ್. ಸಂಶೋಧನ ಪ್ರಬಂಧಗಳು


ಅಮರೇಶ, ೨೦೧೧, ಬಳಗಾನೂರ ಹೋಬಳಿ ಪರಿಸರದ ಸಾಂಸ್ಕೃತಿತ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಮರೇಶ ಆಲ್ಕೋಡ, ೨೦೧೨, ದೇವದುರ್ಗ ಚಾರಿತ್ರಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಿರುಪತಿ.ಜಿ, ೨೦೦೭, ಮುಕ್ಕುಂದಿ ಇತಿಹಾಸ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪದ್ಮಾಜಾ ದೇಸಾಯಿ, ೨೦೦೮, ರಾಯಚೂರು ಪರಿಸರದ ಪ್ರಾಚೀನ ದೇವಾಲಯಗಳು, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹೇಶ, ೨೦೦೧, ಗಬ್ಬೂರಿನ ಶಾಸನಗಳು ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಜಯಲಕ್ಷ್ಮೀ, ೨೦೦೬, ಹಟ್ಟಿ ಚಿನ್ನದಗಣಿ ಚಾರಿತ್ರಿಕ ಹಾಗೂ ಸಮಾಜೋ ಆರ್ಥಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿಲ್ಪಾ.ಜೆ.ಎಮ್. ೨೦೦೯ ರಾಯಚೂರು ಜಿಲ್ಲಾ ಶಾಸನ ಸಾಹಿತ್ಯದಲ್ಲಿ ಮಹಿಳೆಯರು, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿದ್ಧರಾಮ.ಜಿ. ನಾಯಕ, ೨೦೧೦, ರಾಯಚೂರು ಪ್ರದೇಶದ ಹೈಹಯರ ಇತಿಹಾಸ: ಶಾಸನಗಳ ಸಮಜೋಧಾರ್ಮಿಕ ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ಸಂಶೋಧನ ನಿಯತಕಾಲಿಕೆಗಳು

ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಕರ್ನಾಟಕ ಭಾರತಿ, ಕನ್ನಡ ವಿಶ್ವವಿದ್ಯಾಲಯ ಧಾರವಾಡ.

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ.

ಪ್ರಬುದ್ಧ ಕರ್ನಾಟಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಸ್ವವಿದ್ಯಾಲಯ, ಮೈಸೂರು.

## ದಿನಪತ್ರಿಕೆಗಳು

ಚನ್ನಬಸಪ್ಪ ಮಲ್ಕಂದಿನ್ನಿ, "ಮಸ್ಕಿ ಬಳಿ ಚೋಳರ ಶಾಸನ ಪತ್ತೆ", ವಿಜಯ ಕರ್ನಾಟಕ, ದಿನಾಂಕ ೦೬.೦೪.೨೦೧೩.

ಚನ್ನಬಸಪ್ಪ ಮಲ್ಕಂದಿನ್ನಿ, ಮಸ್ಕಿಯಲ್ಲಿ ಶೈವ ಶಾಸನಪತ್ತೆ, ವಿಜಯ ಕರ್ನಾಟಕ, ದಿನಾಂಕ ೨೬.೦೩.೨೦೧೫.

ಸೂರ್ಯನಾಥ ಕಾಮತ್, "ರಾಯಚೂರು ಜಿಲ್ಲೆಯ ಪ್ರಾಚೀನ ವಿದ್ಯಾಕೇಂದ್ರಗಳು", ವಿಜಯ ಕರ್ನಾಟಕ, ದಿನಾಂಕ ೦೧.೦೯.೨೦೧೨

## ಕೋಷ್ಟಕ. ೧ ದೇವಾಲಯಗಳು

| ...ಲಯದ ಹೆಸರು | ಸ್ಥಳ | ತಲವಿನ್ಯಾಸ | ವಾಸ್ತು ಶೈಲಿ | ಕಾಲ | ಪಂಥ | ಪ್ರಕಟಣೆ |
|---|---|---|---|---|---|---|
| ...ಿಂಗ (ಈಶ್ವರ) | ಸಾನಬಾಳ | ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪ | ಕಲ್ಯಾಣಚಾಲುಕ್ಯ | ೧೦-೧೨ನೇ ಶತಮಾನ | ಶೈವ | ಕ.ದೇ. ಕೋ |
| ...ುಮಂತ | ಸಾನಬಾಳ | ಗರ್ಭಗುಡಿ, ನವರಂಗ | ವಿಜಯನಗರೋತ್ತ ರ | ೧೭-೧೮ನೇ ಶತಮಾನ | ಶೈವ/ವೈಷ್ಣವ | |
| ...ಸಿದ್ದೇಶ್ವರ | ಹೂವಿನಬಾವಿ | ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪ | ಕಲ್ಯಾಣ ಚಾಲುಕ್ಯ | ೧೨-೧೩ನೇ ಶತಮಾನ | ಶೈವ | ಕ.ದೇ. ಕೋ |
| ...ೀಮನಾಥ | ಕಾಟಿಗಲ್ಲು | ಗರ್ಭಗುಡಿ, ನವರಂಗ | ಕಲ್ಯಾಣ ಚಾಲುಕ್ಯ | ೧೨-೧೩ನೇ ಶತಮಾನ | ಶೈವ | |
| ...ದಿಮಲ್ಲಯ್ಯ | ಮಸ್ಕಿ | ಗರ್ಭಗುಡಿ | ಕಲ್ಯಾಣ ಚಾಲುಕ್ಯ | ೧೦-೧೧ನೇ ಶತಮಾನ | ಶೈವ | |
| ... ಬೆಟ್ಟದ ...ಲ್ಲಿಕಾರ್ಜುನ | ಮಸ್ಕಿ | ಗರ್ಭಗುಡಿ, ನವರಂಗ | ಕಲ್ಯಾಣ ಚಾಲುಕ್ಯ | ೧೨-೧೩ನೇ ಶತಮಾನ | ಶೈವ | ಕ.ದೇ. ಕೋ |
| ...ರಮ್ಮ/ ಬ್ರಹ್ಮ | ಮಸ್ಕಿ | ಗರ್ಭಗುಡಿ | ಕಲ್ಯಾಣ ಚಾಲುಕ್ಯ | ೧೨-೧೩ನೇ ಶತಮಾನ | ವೈಷ್ಣವ | |
| ...ಸವೇಶ್ವರ | ಮಸ್ಕಿ | ಗರ್ಭಗುಡಿ, ನವರಂಗ | ಕಲ್ಯಾಣ ಚಾಲುಕ್ಯ | ೧೨-೧೩ನೇ ಶತಮಾನ | ಶೈವ | |
| ...ರ ಚೌಡೇಶ್ವರಿ | ಮಸ್ಕಿ | ಗರ್ಭಗುಡಿ, ನವರಂಗ | ವಿಜಯನಗರೋತ್ತರ | ೧೬-೧೭ನೇ ಶತಮಾನ | ಶಾಕ್ತ | |
| ...ತ ಚೌಡೇಶ್ವರಿ | ಮಸ್ಕಿ | ಗರ್ಭಗುಡಿ, ನವರಂಗ, ಮುಖಮಂಟಪ | ಕಲ್ಯಾಣ ಚಾಲುಕ್ಯ | ೧೦-೧೧ನೇ ಶತಮಾನ | ಶಾಕ್ತ | |
| ... ವೆಂಕಟೇಶ್ವರ | ಮಸ್ಕಿ | ಗರ್ಭಗುಡಿ, ನವರಂಗ | ವಿಜಯನಗರೋತ್ತರ | ೧೬-೧೭ನೇ ಶತಮಾನ | ವೈಷ್ಣವ | |
| ...ನೌನೇಶ್ವರ | ಮಸ್ಕಿ | ಗರ್ಭಗುಡಿ, ಅಂತರಾಳ, ನವರಂಗ | ವಿಜಯನಗರೋತ್ತರ | ೧೭-೧೮ನೇ ಶತಮಾನ | ಶಾಕ್ತ | |
| ...ೀರಭದ್ರ | ಮಸ್ಕಿ | ಗರ್ಭಗುಡಿ | ವಿಜಯನಗರೋತ್ತರ | ೧೭-೧೮ನೇ ಶತಮಾನ | ಶೈವ | |

* ಕ.ದೇ.ಕೋ– ಕರ್ನಾಟಕ ದೇವಾಲಯ ಕೋಶ, ರಾಯಚೂರು ಜಿಲ್ಲೆ

## ಕೋಷ್ಟಕ. ೨
## ಶಾಸನಗಳು

| ...ಮನೆತನ | ಅರಸ | ಶಾಸನಇರುವ ಸ್ಥಳ | ಶಾಸನದಕಾಲಮಾನ | ಪ್ರಕಟಣೆ |
|---|---|---|---|---|
| ...ರ್ಯ | ಅಶೋಕ | ಮಸ್ಕಿ ದುರ್ಗದ ಬೆಟ್ಟದ ದಕ್ಷಿಣ ಭಾಗ | – | *H.A.S. No-1, I.K.4 No.108,* ಕ.ವಿ.ವಿ ಸಂ ೭ |
| ...ಚಾಲುಕ್ಯರು | ಜಗದೇಕಮಲ್ಲು | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕ್ರಿ.ಶ. ೧೦೩೭ | *A.R. No.B 248 of 1953-54, I.K.No 101,* ಕ.ವಿ.ವಿ ಸಂ ೭ |
| ...ಚಾಲುಕ್ಯರು | ಜಗದೇಕಮಲ್ಲ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕ್ರಿ.ಶ. ೧೦೩೨ | *A.R.No.B 246 of 1953-54, I.K. 4 No-99,* ಕ.ವಿ.ವಿ ಸಂ ೭ |
| ...ಚಾಲುಕ್ಯರು | ಇಮ್ಮಡಿಜಯಸಿಂಹ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕ್ರಿ.ಶ. ೧೦೧೦ | *H.A.S. Vol 14. No.2, I.K.4 No.97,* ಕ.ವಿ.ವಿ ಸಂ ೭ |
| ...ಚಾಲುಕ್ಯರು | ಪೋತಿಶೆಟ್ಟಿ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕ್ರಿ.ಶ. ೧೦೧೮ | *A.R.No.B.245 of 1953-54, I.K.4 No.98* |
| ...ಚಾಲುಕ್ಯರು | ಶಾಂತರಸ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | – | ಕ.ವಿ.ವಿ ಸಂ ೭ |
| ...ನಗರದ ಅರಸರು | ಅಚ್ಯುತರಾಯ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕ್ರಿ.ಶ. ೧೫೩೭ | ಕ.ವಿ.ವಿ ಸಂ ೭ |
| ...ನಗರದ ಅರಸರು | ಅಚ್ಯುತರಾಯ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕ್ರಿ.ಶ. ೧೫೩೭ | *APGAS.Vol.9, No.10, I.K.4 No.112,* ಕ.ವಿ.ವಿ.ಸಂ೭ |
| ...ಚಾಲುಕ್ಯರು | ಜಗದೇಕಮಲ್ಲು | ಹೈದ್ರಾಬಾದನ ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ | ಕ್ರಿ.ಶ. ೧೦೨೭ | *H.A.S.No.14.No.3, I.K.No.109,* ಕ.ವಿ.ವಿ ಸಂ ೭ |
| ...ಚಾಲುಕ್ಯರು | ಜಗದೇಕಮಲ್ಲ | ಸುಂಕನೂರು | ಕ್ರಿ.ಶ. ೧೦೩೨ | ಕ.ವಿ.ವಿ ಸಂ ೭ |
| ...ಗರದ | ಸದಾಶಿವರಾಯ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕ್ರಿ.ಶ. ೧೫೪೭ | *A.R.No.B.243 of 1953-54, APGAS.Vol.9 No 12, I.K.4 No.96* |
| ...ೀಳರು | ೧ನೇ ರಾಜೇಂದ್ರ ಚೋಳ | ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನ ಹಿಂದೆ | – | ಅಪ್ರಕಟಿತ (ವಿಜಯಕರ್ನಾಟಕ ದಿನಪತ್ರಿಕೆ) |
| ...ಗರೋತ್ತರ | – | ಮುದಗಲ್ಲ ರಸ್ತೆ | ಕ್ರಿ.ಶ.೧೭ನೇ ಶತಮಾನ | ಅಪ್ರಕಟಿತ (ವಿಜಯಕರ್ನಾಟಕ ದಿನಪತ್ರಿಕೆ) |

## ಕೋಷ್ಟಕ. ೩ ಮೂರ್ತಿಶಿಲ್ಪಗಳು

| ಮೂರ್ತಿಶಿಲ್ಪದಹೆಸರು | ದೊರೆತ ಸ್ಥಳ | ಸ್ಥಿತಿ | ಸ್ಮಾರಕದ ಕಾಲ | ಭಂಗಿ | ಪಂಥ |
|---|---|---|---|---|---|
| ವೀರಭದ್ರ | ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ | ಉತ್ತಮ | ವಿಜಯನಗೋತ್ತರ | ಸ್ಥಾನಿಕ | ಶೈವ |
| ವೀರಭದ್ರ | ನೀರ್ ಅಗಸಿ ಆಂಜನೇಯ ದೇವಸ್ತಾನದ ಆವರಣ | ತೃಟಿತ | ವಿಜಯನಗೋತ್ತರ | ಸ್ಥಾನಿಕ | ಶೈವ |
| ಸಪ್ತಮಾತೃಕೆಯರು | ಬೋರಮ್ಮ ದೇವಸ್ಥಾನದ ಗರ್ಭಗುಡಿಯಲ್ಲಿ | ಮಧ್ಯಮ | ಕಲ್ಯಾಣ ಚಾಲುಕ್ಯ | ಆಸೀನ | ಶೈವ |
| ಮಲ್ಲಿಕಾರ್ಜುನ | ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಗರ್ಭಗುಡಿಯಲ್ಲಿ | ಉತ್ತಮ | ಕಲ್ಯಾಣ ಚಾಲುಕ್ಯರು | – | ಶೈವ |
| ಗುಂಡ ಬ್ರಹ್ಮಯ್ಯ | ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಮುಂಭಾಗದಲ್ಲಿ | ಮಧ್ಯಮ | ಕಲ್ಯಾಣ ಚಾಲುಕ್ಯರು | ಆಸೀನ | ಶೈವ |
| ಶಿವ | ಹೂವಿನಬಾವಿ ಗವಿಸಿದೇಶ್ವರದ ಪುಷ್ಕರಣಿಯ ಮೇಲ್ಭಾಗದಲ್ಲಿ | ಮಧ್ಯಮ | ಕಲ್ಯಾಣ ಚಾಲುಕ್ಯರು | ಸ್ಥಾನಿಕ | ಶೈವ |
| ಶಿವಲಿಂಗ | ಸಾನಬಾಳ ರಾಮಲಿಂಗ ದೇವಸ್ಥಾನದ ಗರ್ಭಗುಡಿಯಲ್ಲಿ | ಮಧ್ಯಮ | ಕಲ್ಯಾಣ ಚಾಲುಕ್ಯರು | – | ಶೈವ |
| ಶಿವ–ಪಾರ್ವತಿ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಮಧ್ಯಮ | ಕಲ್ಯಾಣ ಚಾಲುಕ್ಯರು | ಆಸೀನ | ಶೈವ |
| ಗಜಲಕ್ಷ್ಮೀ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಮಧ್ಯಮ | ಕಲ್ಯಾಣ ಚಾಲುಕ್ಯರು | ಆಸೀನ | ಶೈವ |
| ತೀರ್ಥಂಕರ | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಮಧ್ಯಮ | ಕಲ್ಯಾಣ ಚಾಲುಕ್ಯರು | ಆಸೀನ | ಜೈನ |


## ಕೋಷ್ಟಕ. ೪

## ಸ್ಮಾರಕ ಶಿಲ್ಪಗಳು


| ಸ್ಮಾರಕ ಶಿಲ್ಪ | ದೊರೆಯುವ ಸ್ಥಳ | ಅರಸು ಮನೆತನ |
|---|---|---|
| ಬಂದೂಕು ವೀರಗಲ್ಲು | ನಂಜಲದಿನ್ನಿ ಗ್ರಾಮದೊಳಗೆ ಬರುವ ಮುಖ್ಯರಸ್ತೆಯಲ್ಲಿ (ಹನುಮನಗೌಡರ ಮನೆಯ ಮುಂದೆ) | ವಿಜಯನಗರೋತ್ತರ |
| ವೀರಗಲ್ಲು | ನಂಜಲದಿನ್ನಿಯ ತಿಮ್ಮಣ ತಲೆಖಾನರವರ ಮನೆಯ ಹಿಂದೆ | ವಿಜಯನಗರೋತ್ತರ |
| ವೀರಗಲ್ಲು | ನಂಜಲದಿನ್ನಿ ತಿಮ್ಮಣ ತಲೆಖಾನರವರ ಮನೆಯ ಹಿಂದೆ | ವಿಜಯನಗರೋತ್ತರ |
| ಬಂದೂಕು ವೀರಗಲ್ಲು | ನಂಜಲದಿನ್ನಿ ತಿಮ್ಮಣ ತಲೆಖಾನರವರ ಮನೆಯ ಹಿಂದೆ | ವಿಜಯನಗರೋತ್ತರ |
| ವೀರಗಲ್ಲು | ನಂಜಲದಿನ್ನಿ ತಿಮ್ಮಣ ತಲೆಖಾನರವರ ಮನೆಯ ಹಿಂದೆ | ವಿಜಯನಗರೋತ್ತರ |
| ವೀರಗಲ್ಲು | ನಂಜಲದಿನ್ನಿ ತಿಮ್ಮಣ ತಲೆಖಾನರವರ ಮನೆಯ ಹಿಂದೆ | ವಿಜಯನಗರೋತ್ತರ |
| ವೀರಗಲ್ಲು | ನಂಜಲದಿನ್ನಿ ದೇವಪುತ್ರಪ್ಪನ ಮನೆಯ ಮುಂದೆ | ವಿಜಯನಗರ ಅರಸರು |
| ವೀರಗಲ್ಲು | ಮಸ್ಕಿಯ ನೀರ್ ಅಗಸಿಯ ಮುಂದೆ | ವಿಜಯನಗರ ಅರಸರು |
| ವೀರಗಲ್ಲು | ಮಸ್ಕಿಯ ನೀರ್ ಅಗಸಿಯ ಮುಂದೆ | ವಿಜಯನಗರ ಅರಸರು |
| ವೀರಗಲ್ಲು | ಮಸ್ಕಿಯ ನೀರ್ ಅಗಸಿಯ ಮುಂದೆ | ವಿಜಯನಗರ ಅರಸರು |
| ವೀರಗಲ್ಲು | ಮಸ್ಕಿಯ ನೀರ್ ಅಗಸಿಯ ಮುಂದೆ | ವಿಜಯನಗರ ಅರಸರು |
| ವೀರಗಲ್ಲು | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ಕಲ್ಯಾಣ ಚಾಲುಕ್ಯರು |
| ವೀರಗಲ್ಲು | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ವಿಜಯನಗರ ಅರಸರು |
| ವೀರಗಲ್ಲು | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ವಿಜಯನಗರ ಅರಸರು |
| ವೀರಮಾಸ್ತಿಗಲ್ಲು | ಮಸ್ಕಿಯ ನಿರೀಕ್ಷಣ ಮಂದಿರದೊಳಗೆ | ವಿಜಯನಗರ ಅರಸರು |
| ವೀರಗಲ್ಲು | ಸಾನಬಾಳ ಸರಕಾರಿ ಶಾಲೆಯ ಆವರಣ | ವಿಜಯನಗರೋತ್ತರ |

| | | |
|---|---|---|
| ವೀರಗಲ್ಲು | ಕಾಟ್ಟಿಗಲ್ಲನ ಸಮುದಾಯ ಭವನದ ಮುಂದೆ | ಕಲ್ಯಾಣ ಚಾಲುಕ್ಯರು |
| ವೀರಗಲ್ಲು | ಕಾಟ್ಟಿಗಲ್ಲನ ಸಮುದಾಯ ಭವನದ ಮುಂದೆ | ಕಲ್ಯಾಣ ಚಾಲುಕ್ಯರು |
| ಬಂದೂಕು ವೀರಗಲ್ಲು | ಕಾಟ್ಟಿಗಲ್ಲನ ಸಮುದಾಯ ಭವನದ ಮುಂದೆ | ವಿಜಯನಗರ ಅರಸರು |
| ವೀರಮಾಸ್ತಿಗಲ್ಲು | ಕಾಟ್ಟಿಗಲ್ಲನ ಸಮುದಾಯ ಭವನದ ಮುಂದೆ | ವಿಜಯನಗರೋತ್ತರ |
| ವೀರಮಾಸ್ತಿಗಲ್ಲು | ಕಾಟ್ಟಿಗಲ್ಲನ ಸಮುದಾಯ ಭವನದ ಮುಂದೆ | ವಿಜಯನಗರೋತ್ತರ |
| ಬಂದೂಕು ವೀರಗಲ್ಲು | ಕಾಟಿಗಲ್ಲನ ಸೋಮನಾಥ ದೇವಾಲಯದ ಮುಂದೆ | ವಿಜಯನಗರೋತ್ತರ |
| ವೀರಗಲ್ಲು | ಕಾಟಿಗಲ್ಲನ ಸೋಮನಾಥ ದೇವಾಲಯದ ಮುಂದೆ | ವಿಜಯನಗರೋತ್ತರ |
| ವೀರಗಲ್ಲು | ಕಾಟಿಗಲ್ಲನ ಸೋಮನಾಥ ದೇವಾಲಯದ ಮುಂದೆ | ವಿಜಯನಗರೋತ್ತರ |
| ವೀರಗಲ್ಲು | ಕಾಟಿಗಲ್ಲನ ಸೋಮನಾಥ ದೇವಾಲಯದ ಮುಂದೆ | ವಿಜಯನಗರೋತ್ತರ |
| ಹಂದಿಬೇಟೆ ವೀರಗಲ್ಲು | ಕಾಟಿಗಲ್ಲನ ಸೋಮನಾಥ ದೇವಾಲಯದ ಆವರಣ | ಕಲ್ಯಾಣ ಚಾಲುಕ್ಯರು |
| ಹಂದಿಬೇಟೆ ವೀರಗಲ್ಲು | ಕಾಟಿಗಲ್ಲನ ಸೋಮನಾಥ ದೇವಾಲಯದ ಆವರಣ | ಕಲ್ಯಾಣ ಚಾಲುಕ್ಯರು |
| ವೀರಗಲ್ಲು | ಹುಲ್ಲೂರಿನ ದುರುಗಮ್ಮನ ಗುಡಿಯ ಮುಂದೆ | ಕಲ್ಯಾಣ ಚಾಲುಕ್ಯರು |
| ವೀರಗಲ್ಲು | ಕ್ಯಾತನಹಟ್ಟಿಯ ಹನುಮಂತನ ಗುಡಿಯ ಮುಂದೆ | ಕಲ್ಯಾಣ ಚಾಲುಕ್ಯರು |
| ಲಿಂಗಮುದ್ರೆಕಲ್ಲು | ಸುಂಕನೂರು ಗ್ರಾಮ | ಕಲ್ಯಾಣ ಚಾಲುಕ್ಯರು |
| ಲಿಂಗಮುದ್ರೆಕಲ್ಲು | ನಂಜಲದಿನ್ನಿ ಗ್ರಾಮದ ಅಮರಯ್ಯಸ್ವಾಮಿಯ ಹೊಲ ಬದುವಿನಲ್ಲಿ | ವಿಜಯನಗರೋತ್ತರ |
| ಲಿಂಗಮುದ್ರೆಕಲ್ಲು | ನಂಜಲದಿನ್ನಿಯ ಸಣ್ಣ ದುರುಗಪ್ಪನ ಹೊಲದಲ್ಲಿ | ವಿಜಯನಗರೋತ್ತರ |


## ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನ ಮಸ್ಕಿ




## ಬಸವೇಶ್ವರ ದೇವಸ್ಥಾನ ಮಸ್ಕಿ




# ಕಲ್ಗುಡಿ ಚೌಡೇಶ್ವರಿ ದೇವಸ್ಥಾನ ಮಸ್ಕಿ






ಗವಿಸಿದ್ಧೇಸ್ವರ ದೇವಸ್ಥಾನ ಹೂವಿನಬಾವಿ




ರಾಮಲಿಂಗ (ಈಶ್ವರ) ದೇವಸ್ಥಾನ ಸಾನಬಾಳ



ಮಸ್ಕಿ ಅಶೋಕನ ಶಾಸನದ ಹೋರನೋಟ



ಮಸ್ಕಿ ಅಶೋಕನ ಶಾಸನದ ಒಳನೋಟ





ನಂಜಲದಿನ್ನಿ ಗ್ರಾಮದಲ್ಲಿರುವ ವೀರಗಲ್ಲುಗಳು



ಸಾನಬಾಳ ಗ್ರಾಮದ ಈಶ್ವರ ದೇವಸ್ಥಾನದ ಭುವನೇಶ್ವರಿ ಭಾಗ



ಸಾನಬಾಳ ಗ್ರಾಮದ ವೀರಗಲ್ಲು




ಹೂವಿನಬಾವಿ ಗ್ರಾಮದ ಗವಿಸಿದ್ಧೇಶ್ವರ ದೇವಾಲಯದ ನವರಂಗಭಾಗ

ಗವಿಸಿದ್ಧೇಶ್ವರದ ದೇವಸ್ಥಾನದ ಶಿಖರಭಾಗ






ಸಾನಬಾಳ ಗ್ರಾಮದ ಕೋಟೆಯ ಪ್ರವೇಶದ್ವಾರ



ಸಾನಬಾಳ ಗ್ರಾಮದ ಹನುಮಂತ ಗುಡಿಯ ಪ್ರವೇಶದ್ವಾರ



ಮಸ್ಕಿಯ ನೀರ್‌ಅಗಸಿ ಮುಂದಿನ ವೀರಗಲ್ಲುಗಳು



ನಂಜಲದಿನ್ನಿ ಗ್ರಾಮದಲ್ಲಿ ಕಂಡುಬರುವ ಬಂದೂಕು ವೀರಗಲ್ಲು



ಮಸ್ಕಿ ಮಲ್ಲಿಕಾರ್ಜುನ ದೇವಸ್ಥಾನದ ಹೊರಭಾಗ




ಮಸ್ಕಿಮಲ್ಲಿಕಾರ್ಜುನ ದೇವರ ವಿಗ್ರಹ



ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿಯಲ್ಲಿರುವ ವಿಷ್ಣುವಿನ ಶಿಲ್ಪ



ಮಲ್ಲಿಕಾರ್ಜುನ ದೇವಾಲಯದ ಹೊರಭಿತ್ತಿಯಲ್ಲಿರುವ ಗಂಡಬೇರುಂಢ ಶಿಲ್ಪ



ಮಸ್ಕಿ ಬೆಟ್ಟದ ಚೌಡೇಶ್ವರಿ ದೇವಸ್ಥಾನದ ಹೊರನೋಟ






ಮಸ್ಕಿಯ ಪ್ರವಾಸಿ ಮಂದಿರದ ಆವರಣದಲ್ಲಿರುವ ಸ್ಮಾರಕಗಳು





ಮಸ್ಕಿಯ ಕಲ್ಗುಡಿ ಚೌಡೇಶ್ವರಿ ದೇವಸ್ಥಾನದ ಮುಂಭಾಗ ಮತ್ತು ಹೊರಭಿತ್ತಿ ಭಾಗ





ಕಾಟಿಗಲ್ಲು ಗ್ರಾಮದ ಸೋಮನಾಥ ದೇವಾಲಯದ ಆವರಣದಲ್ಲಿರುವ ಹಂದಿಬೇಟೆ ವೀರಗಲ್ಲು ಶಿಲ್ಪ









ನಂಜಲದಿನ್ನಿ ಗ್ರಾಮದಲ್ಲಿ ದೊರೆತ ನವಶಿಲಾಯುಗದ ಮಡಿಕೆಗಳು






ಮಸ್ಕಿಯಲ್ಲಿ ದೊರೆತ ಮಡಿಕೆಗಳು



ಮಸ್ಕಿಯಲ್ಲಿ ದೊರೆತ ನವಶಿಲಾಯುಗದ ಮಾನವನ ಮೂಳೆಗಳು, ಮೇಲ್ಭಾಗದ ವಸಡು ಮತ್ತು ಹಲ್ಲುಗಳು



ಹೂವಿನಬಾವಿ ಗ್ರಾಮದ ಗವಿಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿರುವ ಬಾವಿ (ಪುಷ್ಕರಣಿ)



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ